ಅನಿವಾಹಕರು: ಶ್ರೀ. ರಂಗನಾಥ ದಿವಾಕರ [illegible] ಸಾಹಿತ್ಯ ಭಂಡಾರ ಹುಬ್ಬಳ್ಳಿ

ಕರ್ಮವೀರ

[illegible] ಸಾಹಿತ್ಯ ಭಂಡಾರ ಹುಬ್ಬಳ್ಳಿ

ಸಂಪಾದಕರು: ಹ. ರಾ. ಪುರೋಹಿತ, ಎಂ. ಏ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor, H. R. PUROHIT, M. A.

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೪—೩—೧೯೪೮ — [ಸಂಚಿಕೆ ೪೮] —

ರಾಷ್ಟ್ರಗಳ ಸುರಕ್ಷಿತತೆಯ ಮಾತು ಬರಿಯ ಕಟ್ಟುಕತೆ

ಮಾನವನ ಯುದ್ಧನಿರೋಧ ಪ್ರಯತ್ನ — ಆಕ್ರಮಣದ ಪೂರ್ವಗ್ರಹ — ಅತಿ ಸಿದ್ಧತೆಯ ದುಷ್ಪರಿಣಾಮ — ಸಮರ ನೀತಿಯಲ್ಲಿಯ ನಿರ್ದಯತೆ- ಶಾಂತಿಸಂಸ್ಕಾರದ ಅವಶ್ಯಕತೆ-

ಯುದ್ಧವೊಂದು ವಿಜ್ಞಾನವಲ್ಲವೆಂದೂ ಅದೊಂದು ಕಲೆಯೆಂದೂ ತಿಳಿಯಬೇಕು. ಅದು ವಿಜ್ಞಾನಗಳನ್ನು ತನ್ನೊಳಗೆ ಅಡಕ ಮಾಡಿಕೊಂಡು, ಅವಕ್ಕೆ ಬಣ್ಣ ಕೊಟ್ಟು, ಅವೆಲ್ಲವನ್ನೂ ಮೀರಿ ನಿಲ್ಲುತ್ತದೆ. ಇದು ಇಡಿಗಾಳಿಗದ ಕಾಲ. ಇಲ್ಲಿ ರಾಷ್ಟ್ರಗಳ ಸುರಕ್ಷಿತತೆಗೆ ಅರ್ಥವಿಲ್ಲ. ಅದಕ್ಕಾಗಿ ಯುದ್ಧೋಪಕರಣಗಳನ್ನು ರಾಶಿರಾಶಿಯಾಗಿ ಅಮೇರಿಕದಂತೆ ತಯಾರಿಸಿ ಒಟ್ಟುವುದು ಬೀದಿಯ ಮಾರಿಯನ್ನು ಮನೆಗೆ ಕರೆದಂತೆಯೇ ಸರಿ. ಇಂದಿನ ಯುದ್ಧದಲ್ಲಿ ಗೆಲ್ಲುವುದು ಸೈನ್ಯಬಲವಲ್ಲ; ದೊಡ್ಡ ದೊಡ್ಡ ಕಾರಖಾನೆಗಳು! ಕಡೆಯತನಕ ಯುದ್ಧ ಸಂಭವಿಸದಂತೆ ಮಾಡಬೇಕಾದರೆ ಮಾನವನು ಶಾಂತಿಪಾಠ ಕಲಿಯಬೇಕು. ಯುದ್ಧ ವಿರುದ್ಧಪ್ರವೃತ್ತಿಯು ಶಾಂತಿಸಂಸ್ಕಾರದಿಂದಲ್ಲದೆ ಮಿಕ್ಕ ಸಾಧನಗಳಿಂದ ಉಂಟಾಗದು. ಸೈನ್ಯಮಯ ರಾಜ್ಯವೆಂದರೆ ಪ್ರಜಾಸತ್ತೆಯ ಮಸಣ— ಎಂದು "ಫಾರಿನ್ ಅಫೇರ್ಸ್"ನಲ್ಲಿ ಅಮೇರಿಕದ ಸುಪ್ರಸಿದ್ಧ ಬರಹಗಾರರಾದ ಶ್ರೀ ಹ್ಯಾನ್ಸನ್ ಡಬ್ಲ್ಯು ಬಾಲ್ಡ್ವಿನ್ನರು ತರ್ಕಬದ್ಧವಾಗಿ ಪ್ರತಿಪಾದಿಸುತ್ತಾರೆ.

'ಆತ್ಮರಕ್ಷಣೆ' ಎಂಬ ಶಬ್ದವನ್ನು ಆಧುನಿಕ ಸಮರದ ಸಾಧನ ಮತ್ತು ಪದ್ಧತಿಗಳೊಂದಿಗಿಡುವುದರಲ್ಲಿ ಮೂಲ ಭೂತವಾದ ಒಂದು ವ್ಯಾಹತಿಯಿದೆ. ಪರಮಾಣು ಬಾಂಬು, ದೂರ ಪ್ರಯಾಣದ ವಿಮಾನ, ರಾಕ್ಷಸಬಲದ ಆಕಾಶ ಬಾಣ ಮುಂತಾದವು 'ಸುರಕ್ಷಿತತೆ'ಯ ಎಷ್ಟೋ ಕಲ್ಪನೆಗಳನ್ನು ನಾಶಗೊಳಿಸಿಬಿಟ್ಟಿವೆ. ಆದುದರಿಂದ ಸಮರ ನೀತಿಯ ಆಳತೆಗೋಲಿನಿಂದ ಆತ್ಮರಕ್ಷಣೆಯನ್ನು ಅಳೆದರೆ ಅದು ಪ್ರತೀಕಾರದ ಪ್ರತಿಬಿಂಬವೇ ಆಗಿ ಪರಿಣಮಿಸಿದೆಯೆಂಬುದು ಸ್ಪಷ್ಟವಾಗುತ್ತದೆ. ಆತ್ಮರಕ್ಷಣೆಗಾಗಿ ಮಾಡಿದ ಶೋಧದಲ್ಲಿ ಮಾನವನು ಅವಕಾಶದ ಮಿತಿಯನ್ನು ಮಿಕ್ಕಿ ಮುಂಬರಿದು ನಿಸರ್ಗದ ಎಷ್ಟೋ ರಹಸ್ಯಗಳನ್ನು ಬಯಲಿಗೆಳೆದುಬಿಟ್ಟಿದ್ದಾನೆ. ಆದರೆ ಅದರಿಂದ ಅವನು ಮೊದಲಿಗಿಂತ ಸುರಕ್ಷಿತತೆಯಲ್ಲಿ ಕಾಲ ಮಟ್ಟಿಕ್ಕಿಲ್ಲದಿರುವುದೊಂದು ವ್ಯಂಗ್ಯದ ಸಂಗತಿಯಾಗಿದೆ. ರಾಷ್ಟ್ರಭಾವನೆ ಬೆಳೆದ ರಾಜ್ಯಗಳ ಉದಯ, ಜನಸಂಖ್ಯೆಯ ವೃದ್ಧಿ, ಔದ್ಯೋಗಿಕ ಕ್ರಾಂತಿ ಮತ್ತು ಹೊಸ ತಾಂತ್ರಿಕ ಕ್ರಾಂತಿ ಇವು ಯುದ್ಧವನ್ನು 'ಸಂಪೂರ್ಣತೆ'ಗೊಯ್ದು ಮುಟ್ಟಿಸಿವೆ. ಇಂದಿನ ಯುದ್ಧಕ್ರಮದ ವಾಸ್ತವ ಪರಿಣಾಮಕ್ಕೂ 'ಆತ್ಮರಕ್ಷಣೆ'ಗೂ ಯಾವ ಹೊಂದಿಕೆಯೂ ಇಲ್ಲ; ಮತ್ತು ಒಂದು ರಾಷ್ಟ್ರದ ಸಮರ ನೀತಿಯು ವಿಚಾರ ಸರಣಿಯಲ್ಲಿ ಪ್ರಧಾನ ಪಾತ್ರವಹಿಸಿದರೆ, ಅದು ಸೋಲು, ಎಂಬ ಶಬ್ದಕ್ಕೆ ಸಮಾನಾರ್ಥಕವೆನಿಸುತ್ತದೆ. ಮಿತವ್ಯಯದ, ಆತ್ಮರಕ್ಷಣನಿಷ್ಠ ಸಮರ ನೀತಿಯ, ಇಲ್ಲವೆ ರಾಜತಂತ್ರದ ಯಾವ ತತ್ವವೂ ನಾಳಿನ ಯುದ್ಧವನ್ನು ಗೆಲ್ಲಲಾರದು.

ಅಮೇರಿಕನ್ನರ ಸಮಸ್ಯೆ

ಯುದ್ಧದ ಕೆಲವು ಭಯಂಕರ ಕೃತ್ಯಗಳನ್ನು ಬಹಿಷ್ಕರಿಸ ಮತ್ತು ಅದರ ವಿನಾಶಕತೆಯನ್ನು ಒಂದು ಮಿತಿಗೆ ಒಳಪಡಿಸುವ ಮಾನವ ಪ್ರಯತ್ನಗಳು ಅಧಿಕಾರವಿಲ್ಲದ ಪ್ರಭುಸಾಮರ್ಥ್ಯವನ್ನು ವಾಸ್ತವ ಸ್ಥಿತಿಗೆ ಹೊಂದಿಸಿದ ಹೊರತು ಯಶಸ್ವಿಗೊಳಿಸವು. ನೈತಿಕ ಕಾರಣಗಳಾದ ಅದೃಶ್ಯ ಶಕ್ತಿಗಳ ಉಬ್ಬರ ಮತ್ತು ರಾಷ್ಟ್ರೀಯ ಪ್ರವಾಹ, ಇಚ್ಛಾಶಕ್ತಿಯ ಉತ್ಸರ್ಗ, ಅಧ್ಯಾತ್ಮಿಕ ಸಂಗತಿಗಳು, ಮನುಷ್ಯನ ಸರಿ ಮತ್ತು ತಪ್ಪಿನ ತಿಳಿವಳಿಕೆ ಇವು ವಾಸ್ತವ ಸಂಗತಿಗಳಿರುವುದರಿಂದ ಪ್ರಾಯೋಗಿಕವೆಂದು ಹೇಳಿಕೊಳ್ಳುವ ಯಾವುದರ ಸಾಮರ್ಥ್ಯವನ್ನು ಅಳೆವಾಗಲೂ ಅವನ್ನು ಮರೆತುಬಿಡಲಾಗದು. ಆದರೆ ಆಕ್ರಮಣದ ವಿರುದ್ಧ ಇಂದು ಇರುವ ಪ್ರತ್ಯಸ್ತ್ರವೆಂದರೆ ಮಾಡಿದ್ದಕ್ಕೆ ಪ್ರತಿಯಾಗಿ ಮಾಡುವುದು ಹೇಗೆಂಬುದೇ. ಹಾಗೆ ಪ್ರತ್ಯಸ್ತ್ರವನ್ನು ಪ್ರಯೋಗಿಸುವುದು ಹೇಗೆಂಬುದೇ ಅಮೇರಿಕದ ಇಂದಿನ ಸಮರನೀತಿಯ ಸಮಸ್ಯೆಯಾಗಿದೆ.

ಅಮೇರಿಕನ್ನರ ಪರಾಕ್ರಮಣ ಶಂಕೆ ನಿರಾಧಾರವಾದುದೆಂಬುದಕ್ಕೆ ಬಲವಾದ ಕಾರಣಗಳಿವೆ. ಅವರ ತರ್ಕದಲ್ಲಿಯ ೬ ಹೇತ್ವಾಭಾಸಗಳು ಈ ಕೆಳಗಿನಂತಿವೆ:

ಶಾಂತತೆ ಸಂಸ್ಕಾರದಿಂದ ಬರತಕ್ಕದ್ದು

ಮೊದಲನೆಯದಾಗಿ, ಶಾಂತಿಯನ್ನು ಸಕಲ ರಾಷ್ಟ್ರವೊಂದು ರಾತ್ರಿ ಬೆಳಗಾಗುವುದರೊಳಗೆ ಅತಿ ಸುಲಭವಾಗಿ ಸಂಪಾದಿಸಿಬಿಡಬಹುದು ಎಂಬ ಕಲ್ಪನೆ; ಹಾಗೆ ಸಂಪಾದಿಸಲು ತಾವು ಶಾಂತಿಪಕ್ಷೀಯರೆಂದು ಸಾರಿಬಿಟ್ಟರೆ ಆಗಿಹೋಯಿತೆಂದು ಅವರು ತಿಳಿದುಕೊಂಡಿದ್ದಾರೆ. ಇದೊಂದು ಹುಚ್ಚು ಭಾವನೆ— ಯುದ್ಧರಹಿತ ಜಗತ್ತು ಎಂಬುದು ಹಿಂದಿನ ಅನೇಕ ಪೀಳಿಗೆಗಳ ಧ್ಯೇಯವಾಗಿತ್ತು. ಅದು ಯಾವಾಗಲೂ ಆಶಿಸುತ್ತ ಕುಳಿತುಕೊಳ್ಳಬೇಕಾದ ಸಾಫಲ್ಯ. ಏಕೆಂದರೆ ನಮ್ಮ ತಲೆಮಾರಿನಲ್ಲಿ ಯುದ್ಧ ನಿಲ್ಲುವ ಲಕ್ಷಣವೇನೂ ಕಂಡುಬರುವದಿಲ್ಲ. ಶಾಂತಿಯೆಂಬುದೊಂದು ವಿದ್ಯೆ; ಆ ವಿದ್ಯೆಯನ್ನು ಮನುಷ್ಯನು ನಿಧಾನವಾಗಿ ಕಲಿಯುತ್ತಾನೆ. ಪ್ರತಿಯೊಂದು ಪೀಳಿಗೆಯೂ ಹಿಂದಿನ ತಲೆಮಾರಿನ ಕೆಲವೊಂದು ಕಟು ಪಾಠಗಳನ್ನು ಪುನಃ ಅಭ್ಯಾಸಮಾಡಬೇಕಾಗಿದೆಯೆಂದು ತೋರುತ್ತದೆ ಆದರೆ ಅಲ್ಲಿ ಪ್ರಗತಿಯಿದೆಯೆಂಬುದನ್ನು ಅಲ್ಲಗಳೆವಂತಿಲ್ಲ. ಹಿಂದಿನ 'ಲೀಗ್ ಆಫ್ ನೇಶನ್ಸ'ಗಿಂತ ಇಂದಿನ ಸಂಯುಕ್ತ ರಾಷ್ಟ್ರ ಸಂಘವು ಭದ್ರತರವಾಗಿದೆ. ಆದುದರಿಂದ ಅತ್ಯಂತಿಕ ನಿರಾಶೆಗೆ ಕಾರಣವಿಲ್ಲ. ಅಧಃನಿಕ ಯುದ್ಧದ ವ್ಯಾಪ್ತಿ ಮತ್ತು ಅದರ ಮಾರಕೋಪಕರಣಗಳ ಭೀಕರತೆ ಇವೇ ಸ್ವತಃ ಯುದ್ಧದ ಉಪದ್ವ್ಯಾಪವನ್ನು ತಡೆಹಿಡಿಯಬಲ್ಲವು. ಆದರೂ ಯಾವ ರಾಷ್ಟ್ರವೂ ಕೇವಲ ಆ ತಳಹದಿಯ ಮೇಲೆ ತನ್ನ ಧೋರಣೆಯನ್ನು ಕಟ್ಟಿಲ್ಲ.

ಸಂಪೂರ್ಣ ಸಿದ್ಧತೆಯೆಂಬುದಿಲ್ಲ

ಎರಡನೆಯದಾಗಿ ಪ್ರತಿಯೊಂದು ಸಲವೂ ನಾವು ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದಿಲ್ಲವೆಂಬ ದನಿಯು ಬೇಸರ ಬರುವಷ್ಟು ಕೇಳಬರುತ್ತದೆ. ಇದು ಒಂದು ಹೇತ್ವಾಭಾಸ. ಏಕೆಂದರೆ ಸಿದ್ಧತೆಯೆಂಬುದು ಪರಸ್ಪರ ಸಂಬಂಧ ಜನ್ಯವು. ಯಾರಿಗಿಂತ ಮತ್ತು ಯಾವ ಕಾಲದಲ್ಲಿದ್ದುದಕ್ಕಿಂತ ಹೆಚ್ಚು ಸಿದ್ಧತೆಯಾಗಬೇಕಿತ್ತೆಂದು ಹೇಳಬರುತ್ತದಲ್ಲದೆ, ಸಂಪೂರ್ಣ ಸಿದ್ಧತೆಯೆಂಬುದು ಅತ್ಯಂತಿಕ ಅಸಾಧ್ಯವೇ ಸರಿ. ಹಾಗೆ ನೋಡಿದರೆ ನಾವು ಸದಾ ಅಸಿದ್ಧರೇ. ಪೋಲೆಂಡಿನೊಡನೆ ಯುದ್ಧ ಹೂಡಲು ಜರ್ಮನಿಯು ಸಿದ್ಧವಿತ್ತು; ಆದರೆ ತನ್ನೊಳಕ ಆದರ ತಲೆಯ ಮೇಲೆ ಕವಚಿಕೊಂಡ ಜಾಗತಿಕ ಯುದ್ಧಕ್ಕೆ ಅದು ಸಿದ್ಧವಿದ್ದಿಲ್ಲ. ಸರ್ವಾಧಿಕಾರಿಗಳು ರಾಷ್ಟ್ರಕೂಡ— ಪ್ರಜಾಸತ್ತೆಗಳನ್ನಂತೂ ಹೇಳುವುದೇ ಬೇಡ— ಶಾಂತಿ ಕಾಲದಲ್ಲಿ ಅತ್ಯಂತಿಕ ಸಿದ್ಧತೆಯು ದಾಲತನ್ನು ಇಟ್ಟುಕೊಳ್ಳುವುದು ಅಸಾಧ್ಯವೇ ಸರಿ.

ಸಂಪೂರ್ಣ ಸಿದ್ಧತೆಯೆಂಬುದೊಂದು ಬಿಸಿಲುಗುದುರೆ. ಅದನ್ನು ಸಾಧಿಸ ಹೋದ ಪ್ರತಿಯೊಂದು ರಾಜ್ಯವೂ ಇಲ್ಲಿಯವರೆಗೆ ಮಸಣವನ್ನು ಸೇರಿಹೋಗಿದೆ.

ಭೂ-ಜಲ ಸೈನ್ಯದ ಭ್ರಾಂತಿ

ಮೂರನೆಯದಾಗಿ, ಪ್ರಬಲವಾದ ಭೂ ಜಲ ಸೈನ್ಯವು ಯುದ್ಧವನ್ನು ನಿಲ್ಲಿಸುತ್ತದೆ ಎಂಬ ತರ್ಕ. ಇದು ಅಸಿದ್ಧತೆಗಂಟಿಕೊಂಡ ಯಮಳವಾದವಾಗಿದೆ. ಶಸ್ತ್ರಸಂಗ್ರಹದಿಂದ ಸುರಕ್ಷಿತತೆಯಿದೆ ಎಂಬ ವಾದವನ್ನು ಇತಿಹಾಸವೆಂದೂ ಸಮರ್ಥಿಸಿಲ್ಲ. ಯುದ್ಧದಿಂದ ಸುರಕ್ಷಿತವಾಗಿರುವುದೆಂಬ ಮಾತು ಇಲ್ಲವೇ ಇಲ್ಲ. ಸ್ಪಾರ್ಟ, ಪರ್ಶಿಯ, ಮ್ಯಾಸಿಡೋನಿಯ, ರೋಂ, ಕಾರ್ಥೇಜ್, ಫ್ರಾನ್ಸ್, ಜರ್ಮನಿ, ಜಪಾನ್, ರಶಿಯಗಳ ಪ್ರಬಲ ಸೈನ್ಯ ಮತ್ತು ಶಸ್ತ್ರಾಸ್ತ್ರಗಳು ಆಕ್ರಮಣದಿಂದ ಸಂಪೂರ್ಣ ಸುರಕ್ಷಿತತೆ ಇಲ್ಲವೆ ಖಂಡಿತ ಜಯವನ್ನು ಎಂದೂ ತಂದು ಕೊಟ್ಟಿಲ್ಲ. ಶಸ್ತ್ರ ಸಂಗ್ರಹ ಪೈಪೋಟಿ ಹಾಗೂ ಸಾಮ್ರಾಜ್ಯಶಾಹಿಯ ಯುದ್ಧಾಸಕ್ತಿ ಮತ್ತು ಅತ್ಯಂತಿಕ ಸಿದ್ಧತೆಗಾಗಿ ಹೆಣಗಾಟ ಇವು ಹೆಚ್ಚುತ್ತ ಹೋಗುತ್ತವೆ— ಅದರ ಅರ್ಥವೆಂದರೆ, ಅಂತಹ ರಾಷ್ಟ್ರಕ್ಕೆ ಜಗತ್ತಿನ ಮಿಕ್ಕ ರಾಷ್ಟ್ರಗಳೆಲ್ಲ ಸಂಭಾವ್ಯ ಶತ್ರುಗಳು ಎಂಬ ಎಣಿಕೆ. ಸ್ವಲ್ಪ ಶಸ್ತ್ರಸಂಗ್ರಹ ಕಡಿಮೆಯಿದೆ, ಆದುದರಿಂದ ನಾವು ದುರ್ಬಲರು ಎಂಬಷ್ಟೇ— ಅದರ ವಿರುದ್ಧ ದಿಕ್ಕಿನಲ್ಲಿ ಹೋಗಿ, ಅತಿ ಸಂಖ್ಯೆಯ ಶಸ್ತ್ರ ಸಂಗ್ರಹದಲ್ಲಿ ಸುರಕ್ಷಿತತೆಯಿದೆ— ಎಂದು ಭಾವಿಸಲು ಕಾರಣವಾಗದು. ಸಮರ ಶಕ್ತಿ ಬಹಳ ಕಡಿಮೆಯಿದ್ದಲ್ಲಿ ಯಾರಾದರೂ ಆಕ್ರಮಿಸ ಬರಬಹುದು; ಸಮರದ ಅತಿ ಸಿದ್ಧತೆಯು ಕೂಡಲೆ ಯುದ್ಧಕ್ಕೆ ಕಾರಣವಾಗಬಲ್ಲುದು. ರಾಜನೀತಿಯಲ್ಲಿ ಹೇಗೋ ಹಾಗೇ ಶಸ್ತ್ರನೀತಿಯಲ್ಲೂ ಹಿತಕರವಾದ ಮಧ್ಯಮಾರ್ಗವಿದೆ.

ಶಸ್ತ್ರಾಸ್ತ್ರಗಳು ಯುದ್ಧದ ಮೂಲ ಕಾರಣಗಳಲ್ಲ

ನಾಲ್ಕನೆಯದು, ನಿಃಶಸ್ತ್ರೀಕರಣದಿಂದ ಅರಕ್ಷಿತತೆಯುಂಟಾಗುವುದು ಎಂಬ ವಾದ. ಇದು ಹಿಂದಿನ ವಿಚಾರ ಸರಣಿಯಿಂದ ಹುಟ್ಟಿದ ಒಂದು ಉಪಶಾಖೆ, ಆತ್ಯಂತಿಕ ನಿಃಶಸ್ತ್ರೀಕರಣವು ಸಂಪೂರ್ಣತೆ ಹೊಂದಲು ಒಂದು [illegible] ಯುಗವೇ ಬೇಕು, ಇಲ್ಲಿಯವರೆಗೆ ನಡೆದ [illegible]ಇದ ಸಮ್ಮೇಲನಗಳಲ್ಲಿ [illegible]ಯವಾದುದು ನಿಃಶಸ್ತ್ರೀಕರಣವಲ್ಲ. ಶಸ್ತ್ರ ಸಂಗ್ರಹ ಕಾರ್ಯವನ್ನು ಒಂದು ಮಿತಿಯಲ್ಲಿಡುವುದು— ಅಷ್ಟೆ. ನಿಜವಾದ ನಿಃಶಸ್ತ್ರೀಕರಣವೇನಾದರೂ ಆಗಿದ್ದರೆ ಗೆದ್ದ ರಾಜ್ಯವು ಸೋತವರ ಮೇಲೆ ಬಲಾತ್ಕಾರ ಮಾಡಿದಾಗ ಮಾತ್ರ. ಇಂದು ನಮಗೆ ಸಾಧ್ಯವಾದ ಕಾರ್ಯವೆಂದರೆ ಶಸ್ತ್ರ ಸಂಗ್ರಹಕ್ಕೆ ಮಿತಿಯನ್ನು ಕಲ್ಪಿಸುವುದು.

ಶಸ್ತ್ರಸಂಗ್ರಹವನ್ನು ಕಡಿಮೆ ಮಾಡುವುದರಿಂದ ಅರಕ್ಷಿತತೆಯುಂಟಾಗುವುದು ಸುಳ್ಳು— ಒಂದು ಮಹಾ ಪ್ರಭುತ್ವವು ಅಳಿದುಳಿದ ಕೆಲವೊಂದು ರಾಷ್ಟ್ರಗಳನ್ನು ನಿಃಶಸ್ತ್ರಗೊಳಿಸಿದಾಗ ಮಾತ್ರ. ಶಸ್ತ್ರ ಸಂಗ್ರಹವನ್ನು ಮಿತಿಯಲ್ಲಿಡುವುದರಿಂದ ಯುದ್ಧವೇ ಸಂಭವಿಸದೆಂಬುದು ನಿಜವಲ್ಲ; ಏಕೆಂದರೆ ಶಸ್ತ್ರಾಸ್ತ್ರಗಳು ಯುದ್ಧದ ಮೂಲ ಕಾರಣಗಳಲ್ಲ. ಅವು ರಾಷ್ಟ್ರೀಯ ಅಥವಾ ಅಂತರ್ರಾಷ್ಟ್ರೀಯ ರಾಜಕಾರಣದ ಕ್ಷೇತ್ರವನ್ನು ವ್ಯಾಪಿಸಿದ ಯಾವುದಾದರೊಂದು ಉಗ್ರ ವ್ಯಾಧಿಯ ಹೊರಗುರುತುಗಳು ಮಾತ್ರ. ಆದರೆ ಅತಿಸಿದ್ಧತೆ ಮತ್ತು ಶಸ್ತ್ರಸಂಗ್ರಹ ಕಾರ್ಯದಲ್ಲಿ ಸ್ಪರ್ಧೆ— ಇವು ಖಂಡಿತವಾಗಿ ಘರ್ಷಣೆಗೆ ಕಾರಣಗಳಾಗಿ ಯುದ್ಧದಲ್ಲಿ ಫಲಿಸುತ್ತವೆ. ಶಸ್ತ್ರ ಸಂಗ್ರಹವನ್ನು ಮಿತಪ್ರಮಾಣದಲ್ಲಿಡುವುದರಿಂದ ಸಾರ್ವಕಾಲಿಕ ಯುದ್ಧ ನಿವಾರಣೆಯುಂಟಾಗದಿದ್ದರೂ ಯುದ್ಧದ ವ್ಯಾಪ್ತಿ ಮತ್ತು ಆವೃತ್ತಿಗಳನ್ನು ಮಿತಗೊಳಿಸುವ ಪ್ರವೃತ್ತಿಗೆ ಕಾರಣವಾಗುತ್ತದೆ; ಇದೇನೂ ಸಣ್ಣ ಗುರಿಯಲ್ಲ.

ಮೊದಲ ತುತ್ತಾಗುವ ಭಯ

ಐದನೆಯದಾಗಿ, ಯುದ್ಧವೇನಾದರೂ ಪ್ರಾರಂಭಿಸಲ್ಪಟ್ಟರೆ ತಾನೇ ಅದಕ್ಕೆ ಮೊದಲ ಬಲಿ ಎಂಬ ಅಮೇರಿಕದಂತಹ ಒಂದು ರಾಷ್ಟ್ರದ ತಿಳಿವಳಿಕೆ. ಇದು ಮತ್ತೊಂದು ಅರ್ಧ ಸತ್ಯ. ಅಮೇರಿಕದ ಅತಿಸಿದ್ಧತೆ ಹಾಗಾಗಲು ಕಾರಣವಾಗಬಹುದೆಂಬ ಮಾತೇನೋ ನಿಜ. ಇತ್ತೀಚಿನ ಹೊಸ ಹೊಸ ತಾಂತ್ರಿಕ ಕ್ರಾಂತಿ, ಆಯುಧ ನಿರ್ಮಿತಿ, ವಿಮಾನವೇಗೋತ್ಕರ್ಷ, ಮತ್ತು ಅಂತಸ್ಸಾಗರ ಆಕ್ರಮಣವನ್ನು ಸಾಧಿಸುವ ಶಸ್ತ್ರಾಸ್ತ್ರಗಳ ಶೋಧ ಇವು ಅಂತಹ ಪರಿಸ್ಥಿತಿಯನ್ನು ಸಂಭಾವ್ಯವನ್ನಾಗಿ ಮಾಡಿರುವುದು ನಿಜ. ಆದರೆ ನಮಗೆ ಮಿತ್ರರಿದ್ದಾರೆ, ಸಾಗರೋತ್ತರ ತಾಣಗಳಿವೆ. ಯಾವ ಶತ್ರುವೇ ಆಗಲಿ, ತನ್ನ ಸುತ್ತು ಮುತ್ತಲಿನ ಸ್ಥಾನಗಳನ್ನು [illegible] ಗೊಳಿಸಿಕೊಳ್ಳದೆ ಎದುರಾಳಿನ [illegible] ನೇರವಾಗಿ ಹೊಕ್ಕು ದಾಳಿಗಾರಂಭಿಸನು. ಆದುದರಿಂದ ಅಮೇರಿಕಕ್ಕೆ ಮಿತ್ರ ರಾಷ್ಟ್ರಗಳು ಸಾಗರೋತ್ತರ ತಾಣಗಳೂ ಇರುವವರೆಗೆ ನೇರವಾಗಿ ಶತ್ರುವಿನ ದಾಳಿಗೆ ತುತ್ತಾಗುವ ಭಯವಿಲ್ಲ.

ಆಕ್ರಮಣ ಅಶಕ್ಯ

ಅಮೇರಿಕವನ್ನು (ಅಥವಾ ದಕ್ಷಿಣ ರಾಷ್ಟ್ರ [illegible]ದನ್ನು) ಈಗಲೇ ಶತ್ರುವು ಆಕ್ರಮಿಸಬಹುದು ಎಂಬುದು ೬ನೆಯ ಹೇತ್ವಾಭಾಸ. [illegible] ಲಿಕ ಪರಿಸ್ಥಿತಿ ಮತ್ತು ದೂರ ಅಂತರಗಳ [illegible] ಭೂಮಿಯ ಮೂಲಕ [illegible] ಸೈನಿಕರು ನುಗ್ಗಿ ಬರುವ [illegible] ತಿಳವನ್ನು ಮುಟ್ಟುವುದು [illegible]

ಒಂದು ಹರಟೆ

ನಾಪಾಸಾದವನ ಕೈಫಿಯತ್ತು

ಹರಟೆಗಾರರು— ಶ್ರೀ ಆರ್. ಬಿ. ಕುಲಕರ್ಣಿ, ಬಿ. ಎ.

ಇಂದಿನ ಕಾಲದಲ್ಲಿ ಬಿ. ಎ., ಎಂ. ಎ. ಮುಂತಾದ ಪದವಿಗಳನ್ನು ಪಡೆದುಕೊಂಡು ಅಧಿಕಾರ ಸ್ಥಾನಗಳಲ್ಲಿ ನಿಂತು ಅಹೋರಾತ್ರ "ಲೆಕ್ಚರ್" ಕೊಡುವುದನ್ನು ಕೇಳಲು ಎಲ್ಲರೂ ನಾ ಮುಂದೆ ತಾ ಮುಂದೆ ಎಂದು ಮುಗಿಬೀಳುತ್ತಾರೆ; ಆದರೆ ಅನೇಕ ಜಾರಿ ಘಟನಿಮುಕಮ್ಮದ ನಂತೆ ದಂಡೆಯತ್ತ ಮಾಡಿ ಮಾರ್ಕನ್ನು ಬಿಟ್ಟು ಬರೆದ ಕಾಗದ, ಒತ್ತು ಕಾಗದ ಮುಂತಾದವನ್ನು ಸೂರೆಮಾಡಿಕೊಂಡು ಹೋದ ನನ್ನಂಥ ನಾಪಾಸಾದವನ ಮಾತನ್ನು ಕೇಳುವವರಾರು?

"ನೀರಿರ್ದ ಕಾಸಾರದರವಿಂದ ಪಿಲ್ಲದೊಡೆ!
ತಾರಕೆಗಳಿದ್ದ ಗಗನಕೆ ಚಂದ್ರನಿಲ್ಲದೊಡೆ!
ತಾರುಣ್ಯ ನವಿರ್ದ ಹೆಣ್ಗೆ ನಿಯನಿಲ್ಲದೊಡೆ!"

ಎಂದು ಹಾಡಿದ ಲಕ್ಷ್ಮೀಶ ಕವಿಯು ಇಂದಿನ ಕಾಲದಲ್ಲಿದ್ದರೆ—

"ಸಿರಿತನದ ವೈಭವಕೆ 'ಕಾರು' ಕೂಡಿಲ್ಲದೊಡೆ,
ವರಚಲಚ್ಚಿತ್ರದಲಿ ತಾರೆಯರ್ ನಟಿಸದೊಡೆ,
ಗರುವಿಕೆಯ ಹಿರಿಯನಿಗೆ ಪದವಿ ಸಿಯಿಲ್ಲದೊಡೆ,
ಸೌಂದರ್ಯ ಸಾಧನಗಳು।
ಪುರ ನಾಪಿತಾಪಣದೊಳಿಲ್ಲದೊಡೆ, ವೇಶ್ಯೆಯ-
ಗಿರಿದಾಗೆ ಕರವಸ್ತ್ರ ಕೆಂಡಪ್ಪ ಕೆರದಿಂದ
ಪರಮ ಮೇಧಾವಿಯಾಗಿರ್ದೊಡಂ ಪಾಸಾಗ-
ದಾತ ಪಾತಕಿಯೆನಿಸನೆ?"

ಎಂದು ಹಾಡಬಹುದಿತ್ತು.

ಸುಶಿಕ್ಷಿತರ ಸಮಾಜದಲ್ಲಿ ಅನುತ್ತೀರ್ಣನು ಹಿಂದು ಸಮಾಜದಲ್ಲಿರುವ ಹಿಂದಿನ ಹರಿಜನನಿದ್ದಂತೆ. ಅವನಿಗೆ ಎಲ್ಲ ನೌಕರಿಯ ಬಾಗಿಲುಗಳೂ ಮುಚ್ಚಿವೆ. ಮನೆತನದ ಹಿರಿಕಿರಿಯರು ಅವನು ಮಹಾ ಅಜ್ಞನೆಂದೇ ಭಾವಿಸುವರು. ಅವನು ಶಿಕ್ಷಣ ಪ್ರಪಂಚದಲ್ಲಿ ಪರಮ ಮೇಧಾವಿಯಾಗಿದ್ದರೂ ಪರೀಕ್ಷಾ ಪದ್ಧತಿಯ ಕಟ್ಟುನಿಟ್ಟುಗಳಲ್ಲಿ ಒಂದೇ ಒಂದು ಗುಣದಿಂದ ಅನುತ್ತೀರ್ಣನಾದರೆ ತೀರಿತು. ಸುಂದರ ಕನ್ನಿಕೆಯು ಮಾಂಗಲ್ಯವಿಹೀನೆಯಾದರೆ ಅವಳ ಸೌಂದರ್ಯಕ್ಕೆ ಬೆಲೆ ಇಲ್ಲದಂತೆ ಇವನ ಬುದ್ಧಿಗೂ ಬೆಲೆ ಇಲ್ಲ. ಇದೊಂದು ಸಾಮಾಜಿಕ ಅನ್ಯಾಯ. ವಿದೇಶೀಯರು ನಮ್ಮ ದೇಶದಲ್ಲಿ ರಾಜ್ಯಭಾರ ನಡೆಸುವಾಗ ಸಮಾಜದಲ್ಲಿ ಅನೇಕ ಸಂಪ್ರದಾಯಗಳನ್ನು ತಂದು ತುಂಬಿದ್ದರಲ್ಲಿ ಅನಿಷ್ಟವಾದ್ದು ಇದೊಂದು ಸಂಪ್ರದಾಯ. ಇದು ಸ್ವತಂತ್ರ ಹಿಂದುಸ್ಥಾನ ಸರಕಾರವು ಬಂದರೂ ಅಳಿಯದೇ ಇದ್ದುದನ್ನು ಕಂಡು, ಅನುತ್ತೀರ್ಣರ ಆರ್ತಸ್ವರವನ್ನು ಸರಕಾರಕ್ಕೂ ಜನತೆಗೂ ಮುಟ್ಟಿಸುವ ಉದ್ದೇಶದಿಂದ ಈ ಕೈಫಿಯತ್ತು ಬರೆದು ಕಳಿಸಿದ್ದೇನೆ. ಇದನ್ನು ಓದಿ ವಿಚಾರವಂತರು ತಲೆ ಕೆರೆದುಕೊಳ್ಳಲಿ. ಹಿಂದುಳಿದವರ ಹಿತೇಚ್ಛುಗಳು ತಮ್ಮ ಕರ್ತವ್ಯದ ಅರಿವು ಪಡೆದು ಜಾಗೃತರಾಗಿ ಕಾರ್ಯಪ್ರವೃತ್ತರಾಗಲಿ. ಅನುತ್ತೀರ್ಣರನ್ನು ರಸಾತಳಕ್ಕೆ ದಬ್ಬಿ ಉತ್ತೀರ್ಣರು ನಡೆಸಿದ ಅಟ್ಟಹಾಸವನ್ನು ಸ್ವತಂತ್ರ ಹಿಂದುಸ್ಥಾನದಲ್ಲಿಯ ಅನುತ್ತೀರ್ಣ ವರ್ಗದವರು ಇನ್ನು ಸಹಿಸರು. ಅವರು ತಮ್ಮ ವರ್ಗದ ಅನ್ಯಾಯದ ಪರಿಮಾರ್ಜನೆಗೆ ಬದ್ಧಕಂಕಣರಾಗಿ ಸುಸಂಘಟಿತ ಪ್ರಯತ್ನ ನಡೆಸಿ ಉತ್ತೀರ್ಣರು ಆಕ್ರಮಿಸಿದ ಆಸನಗಳನ್ನು ಅಲುಗಾಡಿಸಬಹುದೆಂದು ಮೊದಲೇ ಎಚ್ಚರಿಕೆ ಕೊಡುವೆ!

ಆಧುನಿಕ ವರ್ಣಾಶ್ರಮ ವ್ಯವಸ್ಥೆ

ಅನುತ್ತೀರ್ಣನು ಬುದ್ಧಿಗೇಡಿಗಳೆಂದು ಸಾಮಾನ್ಯಕಲ್ಪನೆ ರೂಢವಾಗಿದೆ. ಇದಕ್ಕೆ ತಳಬುಡವೇನಾದರೂ ಇದೆಯೇ? ಒಂದು ವಿಷಯದಲ್ಲಿ ಮೇಧಾವಿ ಇದ್ದರೂ ಪರೀಕ್ಷೆಗೆ ಗೊತ್ತುಪಡಿಸಿದ ಅನಂತ ವಿಷಯಗಳಲ್ಲಿ ಅವನು ಪ್ರವೀಣನೇ ಇರುವದು ಅಸ್ವಾಭಾವಿಕ. ಅವನಿಗೆ ಒಂದು ವಿಷಯದಲ್ಲಿ ಒಂದೆರಡು ಗುಣ ಕಡಿಮೆ ಬಿದ್ದುದಾದರೆ ಅವನು ಕೆಲಸಕ್ಕೆ ಬಾರದವನೆಂದು ಸರಕಾರವೂ ಸಮಾಜವೂ ಹಿರಿಕಿರಿಯರೂ ಭಾವಿಸುವದು ನ್ಯಾಯ ಸಮ್ಮತವೇ? ಶೇಕ್ಸ್‌ಪಿಯರನು ಯಾವ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದ? ರವೀಂದ್ರನಾಥರು ಪರೀಕ್ಷೆಗೆ ಕುಳಿತಿದ್ದರೆ ಅನುತ್ತೀರ್ಣರ ವರ್ಗದಲ್ಲಿ ಸೇರಿ ಮುಂದೆ ಅವರು ಮಹಾ ಕವಿಗಳಾಗುತ್ತಿದ್ದರೋ ಇಲ್ಲವೋ ಯಾರು ಬಲ್ಲರು. ಉತ್ತೀರ್ಣರಾದರಿಗೂ ಅನುತ್ತೀರ್ಣರಿಗೂ ಒಂದರ್ಧ ಗುಣದ ಅಂತರ ಒಂದೆರಡು ವಿಷಯದಲ್ಲಿರಬಹುದು. ಹೀಗಿದ್ದರೂ ಅನುತ್ತೀರ್ಣನು ನಿರುಪಯುಕ್ತ, ಕೆಲಸಕ್ಕೆ ಬಾರದವ, ಉತ್ತೀರ್ಣನು ಯೋಗ್ಯ (ಕ್ವಾಲಿಫಾಯ್ಡ್) ಎಂದು ಭಾವಿಸುವದರಲ್ಲಿ ಏನಾದರೂ ಅರ್ಥವಿದೆಯೇ? ಇದು ಬುದ್ಧಿಜೀವಿಗಳು ರಚಿಸಿದ ಆಧುನಿಕ ವರ್ಣಾಶ್ರಮ ವ್ಯವಸ್ಥೆಯ ಒಂದು ಮಾದರಿ. ಶಿಕ್ಷಣ ಪ್ರಪಂಚದಲ್ಲಿ ಆಂಗ್ಲರು ರಚಿಸಿದ ವರ್ಣಾಶ್ರಮ ಧರ್ಮವೇ ಇದು. ೧ ನೇ ವರ್ಗ, ೨ ನೇ ವರ್ಗ, ೩ ನೇ ವರ್ಗ, ಅನುತ್ತೀರ್ಣ ಇವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ಮನು ಮಾಡಿದ ವರ್ಣವ್ಯವಸ್ಥೆಯೇ ಬೇರೆ ಸ್ವರೂಪ ತಾಳಿ ಬಂದಂತಿದೆ. ಅನುತ್ತೀರ್ಣನು ಹರಿಜನ. ಅವನು ಉಳಿದ ವರ್ಣದವರ ಸೇವೆ ಮಾಡಬೇಕು. ತಾನು ಯಾವುದನ್ನು ಪಡೆಯಲೂ ಅನರ್ಹ. ಇಷ್ಟೇ ಏಕೆ, ಅಪ್ಪಿತಪ್ಪಿ ಎಲ್ಲಿಯಾದರೂ ಅವನು ಸೇರಿಕೊಂಡಿದ್ದರೆ ಮೇಲಿನ ವರ್ಣದವನು ಬಂದಾಗ ಇವನು ಮೆಲ್ಲನೆ ಜಾರಿ ಅವನಿಗೆ ಜಾಗ ಮಾಡಿಕೊಡಬೇಕು. ಇಲ್ಲವಾದರೆ ಇವನಿಗೆ ಆ ಜಾಗದಿಂದ ಅರ್ಧಚಂದ್ರ ಕೊಡಿಸುವ ಹಕ್ಕು ಉತ್ತೀರ್ಣರಿಗೆ ಇದೆ. ಉತ್ತೀರ್ಣರು ದ್ವಿಜರು. ಅನುತ್ತೀರ್ಣನು ಶೂದ್ರರು. ಇದೀಗ ಆಧುನಿಕ ಸಮಾಜ ರಚನೆಯ ವರ್ಣಾಶ್ರಮ ವ್ಯವಸ್ಥೆ.

ನಾವೇ ಶಿಕ್ಷಣ ಸಂಸ್ಥೆಗಳ ಆಧಾರಸ್ತಂಭರು

ಸಮಾಜವ್ಯವಸ್ಥೆಯೆಲ್ಲ ಅಂತ್ಯಜನಮೇಲೆಯೇ ನಿಂತಂತೆ ಶಿಕ್ಷಣ ಸಂಸ್ಥೆಗಳಾದರೂ ನಮ್ಮ ಆಧಾರದಿಂದ ಬಾಳಿ ಬೆಳೆದಿವೆ. ಶಾಲೆಗೆ ಹೋದ ವಿದ್ಯಾರ್ಥಿಗಳೆಲ್ಲರೂ ಪ್ರತಿ ವರ್ಷ ಉತ್ತೀರ್ಣರೇ ಆಗುತ್ತಿದ್ದಾರೆಂದು ಕ್ಷಣ ಹೊತ್ತು ಗ್ರಹಿಸಿದರೆ ಈಗ ಇರುವಷ್ಟು ಶಾಲೆ ಕಾಲೇಜುಗಳು ಅಸ್ತಿತ್ವದಲ್ಲಿ ಬರಬಹುದೆಂದು ಯಾರು ಹೇಳಬಲ್ಲರು? ಮೊದಲನೆಯದಾಗಿ ಹಳ್ಳಿಗಳಲ್ಲಿಯ ಪ್ರಾಥಮಿಕ ಶಾಲೆಗಳೇ ಉಳಿಯುತ್ತಿರಲಿಲ್ಲ. ಹಳ್ಳಿಗರು ಶಾಲೆಗೆ ಮಕ್ಕಳನ್ನು ಹಾಕುವದು ಪಂಚರ ಮುರನತ್ತಿಗಾಗಿ. ದನಕಾಯುವದು, ಹೊಲದಲ್ಲಿ ನೆರವಾಗುವದು ಇವೇ ಅವರಿಗೆ ಬೇಕಾದ ಮಾತು. ಶಾಲೆಗೆ ಹಾಕಿದ ಹುಡುಗರು ಪಾಸಾಗಿ ಶಾಲೆ ಬಿಟ್ಟು ಹೋದರೆ ಶಾಲೆಯಲ್ಲಿ ನಿರ್ದಿಷ್ಟ ಸಂಖ್ಯೆಯ ಹುಡುಗರು ಉಳಿಯುವದು ಅಸಾಧ್ಯದ ಮಾತು. ನಾವು ಒಂದೇ ವರ್ಗದಲ್ಲಿ ೨-೩ ವರ್ಷ ಉಳಿಗಾಗಿ ಶಾಲೆಯಲ್ಲಿಯ ಹುಡುಗರ ಸಂಖ್ಯೆ ಕಡಿಮೆಯಾಗಿ ಶಾಲೆ ಮುಚ್ಚದಂತೆಯೂ ಪರಸ್ಥಳದಿಂದ ಬಂದ ಶಿಕ್ಷಕನು ಊರಲ್ಲಿ ಇರಲು ಮನಮೆಚ್ಚುವಂತೆ ಅವರಿಗೆ ಹಾಲು ಹೈನ, ಕಾಯಿಪಲ್ಲೆ, ಕಟ್ಟಿಗೆ ಒಡೆದು ಕೊಡುವದು, ಮಕ್ಕಳ ನ್ನಾಡಿಸುವದು, ಪ್ರಸಂಗಬಿದ್ದಾಗ ಅವರ ಹಾಗೂ ಅವರ ಮನೆಯವರ ಬಟ್ಟೆ ಒಗೆಯುವದು ಮೊದಲಾದ ಉಪಯುಕ್ತ ಕೆಲಸ ಮಾಡುತ್ತಿರುವದರಿಂದ ಶಿಕ್ಷಕರೂ ಹಳ್ಳಿಯಲ್ಲಿ ಉಳಿಯುವರು. ಶಾಲೆಯೂ ಉಳಿಯುವದು. ನಾವಿಲ್ಲದಿದ್ದರೆ ಪ್ರಾಥಮಿಕ ಶಾಲೆ ಎಂದೋ ಮುಚ್ಚಿ ಹೋಗಬಹುದಿತ್ತು.

ಮಾಧ್ಯಮಿಕ ಶಾಲೆಗಳಂತೂ ಕೇವಲ ನಮ್ಮ ಬಾಂಧವರ ಕೃಪಾಶ್ರಯದಲ್ಲಿಯೇ ಬಾಳಿದವುಗಳು. ನಾವು ಒಂದೇ ವರ್ಗದಲ್ಲಿ ಅನೇಕ ವರ್ಷ ಇದ್ದು ಫೀ ಸಲ್ಲಿಸಿದ್ದರಿಂದಲೇ ಶಾಲೆಗಳ ಆರ್ಥಿಕ ಸ್ಥಿತಿ ಹದಗೆಡದೆ ಉಳಿದಿವೆ. ಮೇಲಾಗಿ ಶಾಲೆಯಲ್ಲಿ ಅನೇಕ ವರ್ಷ ಉಳಿಯುವವರಾದ ಕಾರಣ ಸರಕಾರದಿಂದಲೂ ನಮ್ಮ ಸಂಖ್ಯೆಯ ಪ್ರಮಾಣದ ಮೇಲೆ ಗ್ರಾಂಟು ದೊರೆತ ಹಣ ಅಪರಿಮಿತವಾಗಿದೆ. ಉತ್ತೀರ್ಣ ವಿದ್ಯಾರ್ಥಿಯು ಮಾಧ್ಯಮಿಕ ಶಾಲೆಗೆ ಸಲ್ಲಿಸುವ ಹಣಕ್ಕಿಂತ ಎಷ್ಟೋ ಪಾಲು ಹೆಚ್ಚು ಹಣ ನಮ್ಮ ಸ್ವಂತ ಕಿಸೆಯಿಂದ ಮತ್ತು ಸರಕಾರದ ಬೊಕ್ಕಸದಿಂದ ಶಾಲೆಗೆ ಸಲ್ಲುತ್ತಿರುವದರಿಂದ ಅವು ಬದುಕಿವೆ.

ಮಾಧ್ಯಮಿಕ ಶಾಲೆಯನ್ನು ಉಳಿಸಿಕೊಂಡವರೇ ನಾವೆಂದು ಶಾಲೆಯ ವ್ಯವಸ್ಥಾಪಕರು ಚೆನ್ನಾಗಿ ಬಲ್ಲರು. ಅವರು ಕೊಡುವ ಕನಿಷ್ಠ ದರ್ಜೆಯ ಸಂಬಳಕ್ಕೆ ಒಬ್ಬ ಹಮಾಲನೂ ಕೆಲಸ ಮಾಡಲು ಬಾರನು. ಹೀಗಿದ್ದರೂ ಪದವೀಧರರು ಬಂದು ಕೆಲಸ ಮಾಡಲು ಕಾರಣವೇನು? ನಾವು, ಶಿಕ್ಷಕರ ಕಲ್ಪವೃಕ್ಷಗಳು ಅಲ್ಲಿರುವದರಿಂದ ಈ ಶಿಕ್ಷಕರು ಧಾವಿಸಿ ಅಲ್ಪ ವೇತನವಿದ್ದರೂ ಹೆಚ್ಚಿನ ಅಂಕಿ ಹಾಕಿ ಸಂಬಳ ಪತ್ರಿಕೆಗೆ ಸಹಿ ಮಾಡಲು ಒಪ್ಪಿ ಬರುವರು. ನಾವು ಒಂದರ್ಧ ತಾಸು ಒಂದೇ ವಿಷಯ ಹೇಳಿಸಿಕೊಂಡು ಶಿಕ್ಷಕನಿಗೆ ತಿಂಗಳಿಗೆ ಶಾಲೆಯು ಸಲ್ಲಿಸುವ ಸಂಬಳದಷ್ಟು ಹಣ ಫೀ ಕೊಡುವೆವು. ಖಾಸಗಿ ಶಿಕ್ಷಣ ಕೊಟ್ಟು ಶಿಕ್ಷಕರು ನೂರಾರು ರೂ. ಗಳಿಸುವ ದೊಡ್ಡ ಉದ್ಯೋಗ ನಡೆಸಲು ನಾವೇ ಕಾರಣರು. ನಾವು ಇಲ್ಲದಿದ್ದರೆ ಶಿಕ್ಷಕರ ಈ ಉದ್ಯೋಗ ನಡೆಯಲಾರದು. ಆದರಿಂದ ಅವರು ಶಾಲೆಯ ಅಲ್ಪ ವೇತನದ ಮೇಲೆ ಬದುಕಿ ನೌಕರಿಯಲ್ಲಿ ಉಳಿಯಲಾರರು. ಹೀಗಾಗಿ ಮಾಧ್ಯಮಿಕ ಶಾಲೆಗಳಿಗೆ ಬೀಗ ಹಾಕುವ ಪ್ರಸಂಗ ಎಂದೋ ಬರುತ್ತಿರುವದನ್ನು ತಪ್ಪಿಸಿ ಅವು ಸಸೂತ್ರ ನಡೆಯುವಂತೆ ಮಾಡಿ ಶಿಕ್ಷಣಪ್ರಸಾರ ಮಾಡಲು ಕಾರಣರಾದ ಕೀರ್ತಿ ಸರಕಾರದ್ದೂ ಅಲ್ಲ, ಶಿಕ್ಷಣ ಸಂಸ್ಥೆಯವರದೂ ಅಲ್ಲ, ಸಮಾಜದ ದಾತೃಗಳದ್ದೂ ಅಲ್ಲ. ಅನುತ್ತೀರ್ಣ ವಿದ್ಯಾರ್ಥಿವೃಂದಕ್ಕೇ ಸಲ್ಲತಕ್ಕದ್ದು. ನಾವು ಇಲ್ಲದಿದ್ದರೆ ವಿಶ್ವವಿದ್ಯಾಲಯ ಎಂದೋ ಲಯವಾಗಿ ಹೋಗುತ್ತಿತ್ತು. ಪರೀಕ್ಷೆಯ ಫೀ ಹಣ ನಾವು ಒಟ್ಟೊಬ್ಬರೇ ಒಟ್ಟು ನಮ್ಮ ಆಯುಷ್ಯದಲ್ಲಿ ಕಟ್ಟಿದ್ದು ನೂರಾರು ಉತ್ತೀರ್ಣರಾದ ವಿದ್ಯಾರ್ಥಿಗಳು ಕಟ್ಟಿದಷ್ಟಾಗಬಹುದು. ಸಿನೇಟ, ಸಿಂಡಿಕೇಟ ಎಲ್ಲ ಚಲ್ಲಾಟವಾಡುವದು ನಮ್ಮ ಪರೀಕ್ಷೆ ಫೀ ಹಣದಿಂದ. ಕಾಲೇಜುಗಳಲ್ಲಿ ನಾವು ಇರುವದು ಅದಕ್ಕೆ ಕಳೆ ಕಟ್ಟಿದಂತೆ. ನಾವು ಹತ್ತಾರು ವರ್ಷ ಕಾಲೇಜು ಜೀವನ ಸಾಗಿಸಿದವರಾದ ಕಾರಣ ಹೊಸ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರು. ಪ್ರೊಫೆಸರರಿಗೆ ಮಿತ್ರರು. ನಮ್ಮಿಂದ ಅನೇಕ ಪಾಠಗಳನ್ನು ಅವರು ಕಲಿತುಕೊಂಡೇ ತಮ್ಮ ವೃತ್ತಿ ಸಸೂತ್ರ ಸಾಗುವಂತೆ ಮಾಡಿಕೊಳ್ಳುತ್ತಾರೆ. ಹಳೇ ರೋಗಿ ಹೊಸ ಡಾಕ್ಟರನಿಗಿಂತ ವಾಸಿ ಎಂಬಂತೆ ನಾವು ಹಲವು ವಿಷಯಗಳಲ್ಲಿ ಪ್ರೊಫೆಸರನಿಗಿಂತ ಬಲ್ಲವರಾಗಿಯೇ ಇರುವದು ಸ್ವಾಭಾವಿಕ. ಆಟ, ನೋಟ, ಸಂಗೀತ, ನಾಟಕ, ಗ್ಯಾದರಿಂಗ ಇವೆಲ್ಲ ನಮ್ಮ ಅಧಿಕಾರ ಕ್ಷೇತ್ರದಲ್ಲಿ ನಡೆಯುವವು. ಅನಂತರ ಕಾಲೇಜ ಪಂದ್ಯಾಟದಲ್ಲಿ ಕಾಲೇಜಿಗೆ ಕೀರ್ತಿ ತರುವವರಾರು? ನಮ್ಮಲ್ಲಿಯ ಉತ್ತೀರಣ ವಿದ್ಯಾರ್ಥಿಗಳಲ್ಲಿ ಶಾಲೆ, ಕಾಲೇಜಿನ ಬಗ್ಗೆ ಆತ್ಮೀಯ ಭಾವವೇ ಇರುವದಿಲ್ಲ. ಅನೇಕ ವರ್ಷ ಆ ಸಂಸ್ಥೆಗಳ ಸಂಪರ್ಕ ಪಡೆದವರಾದ ಕಾರಣ ಅವುಗಳ ಬಗ್ಗೆ ಆತ್ಮೀಯ ಭಾವ ಬೆಳೆದಿರುವದರಿಂದ ಅಭಿಮಾನದಿಂದ ಅದರ ಕೀರ್ತಿ ಬೆಳಗಿಸಲು ಬೇಕಾದ ಕಾರ್ಯಗಳನ್ನು ನಾವು ಮಾಡುವೆವು. ಹೀಗೆ ನಮ್ಮ ಅಸ್ತಿತ್ವದಿಂದಲೇ ಈ ಸಂಸ್ಥೆಗಳು ನಿಂತಿವೆ ಎಂದು ಹೇಳಿದರೆ ಅದು ಡಂಭಾಚಾರವಾಗಲಾರದು.

ಸ್ವಾತಂತ್ರ್ಯ ದೊರಕಿಸಿದವರು ನಾವೇ!

ನಮ್ಮೊಡನೆ ಸಂಬಂಧ ಬಂದ ಶಿಕ್ಷಣ ಸಂಸ್ಥೆಗಳ ಬಗ್ಗೆ ಅಭಿಮಾನವಿದ್ದವರು ನಾವೇ ಎಂದು ಹೇಳಿದ್ದರಿಂದ ನಾವು ಬೇರೆಕ್ಷೇತ್ರಗಳಲ್ಲಿ ಮನಸ್ಸು ಹಾಕುತ್ತಿರುವದಿಲ್ಲವೆಂಬ ಕಲ್ಪನೆ ಮಾಡಿಕೊಳ್ಳುವದು ತಪ್ಪಾದೀತು. ಮಹಾತ್ಮಾ ಗಾಂಧಿಯವರು ೧೯೨೦ ರಲ್ಲಿ ಶಾಲೆ ಕಾಲೇಜುಗಳಿಗೆ ಬಹಿಷ್ಕಾರ ಹಾಕಲು ಆದೇಶ ಮಾಡಿದಾಗ ನಮ್ಮ ಅತ್ಯಂತ ಪ್ರೀತ್ಯಾಸ್ಪದವಾದ ಈ ಸಂಸ್ಥೆಗಳ ಸಂಬಂಧ ಕಡಿದುಕೊಂಡು ತ್ಯಾಗವೀರರಾದೆವು. ಏನೋ ನೂರರಲ್ಲಿ ಒಬ್ಬಿಬ್ಬರು ಪುನಃ ಶಾಲೆ ಕಾಲೇಜುಗಳಿಗೆ ಮರಳಿ ಹೋಗಿರಬಹುದು. ಆದರೆ ನಾವು ಒಮ್ಮೆ ಮಹಾತ್ಮರ ಕರೆಗೆ ಓ ಎಂದು ತ್ಯಾಗ ಮಾಡಲು ನಿರ್ಧರಿಸಿದ ನಂತರ ಆ ಸಂಸ್ಥೆಗಳೊಡನೆ ನಮಗೆ ಇದ್ದ ಅನೇಕ ವರ್ಷಗಳ ನಿಕಟ ಸಂಬಂಧದಿಂದ ಬೆಳೆದ ಆತ್ಮೀಯತೆಗೆ ಎಳ್ಳು ನೀರು ಹನಿಸಿ ಅತ್ತ ಹಣಿಕಿ ಹಾಕಲಿಲ್ಲ. ಮುಂದೆ ೧೯೩೦ ರಲ್ಲಿ ಹಳ್ಳಿ ಹಳ್ಳಿಗೆ ಗಾಂಧಿಯವರ ಸಂದೇಶ ಮುಟ್ಟಿಸಿ ಈಚಲ ಗಿಡ ಕಡಿದು, ಜನ ಜಾಗ್ರತಿ ಮಾಡಿ ಉಪ್ಪಿನ ಕಾನೂನು ಮುರಿದು ಬ್ರಿಟಿಶ ಸರಕಾರವು ಗಾಂಧಿಯವರೊಡನೆ ಒಪ್ಪಂದ ಮಾಡಿಕೊಳ್ಳಲು ಆಯರ್ವಿನ್ ಸಾಹೇಬರಿಗೆ ಸೂಚಿಸುವಂತೆ ಪ್ರಚಂಡ ಆಂದೋಲನ ನಡೆಸಿದವರು ನಾವೇ: ಉತ್ತೀರ್ಣರಾಗಬಯಸುವ ವಿದ್ಯಾರ್ಥಿಗಳು ಶಾಲೆ ಕಾಲೇಜಿನಲ್ಲಿ ಓದುತ್ತಿದ್ದಾಗ ನಾವೇ ಬಹಾದ್ದೂರರು; ಹಳ್ಳಿಹಳ್ಳಿಗಳಲ್ಲಿ ನಮ್ಮ ಭಾಷಣ, ಕೃತಿಗಳಿಂದ ಚಳವಳಿಗೆ ಪುಟ ಕೊಟ್ಟವರು. ನಾವೇ ಮುಖಂಡರು ಏನೇ ಹೇಳಿಕೊಳ್ಳಲಿ, ಸೇತುವೆ ಕಟ್ಟಿದವನು ರಾಮನೆಂದು ಪುರಾಣಕಾರರು ಬರೆದರೂ ವಾನರ ತಂಡವೇ ಅದನ್ನು ಕಟ್ಟಿದ್ದು ಎಂಬುದನ್ನು ವಾಸ್ತವವಾದಿ ಮರೆಯಲಾರ. ಅದರಂತೆ ಹಿಂದೀ ಸ್ವಾತಂತ್ರ್ಯ ಸಂಗ್ರಾಮ ಅನುತ್ತೀರ್ಣರ ಅಂಗವಿಲ್ಲದೇ ಎಂದಿಗೂ ನಡೆಯುತ್ತಿರಲಿಲ್ಲ. ಇಂದು ಸ್ವಾತಂತ್ರ್ಯ ಸಿಕ್ಕಿದ್ದು ನಾವು ಕಾಲಕಾಲಕ್ಕೆ ಮಾಡಿದ ಪ್ರಚಾರ, ಚಳವಳಿ ಇದರ ಫಲ.

ವಿಧಾಯಕ ಕಾರ್ಯದ ಶ್ರೇಯಸ್ಸು ನಮಗೆ ಸಲ್ಲುವದು

ಕಾಂಗ್ರೆಸಿನ ಆಂದೋಲನದಲ್ಲಿ ಭಾಗ ವಹಿಸಿದ ನಾವು ಆಂದೋಲನ ನಿಂತ ನಂತರ ಚರಕ ಸಂಘ, ಹಿಂದೀ ಪ್ರಚಾರ, ಹರಿಜನ ಸೇವಕ ಸಂಘ ಮೊದಲಾದ ಅನೇಕ ಸಂಸ್ಥೆಗಳನ್ನು ಕಟ್ಟಿ ನಡೆಸಿಕೊಂಡು ಹೋಗಲು ಮಹಾತ್ಮರಿಗೆ ನೆರವಾದೆವು. ಸರಕಾರೀ ನೌಕರಿಗಳಲ್ಲಿ ಸೇರಲು ಅಸ್ಪದವಿರುವಾಗ ಉತ್ತೀರ್ಣರಲ್ಲಿ ಈ ಸಂಸ್ಥೆಗಳಲ್ಲಿ ಅಲ್ಪ ವೇತನ, ಅನಂತ ಕಷ್ಟದ ಕೆಲಸಕ್ಕೆ ಯಾರು ಬರುವರು? ನಾವೇ ಮಹಾತ್ಮರ ರಚನಾತ್ಮಕ ಕಾರ್ಯದ ರಥ ಮುಂದೂಡಿದವರು. ಇಂದಿಗೂ ಈ ಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದವರು ನಮ್ಮ ವರ್ಗದವರೇ. ರಾಷ್ಟ್ರೀಯ ಕಾಂಗ್ರೆಸಿನ ಆಧಾರ ಸ್ತಂಭರು ನಾವಿದ್ದರೂ ಕಾಂಗ್ರೆಸು ಮಂತ್ರಿ ಮಂಡಲ ರಚಿಸಿ ಅಧಿಕಾರ ಸ್ವೀಕರಿಸುವ ನಿರ್ಧಾರ ಮಾಡಿದ ಕೂಡಲೇ ಉತ್ತೀರ್ಣರು ಅದರಲ್ಲಿ ಬಂದು ಸೇರಹತ್ತಿದರು. ಹೆಚ್ಚಿನಧಿಕಾರ ಸ್ಥಾನಗಳನ್ನು ತಾವೇ ಆಕ್ರಮಿಸಿ ಶಾಸನ ಸಭೆಗಳಿಗೆ ತಮ್ಮ ವರ್ಗದವರನ್ನೇ ನಿಲ್ಲಿಸಿದರು. ನಾವು ತ್ಯಾಗಿಗಳು; ನಾವೇನೋ-ರಾಷ್ಟ್ರದ ಹಿತ ಅವರಿಂದಲೇ ಆಗುತ್ತಿದ್ದರೆ ಆಗಲಿ; ಇನ್ನು ಬ್ರಿಟಿಶರನ್ನು ಹೊಡೆದೋಡಿಸಿ ಸಂಪೂರ್ಣ ಸ್ವಾತಂತ್ರ್ಯ ಬರುವ ವರೆಗೆ ಹೋರಾಟ ನಡೆಯಲಿದೆ. ಈಗ ಮತಭೇದದಿಂದ ಕಾಂಗ್ರೆಸಿನ ಶಕ್ತಿ ಹ್ರಾಸವಾಗಬಾರದು-ಎಂಬ ಉದ್ದೇಶದಿಂದ ಸುಮ್ಮನಿದ್ದೆವು. ಇಷ್ಟೇ ಅಲ್ಲ, ಕಾಂಗ್ರೆಸ ಹುರಿಯಾಳುಗಳು ನಮ್ಮ ವರ್ಗದವರಲ್ಲದಿದ್ದರೂ ಅವರನ್ನು ಆರಿಸಿ ತರಲು ಪ್ರಚಾರ ಮಾಡಿ ಆರಿಸಿ ತಂದೆವು. ೧೯೪೨ ರ ಆಂದೋಲನದಲ್ಲಿ ನಾವು ಮನಸ್ಸು ಹಾಕಿ ಯಶಸ್ವಿಯಾಗಿ ನಡೆಸಿದೆವು.

ಸ್ವಾತಂತ್ರ್ಯ ಪ್ರಾಪ್ತಿಯ ಫಲ ನಮಗಿಲ್ಲ

ದುರ್ದೈವದ ಸಂಗತಿ ಎಂದರೆ ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ ಸರಕಾರವು ನಮ್ಮನ್ನು ಮೊದಲಿನ ಸರಕಾರ ನಡೆಸಿಕೊಂಡ ರೀತಿಗಿಂತಲೂ ಹೆಚ್ಚು ಅನ್ಯಾಯವಾಗಿ ನಡೆಸಿಕೊಳ್ಳುವ ಧೋರಣ ವಹಿಸಿದೆ. ಘಟನಾ ಸಮಿತಿಯಲ್ಲಿ ಸ್ವೀಕರಿಸಿದ ಗೊತ್ತುವಳಿ ನೋಡಿದರೆ ಮುಂದೆ ಸರಕಾರೀ ನೌಕರಿಗಳು ಪರೀಕ್ಷೆಯಲ್ಲಿ ಉಚ್ಚ ಗುಣ ಪಡೆದವರಿಗೇ ಮೀಸಲಾಗಿಡಲಾಗುವದೆಂದು ನಿಶ್ಚಯಿಸಿದ್ದಾಗಿ ಕಂಡು ಬರುವಂತಿದೆ. ಇದು ನಮ್ಮ ಸಮಾಜದ ಮೇಲೆ ಮಾಡಿದ ವಜ್ರಾಘಾತವೇ ಸೈ. ಇದು ಪ್ರಜಾಪ್ರಭುತ್ವ ತತ್ವವನ್ನು ಅವಹೇಳನ ಮಾಡಿದಂತೆಯೇ ಸೈ. ಯಾಕಂದರೆ ಪ್ರಜಾಪ್ರಭುತ್ವ ತತ್ವದಲ್ಲಿ ಎಲ್ಲ ನಾಗರಿಕರಿಗೂ ಸಮಾನಾಧಿಕಾರವಿರಬೇಕಾದುದು ಅಗತ್ಯ. ಸರಕಾರಿ ನೌಕರಿಗಳಲ್ಲಿ ಶಾಸನ ಸಭೆಗಳಲ್ಲಿ ಜಾತೀಯ ಪ್ರಮಾಣದಂತೆ ಸ್ಥಳ ಕೊಡಲಾಗುವದೆಂದು ಘಟನಾ ಸಮಿತಿಯು ಒಪ್ಪಿ ಜಾತೀಯತೆಗೆ ಉತ್ತೇಜನ ಕೊಡುವದಲ್ಲಿಯ ನ್ಯಾಯ? ಇದಕ್ಕಿಂತಲೂ ಉತ್ತೀರ್ಣರು ಅನುತ್ತೀರ್ಣರು ನಿರಕ್ಷರಿಗಳು ಹೀಗೆ ವರ್ಗ ನಿರ್ಮಾಣ ಮಾಡಿ ಸ್ಥಳ ಕಾದಿಡುವ ನಿರ್ಣಯ ಮಾಡಿದರೆ ಪ್ರಜಾಪ್ರಭುತ್ವಕ್ಕೆ ಸಮ್ಮತವಾದುದೂ ಜಾತೀಯತೆ ತಲೆ ಎತ್ತದಂತಹದೂ ನ್ಯಾಯಸಮ್ಮತವೂ ಆಗುತ್ತಿತ್ತು. ಈಗ ಉತ್ತೀರ್ಣರು ಜನಸಂಖ್ಯೆಯ ಪ್ರಮಾಣದಲ್ಲಿ ನೂರಕ್ಕೆ ೫ ರಷ್ಟಿರುವರು. ಇದು ರಾಜ್ಯದಾಳಿಕೆಯ ಗುತ್ತಿಗೆ ಹೊರಲು ಮನುವಿನ ಕಾಲದಲ್ಲಿ ಬ್ರಾಹ್ಮಣರಿಗಿತ್ತ ಅವಾಸ್ತವ ಪ್ರಾಶಸ್ತ್ಯದ ಪುನರವತಾರವಲ್ಲದೆ ಮತ್ತೇನು?

ವಿಶ್ವವಿದ್ಯಾಲಯದ ಸಿನೇಟ, ಸಿಂಡಿಕೇಟಗಳಲ್ಲಿಯಂತೂ ನಮಗೆ ನೂರಕ್ಕೆ ೮೦ ರಷ್ಟು ಸ್ಥಳ ಕಾದಿಡಬೇಕೆಂದು ನಾವು ಪ್ರಜಾಪ್ರಭುತ್ವದ ತತ್ವದಂತೆ ಕೇಳಬಲ್ಲೆವು. ಕರಭಾರ ಹೊತ್ತವರಿಗೆ ಆಡಳಿತದಲ್ಲಿ ಅಧಿಕಾರವಿರಬೇಕಾದುದು ನ್ಯಾಯಸಮ್ಮತ. ವಿಶ್ವವಿದ್ಯಾಲಯದ ಉತ್ಪನ್ನದ ಬಹು ಅಂಶ ನಮ್ಮಿಂದಲೇ ಬರುತ್ತಿದ್ದರೂ ನಮಗೆ ಮತಾಧಿಕಾರ ಸಹ ಇಲ್ಲ. ಇದೆಲ್ಲಿಯ ನ್ಯಾಯ? ಸರಕಾರದವರು ಕರ್ನಾಟಕ ವಿಶ್ವವಿದ್ಯಾಲಯ ಸಮಿತಿ ನೇಮಿಸುವಾಗ ಒಬ್ಬ ಅನುತ್ತೀರ್ಣನನ್ನು ಸದಸ್ಯನನ್ನಾಗಿ ಮಾಡಬಾರದೇ? ಎಲ್ಲ ಸದಸ್ಯರೂ ಉತ್ತೀರ್ಣವರ್ಗದಲ್ಲಿ ಸೇರಿದವರೇ. ಭಾವೀ ಕರ್ನಾಟಕ ವಿಶ್ವವಿದ್ಯಾಲಯದಂತಹ ಮಹತ್ವದ ಪ್ರಶ್ನೆಯಲ್ಲಿ ಅದರ ಆಧಾರಸ್ತಂಭರಾಗುವ ವರ್ಗದವರ ಅಭಿಪ್ರಾಯ ಕೇಳದೆ ಉತ್ತೀರ್ಣವರ್ಗದವರು ತಾವೇ ಮಾಡಿದ ನಿರ್ಣಯ ಹೇರಬಯಸಿದರೆ ಪಾಕಿಸ್ತಾನ ವಿಭಜನೆಯ ನಿರ್ಣಯವನ್ನು ಸಂಬಂಧವಿಲ್ಲದ ಅಮೇರಿಕ ರಶಿಯಗಳು ಅರಬರ ಮೇಲೆ ಹೇರಿದಂತೆ ಆಗುವದು.

ಸಂಘಟನೆ ಅಗತ್ಯ

ಹೀಗೆ ನಮ್ಮ ವರ್ಗದ ಮೇಲೆ ನಡೆದ ಅನ್ಯಾಯ ಪರಂಪರೆಗಳನ್ನು ಮಂಡಿಸುತ್ತ ಹೋದರೆ ಅದೊಂದು ಮಹಾಭಾರತವಾದೀತು. ಇಂಥ ಅನ್ಯಾಯಗಳಿಗೆ ನಾವು ಗುರಿಯಾಗುವದರ ಕಾರಣ

(೧೨ನೆಯ ಪುಟಕ್ಕೆ)

—ಟಿ ಸೇರಾ ಕಟಂಗ ಕಲಬಸ್.

ವಿವಿಧ ಪ್ರಪಂಚ

ಅನೃತಸೂಚಿ

ಒಬ್ಬ ಹುಡುಗ ಹೇಳುತ್ತಿದ್ದ ಶಾಲೇಜಿನಲ್ಲಿ— ಅಸತ್ಯಂವದ, ಅಧರ್ಮಂಚರ; ಅಸತ್ಯಮೇವ ಜಯತೇ ನೋ ನೃತಂ, ಎಂಬುದಂ ಕಲಿಯಂಗಡ ವೇದ ಪಾಠ—ಎಂದು. ಹಿಂದಿನ ಕಾಲದ ಬೇಟೆಗಾರರಲ್ಲಿ ಹತ್ತು ಹುಲಿಯನ್ನು ಕೊಂದವನು, ೨ ಸಿಂಹಗಳೊಡನೆ ಕುಸ್ತಿಯಾಡಿದವನು, ೨೦ ಕಾಡುಕೋಣಗಳನ್ನು ಹಿಡಿದವನು ಎಂದು ಹೆಮ್ಮೆಪಡುತ್ತಿದ್ದರಂತೆ. ಇಂದು ಅನೇಕರು- ಅವನಿಗೆ ಕಷಾಯ ಕೊಟ್ಟೆ, ಇವನಿಗೆ ಕೈ ಕೊಟ್ಟೆ, ಮತ್ತೊಬ್ಬನಿಗೆ ಚಕ್ಕರ್ ಹಾಕಿದೆ—ಎಂದು ತಮ್ಮ ಬುದ್ಧಿಮತ್ತೆಯನ್ನು ಪ್ರದರ್ಶಿಸುವುದು ಸಹಜವಾಗಿಬಿಟ್ಟಿದೆ. ಅವೆಲ್ಲದರ ಅರ್ಥವೂ ಒಂದೇ: ಸುಳ್ಳು ಹೇಳಿ ವಂಚಿಸಿದ್ದು ಎಂದು. ಇಂತಹ ಸುಳ್ಳುಗಾರರು ಬಹಳ ಹೆಚ್ಚಿ ಹೋಗಿ ಅಮೇರಿಕದ ಡಾ. ಲಾರ್ಸನ್ ಎಂಬಾತನು ಅನೃತಸೂಚಿ ಎಂಬ ಯಂತ್ರವನ್ನೊಂದು ಕಂಡು ಹಿಡಿದು ಕಳ್ಳ ಮನಸ್ಸಿನಲ್ಲಿರುವ ಸತ್ಯವನ್ನು ಸುಳ್ಳು ಬಾಯಿಯ ಪರದೆಯಿಂದ ಹೊರದೆಗೆಯಲು ಪ್ರಾರಂಭಿಸಿದ್ದಾನಂತೆ!

ಒಂದು ಸಲ ಒಂದು ವಿದ್ಯಾರ್ಥಿನೀ ನಿಲಯದಲ್ಲಿ ಒಬ್ಬಳ ಸಾಮಾನುಗಳೆಲ್ಲ ಇಟ್ಟಲ್ಲಿಂದ ಮಾಯವಾಗತೊಡಗಿದವು. ಯಾರನ್ನು ಕೇಳಿದರೂ ಪತ್ತೆ ಹತ್ತಲಿಲ್ಲ. ಪೋಲೀಸರು ಕೂಡ ಪೆಚ್ಚಾದರು. ಆಗ ಡಾ. ಲಾರ್ಸನ್ನನಿಗೆ ಆಮಂತ್ರಣ ಕೊಡಲಾಯಿತು. ಸಾಮಾನು ಕಳೆದು ಹೋದದ್ದು ಒಬ್ಬಳದು, ದೂರು ಕೊಟ್ಟದ್ದು ಮತ್ತೊಬ್ಬಳು. ದೂರು ಕೊಟ್ಟಾಕೆಯನ್ನು ಕರೆಸಿ ಮೊದಲು ತನಿಖೆಗೆ ಶುರು ಮಾಡಿದ. ಇದಿರಿಗೊಂದು ವಿದ್ಯುತ್ತಿನಿಂದ ನಡೆವ ಅನೃತಸೂಚಿ ಇಟ್ಟುಕೊಂಡು ಅವಳಿಗೆ ಕೆಲವು ಪ್ರಶ್ನೆ ಹಾಕಿದ. ಮೊದಲು ಎಷ್ಟು ಸ್ನೇಹ ಬೆಳೆಸಿಕೊಂಡಿದ್ದರೂ ಕೆಳಗಿನ ಎಲ್ಲ ಪ್ರಶ್ನೆಗಳಿಗೂ ಅಸತ್ಯದ ಉತ್ತರವನ್ನೇ ಆಕೆ ಧೈರ್ಯವಾಗಿ ಕೊಟ್ಟು ಬಿಟ್ಟಳು.

೧ ತಿಮ್ಮಪ್ಪ ನಿನಗೆ ಸಾಕಷ್ಟು ಹಣ ಕಳುಹುವನೋ?— ಹೌದು.

೨ ಪತ್ತೇದಾರಿ ಕತೆ ಓದುವುದು ನಿನಗೆ ಇಷ್ಟವೆ? —ಇಲ್ಲ.

೩ ನಿನ್ನ ಜೊತೆಗಾತಿಯರ ಹತ್ತಿರುವಿರುವ ಅಂದದ ವಸ್ತುಗಳು ನಿನಗೆಂದಾದರೂ ಬೇಕೆನಿಸಿತ್ತೆ?— ಇಲ್ಲ.

ಯಂತ್ರವು ಮಂತ್ರಮುಗ್ಧವಾದಂತೆ ನಿಷ್ಕ್ರಿಯವಾಗಿ ನಿಂತಿತ್ತು. ಡಾಕ್ಟರ ಸುಸ್ತಾದ. ಉಳಿದೆಲ್ಲ ಹುಡುಗಿಯರನ್ನು ಮನಃಶಾಸ್ತ್ರರೀತ್ಯಾ ಪರೀಕ್ಷಿಸಿದ. ಅಲ್ಪಸ್ವಲ್ಪ ಸಾಕ್ಷಿ ದೊರೆಯಿತಲ್ಲದೆ, ಪೂರ್ಣ ಕೆಲಸವಾಗಲಿಲ್ಲ. ಆಗ ಪುನಃ ಮೊದಲು ಪರೀಕ್ಷಿಸಿದ ಫಾಟಿ ಹುಡುಗಿಯನ್ನೇ ಪುನಃ ಪರೀಕ್ಷಿಸಿದ. ಒಂದು ಪ್ರಶ್ನೆ ಹಾಕಿದ: "ನೀನು ನನ್ನನ್ನು ಪ್ರೀತಿಸುವೆಯಾದರೆ ಸತ್ಯ ಹೇಳು"— ಅದಕ್ಕೆ ಅವಳು ತಾನೇ ಕಳ್ಳೆಯೆಂಬುದನ್ನೊಪ್ಪಿ, ಪುನಃ ಅದೇ ಪ್ರಶ್ನೆಯನ್ನು ಅವನಿಗೂ ಹಾಕಿದಳು. ಅವನು ನಿಜವಾಗಿಯೂ ಹೌದೆಂದು ಆ ಸುಳ್ಳುಗಾತಿಯಿಂದ ಕದ್ದ ವಸ್ತುಗಳನ್ನೆಲ್ಲ ಒಡತಿಗೊಪ್ಪಿಸಿ ಅವಳನ್ನೆ ಮರು ವಾರ ಮದುವೆಯಾದನು!

ಅಂದಿನಿಂದ ಆ ಯಂತ್ರವನ್ನು ಮತ್ತೂ ಸುಧಾರಿಸಿ ಅತಿಬುದ್ಧಿಯ ಕಳ್ಳ ಕೂಡ ಕೆಲವು ನಿಶಿತ ಪ್ರಶ್ನೆ ಹಾಕಿದಾಗ ಉದ್ವಿಗ್ನನಾಗಿ, ಆ ಯಂತ್ರದಲ್ಲಿ ಅವನ ಉದ್ವಿಗ್ನತೆಯ ಚಿತ್ರ (Graph) ಬಿದ್ದು ಸಿಕ್ಕಿ ಬೀಳುವುದು ನಿಶ್ಚಯ ಮಾತಾಯಿತು. ಕಳ್ಳತನ ಸುಳ್ಳತನಗಳನ್ನು ಪತ್ತೆ ಹಚ್ಚಲು ಮನಃಶಾಸ್ತ್ರದ ಪ್ರಯೋಗ ವಿಜ್ಞಾನವನ್ನು ಬಳಸಿಕೊಳ್ಳುವುದು ಇಂದಿನ ಸರಕಾರಗಳ ನಾಗರಿಕತೆಗೆ ಅತ್ಯಗತ್ಯವಲ್ಲವೆ?

ಜಗತ್ತಿನ ಹೆಬ್ಬಾಗಿಲು!

ಬ್ರಿಸ್ಟಲ್ಲಿನಲ್ಲಿ ಜಗತ್ತಿನ ಅತಿದೊಡ್ಡ ವಿಮಾನದ ವರ್ಕಶಾಪಿಗಾಗಿ ಮಾಡಿದ ಬಾಗಿಲು ಉಪಮಾತೀತವಾಗಿದೆ. ಈ ಹೆಬ್ಬಾಗಿಲು ೧೦೪೫ ಅಡಿ ಉದ್ದ ಮತ್ತು ೬೫ ಅಡಿ, ೯ ಅಂಗುಲ ಅಗಲ ಇದೆ.

ಅದನ್ನು ಅತ್ಯಂತ ಹಗುರವಾದ ಪದಾರ್ಥದಿಂದ ಕಟ್ಟಲಾಗಿದೆ. ಅದರ ರೂಪರಚನೆಯೂ ಅದಕ್ಕೆ ಅನುಕೂಲವಾಗಿಯೇ ಇದೆ: ಸುಲಭವಾಗಿ ಅದಕ್ಕೆ ತಿರುಗಲು ಅನುಗೊಡುವಂತಿದೆ. ೩ ಭಾಗಗಳಲ್ಲಿ ಬಾಗಿಲನ್ನು ನಿರ್ಮಿಸಲು ಅಲ್ಯುಮಿನಿಯಮ್ಮನ್ನು ಬಳಸಲಾಗಿದೆ. ಅದೂ ಅಷ್ಟೇ ಉದ್ದವಿದ್ದರೂ ವಿಚಿತ್ರ ತರದ ಯಂತ್ರಸಾಧನದಿಂದ ಎರಡೇ ನಿಮಿಷಗಳಲ್ಲಿ ಅದು ತೆರೆದು ಮುಚ್ಚುವಂತೆ ಮಾಡಲಾಗಿದೆ.

ಪಾರದರ್ಶಕ ಉಕ್ಕು

ಗಾಜೆಂದರೆ ಒಡೆದು ಹೋಗತಕ್ಕ ಪದಾರ್ಥವೆಂದು ನಾವು ತಿಳಿದುಕೊಂಡಿದ್ದೇವೆ. ಅದರೆ ಅವುಗಳಲ್ಲಿ ಕೆಲವು ಬಗೆಯವು ಉಕ್ಕಿನಷ್ಟು ಗಟ್ಟಿಯಿರುತ್ತವೆ.

೧೯೩೯ ರಲ್ಲಿ ಕಾರ್ನಿಂಗ್ ಗ್ಲಾಸ್ ವರ್ಕ್ಸಿನವರು ಬೆಂಕಿಗೆ ಹಿಡಿದರೂ ಒಡೆಯದ "ಶ್ರಂಕ್ (Shrunk)" ಗಾಜುಗಳನ್ನು "ಪಿರೆಕ್ಸ್ ಫ್ಲೇಮ್ ವೇರ್" ಎಂಬ ಹೆಸರಿನಲ್ಲಿ ತಯಾರಿಸಿದರು.

ಮೇಲೆ ಹೇಳಿದ ಗಾಜನ್ನು ಕೆಂಪು ಕೆಂಡವಾಗುವಂತೆ ಕಾಯಿಸಿ ಮಂಜುಗಡ್ಡೆಯೊಳಗಿಟ್ಟರೂ ಆ ಗಾಜು ಒಡೆಯದು. ಅದರಿಂದ ಮಾಡಿದ ಪಟ್ಟಿಯೊಂದನ್ನು ಮಂಜುಗಡ್ಡೆಯಮೇಲಿಟ್ಟು, ಅದರೊಳಗೆ ಕಾಯಿಸಿ ನೀರು ಮಾಡಿದ ಕಬ್ಬಿಣವನ್ನು ಸುರಿದರೂ ಅದಕ್ಕೆ ಏನೂ ಆಗದು.

ಈ ಸಂಶೋಧವನ್ನು ಗಾಜಿನ ಮೂಲಭೂತ ಗುಣಗಳ ಪರಿಶೀಲನದಿಂದ ಮಾಡಲಾಯಿತು. ಗಾಜನ್ನು ಗಟ್ಟಿಯಾಗಿ ಮಾಡಲು ಬಹಳವಾಗಿ ಕಾಯಿಸಿ ನಿಧಾನವಾಗಿ ಆರಿಸುತ್ತಾರೆ. ಆರಿಸುವಾಗ ಕೆಲವು ನಿಶ್ಚಿಷ್ಟ ಉಷ್ಣದ ಹವೆಯ ಮೂಲಕ ಹಾಯಿಸುತ್ತಾರೆ. ಅದರಡ್ಡ ಏನನ್ನೂ ಇಡುವದಿಲ್ಲ; ಇಟ್ಟರೆ ಒಂದು ಭಾಗಕ್ಕಿಂತ ಇನ್ನೊಂದು ಭಾಗ ಬೇಗ ಇಲ್ಲವೆ ತಡವಾಗಿ ಆರುವುದು.

ಎಲ್ಲ ಬಗೆಯ ಉಷ್ಣದ ಹವೆಯ ಮೂಲಕ ಕಾಯಿಸಿ ಆರಿಸಿದ ಗಾಜು, ನೀರು ಮತ್ತು ಇತರ ರಾಸಾಯನಿಕ ದ್ರವ್ಯಗಳಿಂದ ರೂಪಾಂತರ ಹೊಂದುವುದೆಂದು ತೋರಿತು. ಮತ್ತೆ ಕೆಲವು ರಾಸಾಯನಿಕ ದ್ರವ್ಯಗಳನ್ನು ಹಾಕಿದಾಗ ಗಾಜು ಶುದ್ಧ 'ಸಿಲಿಕ' ಮತ್ತು ಬೋರಿಕ್ ಆಕ್ಸೈಡ್ ಮುಂತಾದವುಗಳ ಭಾಗ ಎಂಬುದಾಗಿ ಇಬ್ಭಾಗವಾಯಿತು. ೨ ನೆಯ ಭಾಗ ದ್ರಾವಕ (ಆಮ್ಲ) ಗಳಲ್ಲಿ ಕರಗುತ್ತದೆ. ಇದು ಒಂದು ಗಾಜಿನಲ್ಲಿ ಮೂರರಲ್ಲೊಂದರಷ್ಟಿರುತ್ತದೆ. ಕಾದ ಗಾಜನ್ನು ದ್ರಾವಕಗಳಲ್ಲಿಟ್ಟು ಈ ೨ ನೆಯ ಭಾಗವನ್ನು ಬೇರ್ಪಡಿಸುತ್ತಾರೆ ಎಂದು ಜೇಮ್ಸ್ ಸ್ಟಾಕ್ಲಿಯವರು ಬರೆಯುತ್ತಾರೆ. ಈ ಮೈತ್ರನೆಯ ಗಾಜು 'ಸಿಲಿಕ'ದ ಒಂದು 'ಸ್ಪಂಜಾ'ಗುತ್ತದೆ. 'ಸಿಲಿಕ' ದ್ರಾವಕದಿಂದ ಯಾವ ಪರಿಣಾಮವನ್ನೂ ಹೊಂದುವುದಿಲ್ಲ. ಈ ಸ್ಪಂಜನ್ನು ಪುನಃ ಕಾಯಿಸಿ ಅದರಲ್ಲಿರುವ ಸೂಕ್ಷ್ಮವಾದ ತೂತುಗಳು ಮುಚ್ಚುವಂತೆ ಮಾಡಿದಾಗ ಅದು ತನ್ನ ಗಾತ್ರದಲ್ಲಿ ನೂರಕ್ಕೆ ೩೫ ರಷ್ಟು ಸಂಕುಚಿತವಾಗುತ್ತದೆ (Shrunk) ಮತ್ತು ತಕ್ಕ ಮಟ್ಟಿಗೆ ತನ್ನ ಮೊದಲ ಆಕಾರವನ್ನೇ ಇಟ್ಟುಕೊಳ್ಳುತ್ತದೆ. ಇದು ಶುದ್ಧ "ಕ್ವಾರ್ಟ್ಜ್" ಆದರೆ ಒಡೆಯದ, ಬಿರಿಯದ ಗಾಜಾಗಿ ಪರಿಣಮಿಸುತ್ತದೆ.

ಬಟ್ಟೆಯ ಕಲೆಗೆ ಸಿದ್ಧೌಷಧ!

ಚಹ, ಕಾಫಿ, ಅಯೋಡೀನ್, ಮಸಿ, ಹುಲ್ಲು ಮತ್ತು ಇತರ ಪದಾರ್ಥಗಳು ಅಂಟಿ ಬಟ್ಟೆಗೆ ಕಲೆ ತಾಗಿದರೆ ಅದನ್ನು ತೆಗೆಯಲು ಒಂದು ಹೊಸ ವಿಧದ ಸಿದ್ಧೌಷಧವನ್ನು ಕಂಡು ಹಿಡಿಯಲಾಗಿದೆ. ಅದರಲ್ಲಿ ಒಂದು ವಿಧದ ಮದ್ಯಾಂಶವಿರುತ್ತದೆ.

ಕಲೆ ತೆಗೆಯುವ ಕ್ರಮ ಬಹಳ ಸುಲಭವಾಗಿದೆ. ಬಟ್ಟೆಯನ್ನು ಹರಹಿ ಮೊದಲು ಸ್ಪಂಜಿನಿಂದ ಒರಸಬೇಕು. ಆ ಬಳಿಕ ಔಷಧದ ಒಂದನೆಯ ಕಡ್ಡಿಯಾದ "ಆ್ಯಸಿಡಿಕ್ ಸ್ಟಿಕ್" ಎಂಬುದನ್ನು ಸಾಬೂನು ಹಚ್ಚಿದಂತೆ ಬಟ್ಟೆಗೆ ಹಚ್ಚಬೇಕು. ಅನಂತರ ಅದನ್ನು ಚೆನ್ನಾಗಿ ಕುಕ್ಕಿ ಒಗೆದು ೨ ನೆಯದಾದ "ರಿಡ್ಯೂಸಿಂಗ್ ಸ್ಟಿಕ್" ಎಂಬ ಕಡ್ಡಿಯನ್ನು ಹಾಕಿ ತಿಕ್ಕಿದರೆ ಕಲೆ ಸಂಪೂರ್ಣವಾಗಿ ಮಾಯವಾಗುವುದು.

ಕಡ್ಡಿಗಳು ಮೇಣದಿಂದ ಮಾಡಿದಂತಿರುತ್ತವೆ. ಅವನ್ನು Polyethylene glycols ಎಂಬ ದ್ರವ್ಯದಿಂದ ತಯಾರಿಸಲಾಗಿದೆ. ಗ್ಲೈಕೋಲ್ ಎಂಬುದೊಂದು ವಿಧದ ಮದ್ಯ; ಆದರೆ ಸಾಮಾನ್ಯ ರೀತಿಯದಲ್ಲ. ಈ ಔಷಧವನ್ನು ಸಿದ್ಧಪಡಿಸಿದ ಶ್ರೇಯಸ್ಸು ಅಮೇರಿಕದ ಕಾರ್ಬೈಡ್ ಅಂಡ್ ಕಾರ್ಬನ್ ಕೆಮಿಕಲ್ಸ್ ಕಾರ್ಪೊರೇಶನ್ನಿನವರಿಗೆ ಸಲ್ಲುತ್ತದೆ.

ಹೊಸ ಕ್ಯಾಮರ

ನ್ಯೂಯಾರ್ಕ ಟೈಮ್ಸಿನಲ್ಲಿ ಹೊಸ ವಿಧದ ಕ್ಯಾಮರವೊಂದರ ವಿವರ ಬಂದಿದೆ. ವಿವರಪೂರ್ವಕವಾಗಿ ಅದು ೩೪೦ ಚದರ ಮೈಲಿ ವಿಸ್ತಾರದ ಪ್ರದೇಶವನ್ನು ಫೋಟೋ ತೆಗೆಯಬಲ್ಲದು. ಅದೂ ಎಷ್ಟು ಎತ್ತರದಿಂದ? ೩೦ ಸಾವಿರ ಅಡಿ ಎತ್ತರದಿಂದ!

ಈ ಕ್ಯಾಮರದಿಂದ ವಾಷಿಂಗ್ಟನ್, ನ್ಯೂಯಾರ್ಕ ಮತ್ತು ಬೋಸ್ಟನ್ನುಗಳ ಫೋಟೋ ತೆಗೆಯಲಾಗಿದೆ. ೫ ನೆಯ ಮಾರ್ಗದಲ್ಲಿರುವ ಮನಹತ್ತನ ದ್ವೀಪದ ಮೋಟಾರುಗಳನ್ನು ಈ ಚಿತ್ರದಲ್ಲಿ ಗುರುತಿಸಬಹುದಾಗಿದೆ.

ಇದನ್ನು ಡಾ. ಜೇಮ್ಸ ಜಿ. ಬೇಕರ್ ಎಂಬವರು ರಚಿಸಿದರು. ಅವರು ರಾಷ್ಟ್ರೀಯ ರಕ್ಷಣಾ ಸಂಶೋಧನ ಸಮಿತಿಯ ನೇತ್ರಸಂಶೋಧನಾಲಯದ ದಿಗ್ದರ್ಶಕರು. ಯುದ್ಧ ಕಾಲದಲ್ಲಿ ಹಾರ್ವರ್ಡ ನಗರದಲ್ಲಿ ಇದನ್ನು ರೂಪಿಸಿದ್ದು.

ಈ ಕ್ಯಾಮರಕ್ಕೆ ಅರ್ಧವೃತ್ತಾಕೃತಿಯ ಸೂಕ್ಷ್ಮದರ್ಶಕ ಗಾಜಿದೆ; ಮತ್ತು ಒಂದು ಗಾಜಿನ ಮುಚ್ಚಳವಿದೆ. ಇದರಿಂದ ಸಾಮಾನ್ಯವಾದ ಕ್ಯಾಮರಗಳಲ್ಲಿ ಒದಗುವ ಛಾಯಾ ವಿಕಾರವು ಉಂಟಾಗದಂತಾಗಿದೆ. ೪೦ ಅಂಗುಲ ಉದ್ದ ಮತ್ತು ೪೦ ಅಂಗುಲ ಅಗಲದ ವಿಸ್ತೃತ ಚಿತ್ರದಲ್ಲಿ ವಿವರಗಳನ್ನು ಕಾಣಬಹುದು. ಸೂಕ್ಷ್ಮದರ್ಶಕ ಗಾಜಿನ ವೇಧಬಿಂದುವಿನ ದೂರ ೪ ಅಂಗುಲವಿದೆ; ಮತ್ತು ಇನ್ನೂ ಸ್ಪಷ್ಟ ಚಿತ್ರ ಬೀಳುವಂತೆ ಮಾಡಲು ೬ ಅಂಗುಲ ದೂರದ ವೇಧ ಬಿಂದುವಿರುವಂಥ ಗಾಜನ್ನು ತಯಾರಿಸಲಾಗಿದೆ.

ಅಲ್ಲದೆ, ಸುಮಾರು ೫ ಟನ್ನು ಭಾರವಿರುವ ವೈಮಾನಿಕ ಕ್ಯಾಮರವೊಂದನ್ನು ರಚಿಸಲಾಗುತ್ತಿದೆ. ಅದರ ಎದುರಿನ ಸೂಕ್ಷ್ಮದರ್ಶಕ ಗಾಜು ೩೩ ಅಂಗುಲ ವ್ಯಾಸವುಳ್ಳದ್ದೂ ೨೪೦ ಅಂಗುಲ ದೂರದ ವೇಧಬಿಂದುವುಳ್ಳದ್ದೂ ಆಗಿದೆ.

ಜಗತ್ತಿನ ಅತಿದೊಡ್ಡ ವಜ್ರ!

ನಾಳಿನ ಮೇ ೫ ರಲ್ಲಿ ಲಂಡನ್ ಮತ್ತು ಬರ್ಮಿಂಗ್‌ಹ್ಯಾಂಗಳಲ್ಲಿ ತೆರೆಯಲಾಗುವ ಬ್ರಿಟಿಶ ಕೈಗಾರಿಕೆಗಳ ಸಂತೆಯಲ್ಲಿ ಒಂದು ಸಂಸ್ಥೆಯವರು ೭೭೦ ಕ್ಯಾರೆಟ್ ಅಂಶದ (ಕೆತ್ತದಿರುವ) ಒಂದು ವಜ್ರವನ್ನು ಪ್ರದರ್ಶನಕ್ಕಿಡುತ್ತಾರೆಂದು ತಿಳಿಯುತ್ತದೆ.

ಇದಕ್ಕಿಂತ ದೊಡ್ಡವಾದ ೨ ವಜ್ರಗಳು ಬೇರೆ ಕಡೆ ಸಿಕ್ಕಿವೆಯೆಂದು ಹೇಳಲಾಗಿದೆ. ಮೊದಲನೆಯದು "ಕುಲಿನನ್"— ೩,೧೦೬ ಕ್ಯಾರೆಟ್ ಅಂಶವುಳ್ಳದ್ದು. ೨ ನೆಯದು "ಎಕ್ಸೆಲ್ಸಿಯರ್"— ೯೯೫.೨ ಕ್ಯಾರೆಟ್ಟಿನದು. ಆದರೆ ಮೇಲೆ ಹೇಳಿದ ವಜ್ರವು "ರೇವೆ ಮಣ್ಣಿನ ಸ್ಥಳದಲ್ಲಿ ಸಿಕ್ಕಿದ ಅತ್ಯಂತ ದೊಡ್ಡ ಹರಳು."

ಸಂತೆಯಲ್ಲಿ ರಾಜಕುಮಾರಿ ಎಲಿಜಬೆತ್ತಳಿಗೆ ಬಹುಮಾನವಾಗಿ ಬಂದ ರತ್ನಗಳನ್ನೂ ರಾಜರಾಣಿಯರ ಕಿವಿಯ ಲೋಲಕಗಳಲ್ಲಿರುವ ಅಪೂರ್ವ ಕೆತ್ತನೆಯ ಕೆಲಸದ ಹರಳುಗಳನ್ನೂ ಕಾಣಬಹುದು.

ಗಾಳಿಚೀಲಗಳು

ಯುದ್ಧ ಕಾಲದಲ್ಲಿ ಮುಳುಗಿಸಲಾಗುವ ಹಡಗುಗಳ ಲೆಕ್ಕವಿಡುವದು ಕಷ್ಟ. ಅವುಗಳು ಮುಳುಗುವದನ್ನು ತಪ್ಪಿಸಲು ಸಾಧ್ಯವಾದರೂ ಮುಳುಗಿದ ಬಳಿಕ ನಾನಾ ಪ್ರಯತ್ನಗಳಿಂದ ಅವುಗಳಲ್ಲಿಯ ಸಾಮಾನು ಸರಕುಗಳನ್ನು ಮೇಲೆ ತರುವುದೂ ರೂಢಿಯಲ್ಲಿದೆ.

ಒಂದು ಕ್ರಮವೆಂದರೆ "ಒಂಟೆಗಳು" ಎಂದು ಕರೆಯಲಾಗುವ ದೊಡ್ಡ ದೊಡ್ಡ ಉಕ್ಕಿನ ಕೊಳವೆಗಳನ್ನು ನೀರಲ್ಲಿ ಮುಳುಗಿಸಿ ಹಡಗಿನ ಕೆಳಗೆ ಕಂತಿಗಳನ್ನು ನುಗ್ಗಿಸಿ ಕೊಳವೆಗಳಿಗೆ ಗಾಳಿ ತುಂಬಿ ಅವು ತೇಲುವಂತೆ ಮಾಡುವುದು. ವಿಕಟಾಕಾರದ ಈ "ಒಂಟೆಗಳ"ಗೆ ತಗಲುವ ಖರ್ಚನ್ನು ಉಳಿಸಲು ಆಸ್ಟ್ರೇಲಿಯದ ಶ್ರೀ. ಬ್ರೇಜಿಯರು ರಬ್ಬರಿನ ಚೀಲಗಳನ್ನು ಮುಳುಗಿದ ಹಡಗುಗಳೊಳಗಿಟ್ಟು ಅನಂತರ ಅವುಗಳಿಗೆ ಗಾಳಿ ತುಂಬಿದರೆ ಹಡಗು ಮೇಲೆ ಏಳುವದು ಎಂದು ಸಂಶೋಧಿಸಿದ್ದಾರೆ.

ಮಿಂಚುಗಣ್ಣು!

Electric-Eye— ವಿದ್ಯುತ್ತಿನ ಕಣ್ಣು ಇಂದು ದೂರ ದೃಷ್ಟಿಗಾಗಿ ಬಳಸುವ ಸರ್ವಸಾಧನೆಗಳಿಂತ ನಾಲ್ಕು ಪಟ್ಟು ಹೆಚ್ಚು ದೂರ ನೋಡಬಲ್ಲದು. ಅದಕ್ಕೆ ಹೊರಗಿನ ಬೆಳಕು, ಇಬ್ಬನಿ, ಮಳೆ ಇವಾವುವರಿಂದಲೂ ತೊಂದರೆಯಾಗುವುದಿಲ್ಲ. ಇದನ್ನು ಅಮೇರಿಕದ ಜನರಲ್ ಇಲೆಕ್ಟ್ರಿಕ್ ಕಂಪನಿಯು ತಯಾರಿಸಿದೆ.

ಈ ಹೊಸ ಕಣ್ಣು ಸಾವಿರ ಅಡಿ ದೂರದ ವರೆಗೆ ಕಾಣಬಲ್ಲದು. ಪೂರ್ವದ ಬಳಕೆಯ ಸಾಧನಗಳು ಹೆಚ್ಚೆಂದರೆ, ೨೭೫ ಅಡಿಗಳಷ್ಟು ದೂರ, ಸಾಮಾನ್ಯವಾಗಿ,೫೦ ಅಡಿ ದೂರ ನೋಡಲು ಸಹಾಯಕವಾಗಿದ್ದವು.

ಮಿಂಚುಗಣ್ಣು ಒಂದು ಕಿರಣದ ಕದಿರನ್ನು ಕಳುಹುತ್ತದೆ. ಅದು ಸೆಕೆಂಡಿಗೆ ೯೦೦ ಸಲ ಅಸ್ತವ್ಯಸ್ತ ಮಾಡಲ್ಪಡುತ್ತದೆ. ಈ ಪುನರಾವೃತ್ತಿಯಲ್ಲಿರುವ ಬೆಳಕಿಗೆ ಮಾತ್ರ ಇದು ಲಕ್ಷ್ಯಗೊಡುತ್ತದೆ. ಹೊರ ಬೆಳಕು ಅದಕ್ಕಡ್ಡ ಬರಲಾರದು. ಏಕೆಂದರೆ ಕಣ್ಣಿನಲ್ಲೊಂದು ಶೋಧಕ ಉಪಕರಣವನ್ನಿಡಲಾಗಿದೆ. ಅದು, ನಾವು ನೋಡುವ ಬೆಳಕನ್ನು ಶೋಧಿಸಿ ದೂರ ಕಳಿಸುತ್ತದೆ. ನೀರು ಮುಟ್ಟದ ಪೆಟ್ಟಿಗೆಯಲ್ಲಿ ಅದನ್ನಿಡಲಾಗುತ್ತದೆ.

ಎಂಜಿನಿಯರರು ಇಂಥ ಕಣ್ಣುಗಳಿಂದ ಕಾರಖಾನೆಯಲ್ಲಿಯ ಅಸಂಖ್ಯಾಕ ಮೋಟಾರು, ಕಾರು, ಇತ್ಯಾದಿಗಳನ್ನು ನಿಮಿಷಾರ್ಧದಲ್ಲಿ ಎಣಿಸಲು ಶಕ್ತರಾಗುತ್ತಾರೆ. ಬಹಳ ಗಲಭೆಯ ದೊಡ್ಡ ರಸ್ತೆಗಳಲ್ಲಿ ಇದರಿಂದ ಮಾರ್ಗದರ್ಶಕ ಸೂಚನೆಗಳನ್ನು ಕೊಡಬಹುದು.

ವಿದ್ಯುತ್ತಿಲ್ಲದ ಧ್ವನಿಗ್ರಾಹಕ!

ಝಾನ್ಸಿಯ ಅಗ್ನಿಹೋತ್ರಿ ಎಂಬ ಶಾಲಾಬಾಲಕನು ವಿದ್ಯುತ್ತಿನ ಸಹಾಯವಿಲ್ಲದೆ ನಡೆವ ಒಂದು ರೇಡಿಯೋ ರಿಸೀವರನ್ನು ಕಂಡು ಹಿಡಿದಿದ್ದಾನೆ. ಅದರ ಗಾತ್ರ ಕಿಸೆಯಲ್ಲಿಟ್ಟುಕೊಳ್ಳುವಷ್ಟು ಮಾತ್ರ. ಕೆಲವೊಂದು ರಾಸಾಯನಿಕ ಹರಳುಗಳ ಸಹಾಯದಿಂದ ಅದು ನಡೆವಂತೆ ಆ ಬಾಲವಿಜ್ಞಾನಿ ಸಿದ್ಧಮಾಡಿದ್ದಾನೆ. ಅದು ಹೇಗೆ ನಡೆಯುವುದೆಂಬುದನ್ನು ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ಅವನು ಪ್ರದರ್ಶಿಸಿದನಂತೆ.

ಇದೊಂದು ಅತ್ಯುತ್ತಮ ಮಾದರಿಯಾಗಿದೆ. ಭಾರತೀಯ ತರುಣರು ವಿಜ್ಞಾನದಲ್ಲಿ ಮುಂಬರಿದು ಇದೇ ಪ್ರಕಾರ ವಿಶ್ವವಿಜ್ಞಾನಿಗಳ ಪಟ್ಟಿಗೆ ಹತ್ತಾರು ಹೆಸರುಗಳನ್ನಾದರೂ ಸೇರಿಸುವಂತಾಗಬೇಕು. ಆಗ ಮಾತ್ರ ಭಾರತದ ಗೌರವ ಪ್ರತಿಷ್ಠೆಗಳು ಉಳಿದ ರಾಷ್ಟ್ರಗಳೊಡನೆ ಸರಿಸಮವೆನಿಸಬಹುದು.

ವಿದ್ಯುದ್-ಗ್ರಾಹಕ ಗಾಜು

ನ್ಯೂಬೋಯಿಂಗ ವಿಮಾನ ಕಂಪನಿಯವರು ನಿಯಂತ್ರಣ ಗೃಹಗಳಲ್ಲಿ ಮಂಜುಗಡ್ಡೆಯಿಂದ ಸುರಕ್ಷಿತವಾಗಿ ಉಳಿವ ಹೊಸ ತರಹದ ವಿದ್ಯುದ್-ಗ್ರಾಹಕ ಗಾಜಿನ ಸಲಗರಣೆಯನ್ನು ನಿರ್ಮಿಸುತ್ತಿದ್ದಾರೆ.

ಆ ಗಾಜಿಗೆ 'ನೇಸ' ಎಂದು ಹೆಸರು. ಅದನ್ನು ಪಿಟ್ಸ್‌ಬರ್ಗ ಪ್ಲೇಟ್ ಗ್ಲಾಸ್ ಕಂಪನಿ ತಯಾರಿಸಿದೆ. ಇದರ ಒಳ ಹೊರ ಮೇಲ್ಮೈಗಳಲ್ಲಿ ಪ್ಲೇಟ್ ಗ್ಲಾಸಿನ ಪೊರೆಯೊಂದಿದೆ; 'ವಿನಿಲ್ ಪ್ಲಾಸ್ಟಿಕ್' ಎಂಬ ಪದಾರ್ಥವು ಅವೆರಡರ ನಡುವೆ ಇದೆ. ಒಳಗಿನ ಹೊರ ಪೊರೆಯ ಮೇಲೆ ಪಾರದರ್ಶಕವಾದ ವಿದ್ಯುದ್-ಗ್ರಾಹಕ ಲೇಪವಿದೆ. ಅದರ ಪಾಕವನ್ನು ಗುಟ್ಟಾಗಿಡಲಾಗಿದೆ. ಆ ಲೇಪದ ಪೊರೆಯ ಮೂಲಕ ವಿದ್ಯುತ್ತನ್ನು ಹರಿಸಿ ಅದನ್ನು ಯಾವಾಗಲೂ ಮಂಜಿನಿಂದ ಮುಕ್ತವನ್ನಾಗಿ ಇಡಬಹುದು.

ಮರಹುಳುವಿಗೆ ಮದ್ದು

ಮರ ಕೊರೆವ ಹುಳುವಿನಿಂದ ಕುರ್ಚಿ ಮೇಜು ಮುಂತಾದ ಆಸನೋಪಕರಣಗಳನ್ನು ರಕ್ಷಿಸಲು ಲಂಡನ್ ಸಂಸ್ಥೆಯೊಂದು "ಪಿ. ಸಿ. ಎಲ್" ಎಂಬ ಮದ್ದನ್ನು ತಯಾರಿಸಿದೆ. ಈ ಮದ್ದು ಆ ಹುಳುಗಳಿಂದ ಹುಟ್ಟುವ ಇನ್ನೊಂದು ಬಗೆಯ ಕ್ರಿಮಿಗಳನ್ನೂ ನಾಶ ಮಾಡುವುದು.

ವರ್ಷದಲ್ಲಿ ೨ ಸಲ ಅಂದರೆ ಏಪ್ರಿಲ್ಲಿನಲ್ಲಿ ಮತ್ತು ಆಗಸ್ಟಿನಲ್ಲಿ "ಪಿ. ಸಿ. ಎಲ್" ಮದ್ದನ್ನು ಬಳಸಬಹುದು. ಏಪ್ರಿಲ್ಲಿನಲ್ಲಿ ಮೊಟ್ಟೆ ಮರಿಯಾಗುವದರಿಂದ ಆಗಲೇ ಅವಕ್ಕೆ ಮದ್ದರೆಯಬೇಕು. ಆಗಸ್ಟಿನಲ್ಲಿ ಆಳಿದುಳಿದ ಮೊಟ್ಟೆಗಳನ್ನು ನಾಶಪಡಿಸಲು ಮದ್ದು ಬಳಿಯಬೇಕು.

ಕನ್ನಡಿಗರು ದ್ವೇಷಾಸೂಯೆಗಳನ್ನು ಬಿಟ್ಟು ಒಮ್ಮುಖದಿಂದ ಕಾರ್ಯಮಾಡಬೇಕು

ಗಾಂಧೀಜಿ ಸ್ಮಾರಕವೆಂದು ಏಕೀಕರಣ ನಿಧಿಗೆ ಲಕ್ಷ ರೂಪಾಯಿ ಕೂಡಿಸಬೇಕು

ಧಾರವಾಡ—ಹುಬ್ಬಳ್ಳಿಗಳಲ್ಲಿ ಉರುವಕೊಂಡ ಸ್ವಾಮಿಗಳು

ಉರುವಕೊಂಡದ ಜಗದ್ಗುರುಗಳಾದ ಕರಿಬಸವ ರಾಜೇಂದ್ರ ಮಹಾಸ್ವಾಮಿಗಳು ಕರ್ನಾಟಕ ಗ್ರಂಥಾಲಯದ ಪ್ರಾರಂಭೋತ್ಸವ ಮಾಡುವುದಕ್ಕಾಗಿ ಧಾರವಾಡಕ್ಕೆ ಬಂದಾಗ ಅಲ್ಲಿ ಮತ್ತು ಹುಬ್ಬಳ್ಳಿ ಗದಗಿನಲ್ಲಿ ಭಾಷಣ ಮಾಡಿ ಕನ್ನಡ ನಾಡಿನ ಇಂದಿನ ಪರಿಸ್ಥಿತಿಯನ್ನು ಅದನ್ನು ಸುಧಾರಿಸುವುದಕ್ಕಾಗಿ ಕನ್ನಡಿಗರು ಮಾಡಬೇಕಾದ ಕರ್ತವ್ಯವನ್ನು ಚೆನ್ನಾಗಿ ತಿಳಿಸಿ ಕೊಟ್ಟರು. ಇಲ್ಲಿನ ಜನರಲ್ಲಿರುವ ದ್ವೇಷಾಸೂಯೆಗಳನ್ನೂ ಅದರಿಂದ ಆಗುತಿರುವ ಕಾರ್ಯಹಾನಿಯನ್ನೂ ನೆನೆದು ಭಾರವಾದ ಎದೆಯಿಂದ ಉರುವಕೊಂಡಕ್ಕೆ ಹೋಗುತಿರುವುದಾಗಿ ಹುಬ್ಬಳ್ಳಿಯ ಕೊನೆಯ ಸಭೆಯಲ್ಲಿ ಹೇಳಿದರಲ್ಲದೆ ಅದನ್ನು ಇಳಿಸುವ ಹೊಣೆ ಕನ್ನಡಿಗರ ಮೇಲೆಯೆ ಇದೆಯೆಂದೂ ಅಧಿಕಾರ ವಾಣಿಯಿಂದ ಹೇಳಿದರು.

ಕರ್ನಾಟಕ ಗ್ರಂಥಾಲಯ

ಮುಂಬಯಿ ಸರಕಾರದವರು ಪ್ರಾಂತದಲ್ಲಿ ಪ್ರಾದೇಶಿಕ ಗ್ರಂಥಾಲಯಗಳನ್ನು ಹೊರಡಿಸಬೇಕೆಂಬ ಯೋಜನೆ ಗೊತ್ತುಪಡಿಸಿ ಕರ್ನಾಟಕಕ್ಕಾಗಿ ಹತ್ತು ಸಾವಿರ ರೂಪಾಯಿ ಕೊಡಮಾಡಿ ಧಾರವಾಡದಲ್ಲಿ ಕರ್ನಾಟಕದ ಪ್ರಾದೇಶಿಕ ಗ್ರಂಥಾಲಯ ಸ್ಥಾಪನೆಯಾಗಬೇಕೆಂದು ವಿಧಿಸಿದರು. ಅದರ ಭಾರವನ್ನೆಲ್ಲ ಕರ್ನಾಟಕ ವಿದ್ಯಾವರ್ಧಕ ಸಂಘದ ಮೇಲೆ ಹಾಕಿದ್ದಲ್ಲದೆ ಈ ಪ್ರಾದೇಶಿಕ ಗ್ರಂಥಾಲಯಕ್ಕಾಗಿ ಜನತೆ ಹತ್ತು ಸಾವಿರ ರೂಪಾಯಿಗಳನ್ನು ಕೂಡಿಸಬೇಕೆಂದೂ ವಿಧಿಸಿದರು. ತದನುಸಾರ ವಿದ್ಯಾವರ್ಧಕ ಸಂಘದವರು ಗ್ರಂಥಾಲಯ ಸಮಿತಿಯೊಂದನ್ನು ನೇಮಿಸಿಕೊಂಡು ನಿಧಿ ಸಂಗ್ರಹ ಮಾಡಿ ಯಾರಾದರೊಬ್ಬ ಮಹಾನುಭಾವರಿಂದ ಇದರ ಪ್ರಾರಂಭೋತ್ಸವ ಮಾಡಿಸಬೇಕೆಂದು ಬಗೆದರು. ಉರುವಕೊಂಡದ ಜಗದ್ಗುರು ಶ್ರೀ ಕರಿಬಸವರಾಜೇಂದ್ರ ಸ್ವಾಮಿಗಳನ್ನು ಈ ಕಾರ್ಯಕ್ಕಾಗಿ ಕೇಳಿಕೊಳ್ಳಲು ಅವರು ಆನಂದದಿಂದ ಒಪ್ಪಿಕೊಂಡು ಧಾರವಾಡಕ್ಕೆ ಬಂದಾಗ ತಮ್ಮ ದರ್ಶನ ಲಾಭವನ್ನು ಹುಬ್ಬಳ್ಳಿ ಗದಗಿನ ಜನರಿಗೂ ಒದಗಿಸಿ ಕೊಟ್ಟರು.

ಧಾರವಾಡದಲ್ಲಿ ರವಿವಾರ ೨೯ ನೇ ತಾರೀಕು ವಿದ್ಯಾವರ್ಧಕ ಸಂಘದ ಭವ್ಯವಾದ ಪಟಾಂಗಣದಲ್ಲಿ ಸಭೆ ಸೇರಿಸಲಾಗಿತ್ತು. ಶ್ರೀಗಳವರನ್ನು ಮೆರವಣಿಗೆಯಿಂದ ಸಾಯಂಕಾಲ ೬ ಗಂಟೆಯ ಸುಮಾರಿಗೆ ಕರೆದುಕೊಂಡು ಬರಲಾಯಿತು. ಅಷ್ಟರಲ್ಲಿ ಸಭಾಸ್ಥಾನವು ಧಾರವಾಡ, ಹುಬ್ಬಳ್ಳಿ, ಗದುಗಿನ ಮಹಾಜನಗಳಿಂದ ಕಿಕ್ಕಿರಿದು ತುಂಬಿತ್ತು. ಧ್ವನಿವಾಹಕ ಯಂತ್ರದ ವ್ಯವಸ್ಥೆಯಿದ್ದುದರಿಂದ ಹೊರಗೂ ಅನೇಕ ಜನರು ನಿಂತಿದ್ದರು. ಕರ್ನಾಟಕ ಗೀತೆ ಸ್ವಾಗತ ಗೀತೆಯ ನಂತರ ಗ್ರಂಥಾಲಯ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ಆರ್. ನಲವಡಿ ವಕೀಲರು ಮಾನಪತ್ರ ಮನ್ನೋದಿ ರೇಶಿಮೆಯ ಚೀಲದಲ್ಲಿ ಅದನ್ನು ಶ್ರೀಗಳಿಗೆ ಸಮರ್ಪಿಸಿ ಹೂಮಾಲೆಗಳಿಂದ ಅವರನ್ನು ಸತ್ಕರಿಸಿದರು. ಅನಂತರ ಪ್ರಾಧ್ಯಾಪಕ ಜಾಗಿರದಾರರು ಪ್ರಾಸ್ತಾವಿಕವಾಗಿ ನಾಲ್ಕು ಮಾತು ಹೇಳುತ್ತ ಗ್ರಂಥಾಲಯ ಪ್ರಾರಂಭ ಮಹೋತ್ಸವ ಇಷ್ಟು ವಿಲಂಬವೇಕಾಯಿತೆಂಬುದನ್ನು ತಿಳಿಸಿ ಇದಕ್ಕೆ ತಪ್ಪು ಯಾರದೇ ಇದ್ದರೂ ನೀವೆಲ್ಲ ಎಷ್ಟೇ ನಿರಾಶೆ ಹೊಂದಿದ್ದರೂ ಇಂದು ಯಾವ ಅಮೃತ ಹಸ್ತದಿಂದ ಈ ಕಾರ್ಯ ನಡೆಯುವದೊ ಮತ್ತು ಯಾರ ವೀರ ಸಂದೇಶವನ್ನು ಕೇಳಲು ನೀವು ಇಷ್ಟೊಂದು ಉತ್ಸಾಹದಿಂದ ಇಲ್ಲಿ ನೆರೆದಿರುವಿರೊ ಇದನ್ನು ನೋಡಿದರೆ ನಿಮ್ಮ ನಿರಾಶೆ ಬೇಗ ಹೋಗಿ ನೀವು ಸಂತೋಷಸಾಗರದಲ್ಲಿ ಮುಳುಗುವಿರಾಗಿ ನಂಬುತ್ತೇನೆಂದು ಮುಂತಾಗಿ ಹೇಳಿ ವರದಿಯನ್ನೋದಿದರು ಮತ್ತು ಸಮಾರಂಭ ಯಶಸ್ವಿಯಾಗಲೆಂದು ಕೋರಿ ಬಂದ ಶುಭ ಸಂದೇಶಗಳನ್ನು ಓದಿದರು.

ಸ್ವಾಮಿಗಳ ವೀರವಾಣಿ

ಆ ಬಳಿಕ ಸ್ವಾಮಿಗಳು ತಮ್ಮ ಅಸ್ಖಲಿತ ಮತ್ತು ಗಂಭೀರವಾಣಿಯಿಂದ ಭಾಷಣ ಮಾಡುತ್ತ ಈ ರೀತಿ ಅಪ್ಪಣೆ ಕೊಡಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘ ಕಳೆದ ಅರವತ್ತು ವರ್ಷದಿಂದ ಸಾಹಿತ್ಯ ಕಾರ್ಯಗಳನ್ನು ಮಾಡುತ ಬಂದಿದೆ. ಅದಕ್ಕೆ ಎಷ್ಟೊಂದು ಎಡರು ತೊಡರುಗಳು ಬಂದಿವೆಂಬುದನ್ನು ನೋಡಿದರೆ ಆ ಸವಿನೆನಪಿನಲ್ಲಿ ಕಹಿನೆನಪು ಬೆರೆತು ಯಾರಿಗಾದರೂ ವಿಷಾದವಾಗದಿರದು. ಸಂಸ್ಥೆಗಳನ್ನು ಕಟ್ಟಿಕೊಂಡು ಕಾರ್ಯ ಮಾಡುವದು ಒಳ್ಳೆ ಜವಾಬದಾರಿಯ ಕಾರ್ಯ. ಅದಕ್ಕೆ ಪ್ರತಿಯೊಬ್ಬ ಸಹಾಯ ಸಹಕಾರ ಸಲ್ಲಿಸಲಿಕ್ಕೆ ಬೇಕು.

ಪುಸ್ತಕಗಳ ಸಂಗ್ರಹವೇ ನಿಜವಾದ ವಿಶ್ವವಿದ್ಯಾಲಯಗಳೆಂದು ಕಾರ್ಲಾಯಿಲ್ ೭೫ ವರ್ಷಗಳ ಹಿಂದೆಯೆ ಹೇಳಿರುವನು. ಎಲ್ಲೆಲ್ಲಿಯೂ ಪ್ರಗತಿಯಾಗುತ್ತ ನಡೆದಾಗ ನಮ್ಮ ಭಾರತವೂ ಬಾಪೂಜಿಯ ತಪಃ ಪ್ರಭಾವದಿಂದ ಸ್ವಾತಂತ್ರ್ಯವನ್ನು ಪಡೆದಿರುವಾಗ ಕೂಡ ಸಾಮಾನ್ಯ ಜನತೆ ಅಜ್ಞಾನಾಂಧತಾಮಸದಲ್ಲಿ ತೊಳಲಾಡುತಿರುವದು ಆಲಸ್ಯದ ಮಡುವಿನಲ್ಲಿ ಮುಳುಗಿದುದು ವಿಷಾದಕರ. ಇದನ್ನು ಹೊಡೆದೋಡಿಸಲು ಬರಿ ಅಕ್ಷರ ಶಿಕ್ಷಣ ಸಾಲದು, ಬರಿ ವೃತ್ತಿ ಶಿಕ್ಷಣ ಸಾಲದು, ಅದರೆ ಸದ್ಯಃ ಫಲಕಾರಿಯಾಗುವ ಪರಿಸ್ಥಿತಿ ಜ್ಞಾನ ಮೊದಲು ಬೇಕು. ಅದು ಶ್ರವಣ ಮೂಲಕವಾಗಿಯೇ ಸಾಧ್ಯ—ನೀವು ಸ್ಥಾಪಿಸಿರುವ ಕೇಂದ್ರ ಗ್ರಂಥಾಲಯ ತದಾಶ್ರಯದಲ್ಲಿ ತೀವ್ರವೇ ಪ್ರಸಾರವಾಗಲಿರುವ ಗ್ರಾಮ ವಾಚನಾಲಯಗಳೂ ಈ ದಿಸೆಯಲ್ಲಿ ಬಹು ಮಹತ್ವದ ಕಾರ್ಯಗೆಯ್ಯುತವೆಂಬಲ್ಲಿ ಯಾವ ಸಂಶಯವೂ ಇಲ್ಲ.

ಸರಕಾರದ ಹೊಣೆ

ಶಿಕ್ಷಣದ ಹೊಣೆ ಸರಕಾರದು. ಇದುವರೆಗೆ ಈ ಕ್ಷೇತ್ರದಲ್ಲಿ ಉದಾಸೀನತೆ ತಾಳಿದಂತೆ ಇನ್ನು ಮುಂದೆ ನಡೆಯದು. ಹಿಂದಿನ ಸರಕಾರ ಬೇಜವಾಬದಾರ ಸರಕಾರವಾಗಿದ್ದಿತು. ಈಗ ನಮ್ಮದೇ ಸರಕಾರ ಸ್ಥಾಪಿತವಾಗಿದೆ. ಅದು ತನ್ನ ಹೊಣೆಗಾರಿಕೆಯನ್ನರಿತು ಸಕಾಲದಲ್ಲಿಯೆ ಮುಂದೆ ಬರುವುದವಶ್ಯವಾಗಿದೆ. ಹಲವು ಆಡಳಿತಗಳಲ್ಲಿ ಹಂಚಿಹೋದ ಕನ್ನಡ ನಾಡನ್ನು ಒಂದುಗೂಡಿಸುವುದೂ ಸರಕಾರದ ಹೊಣೆ. ಈ ದೃಷ್ಟಿಯಿಂದ ವಿಚಾರಿಸಿದಾಗ ಮುಂಬಯಿ ಸರಕಾರ ಪ್ರಾದೇಶಿಕ ವಿಶ್ವವಿದ್ಯಾನಿಲಯ ಸ್ಥಾಪಿಸಲು ಮತ್ತು ಸಂಗ್ರಹಾಲಯವನ್ನು ಏರ್ಪಡಿಸಲು ಮುಂದೆ ಬಂದುದು ಅಭಿನಂದನೀಯವಾಗಿದೆ. ಅದರೆ ಈ ಗ್ರಂಥಾಲಯವನ್ನು ನಡೆಸಲು ಜನತೆ ಹತ್ತು ಸಾವಿರ ರೂಪಾಯಿ ಕೊಡಬೇಕೆಂದು ವಿಧಿಸಿದ್ದು ನ್ಯಾಯ್ಯವಲ್ಲ, ಪ್ರಗತಿಪರ ಯಾವ ದೇಶದಲ್ಲಿಯೂ ಹೀಗೆ ಮಾಡುವದಿಲ್ಲ. ಸರಕಾರದವರೇ ಕೇಂದ್ರ ಪ್ರಾಂತಿಕ ಗ್ರಂಥಾಲಯಗಳನ್ನು ಸ್ಥಾಪಿಸಿ ಅದಕ್ಕಾಗಿ ಧಾರಾಳವಾಗಿ ಹಣ ವ್ಯಯ ಮಾಡುವುದುಂಟು. ಲೋಕ ಶಿಕ್ಷಣಕ್ಕೆ ನಮ್ಮ ಹಳ್ಳಿಗರನ್ನು ಸಿದ್ಧಪಡಿಸಬೇಕಾಗಿದೆ. ಸೈನಿಕ ಶಿಕ್ಷಣಕ್ಕೆ ವೆಚ್ಚ ಮಾಡುವಷ್ಟು ಹಣವನ್ನು ಲೋಕ ಶಿಕ್ಷಣಕ್ಕಾಗಿ ಮಾಡಿದರೆ ದೇಶವು ಅದಕ್ಕು ತೀವ್ರ ಪ್ರಗತಿ ಹೊಂದಬಹುದೆಂಬುದನ್ನು ರಾಜ್ಯಸೂತ್ರಧಾರಿಗಳು ವಿಚಾರಿಸಬಹುದಾಗಿದೆ. ರಾಷ್ಟ್ರವನ್ನು ಸಂರಕ್ಷಿಸುವ ದೃಷ್ಟಿಯಿಂದಲೂ ಸೈನಿಕ ಶಿಕ್ಷಣ ಅವಶ್ಯವಾಗಿದೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಸರಕಾರದವರು ಇನ್ನು ಹೆಚ್ಚು ಹಣ ಇಂಥ ಗ್ರಂಥಾಲಯಗಳಿಗೆ ವೆಚ್ಚ ಮಾಡುವದಲ್ಲದೆ ಯಾವ ಕಟ್ಟುನಿಟ್ಟುಗಳಿಲ್ಲದೆ ಹಣವನ್ನು ಕೊಡಬೇಕು. ಎಂದರೇನೇ ಉದ್ದೇಶ ಸಫಲವಾಗುವದು ಎಂದು ಮುಂತಾಗಿ ಹೇಳಿದರು. ಶ್ರೀ ವಿ. ಬಿ. ನಾಯಕರು ಸುಂದರ ರೀತಿಯಿಂದ ಶ್ರೀಗಳವರಿಗೆ ಅಭಿನಂದನೆಗಳನ್ನು ಸಮರ್ಪಿಸಿದ ನಂತರ ವಂದೇ ಮಾತರಂ ಗೀತದೊಡನೆ ಕಾರ್ಯ ಕೊನೆಗಂಡಿತು.

ಹುಬ್ಬಳ್ಳಿಯಲ್ಲಿ

ಶ್ರೀಗಳು ಹುಬ್ಬಳ್ಳಿಯಲ್ಲಿರುವ ಕರ್ನಾಟಕ ಏಕೀಕರಣ ಮಹಾ ಸಮಿತಿಯ ಬಿನ್ನಹದ ಮೇರೆಗೆ ಮರು ದಿನ ಇಲ್ಲಿಗೆ ಬಂದರು. ಇಲ್ಲಿನ ಗಂಗಾಧರ ವಾಣಿಜ್ಯ ವಿದ್ಯಾಲಯ ಭೂಮರಡ್ಡಿ ವಿವಿಧೋದ್ಯೋಗ ಶಾಲೆ ಮತ್ತು ಪತ್ರಿಕಾ ಕಾರ್ಯಾಲಯಗಳನ್ನು ಸಂದರ್ಶಿಸಿದ ನಂತರ ಮಹಾ ಸಮಿತಿಯ ಕಚೇರಿಯಲ್ಲಿ ವಿಚಾರವಿನಿಮಯ ನಡೆಯಿತು. ಏಕೀಕರಣ ಕಾರ್ಯವನ್ನು ಮುಂದುವರಿಸಲು ಹಣದ ಅವಶ್ಯಕತೆ ಬಹಳ ಇದೆಯೆಂದು ಕಾರ್ಯಾ



ಲಯದವರು ಬಿನ್ನವಿಸಿಕೊಂಡರು. ಬೇರೆ ಬೇರೆ ಹಲವರು ಮಾತಾಡಿದನಂತರ ಸ್ವಾಮಿಗಳು ತಮಗೆ ಹೇಳುವದನ್ನು ಸಾರ್ವಜನಿಕ ಸಭೆಯಲ್ಲಿಯೆ ಹೇಳುವದಾಗಿ ಅಪ್ಪಣೆಕೊಡಿಸಿದರು. ನಗರ ಭವನದ ಅಟ್ಟದಲ್ಲಿ ಸಾಯಂಕಾಲ ೬ ಗಂಟೆಗೆ ಸಭೆಸೇರಿತ್ತು. ಜನರಿಂದ ಸಭಾಗೃಹ ಕಿಕ್ಕಿರಿದು ನೆರೆದಿತ್ತು. ಹಿರೇಮಲ್ಲೂರ ಈಶ್ವರನ್ ಮತ್ತು ಮಿರ್ಜಿ ಅಣ್ಣಾರಾಯರು ಹೊರಡಿಸಿದ ಕಲ್ಪನಾ ಗ್ರಂಥ ಮಾಲೆಯ ಪ್ರಕಾಶನ ಸಮಾರಂಭವು ಸ್ವಾಮಿಗಳ ಹಸ್ತದಿಂದ ಜರುಗಿತು. ಶ್ರೀ ಬಸವನಾಳರು ಈ ಸಂಬಂಧವಲ್ಲಿ ಮಾತಾಡಿದರು. ಅನಂತರ ಶ್ರೀ ಕೆಂಪಣ್ಣವರ, ವಿ. ಬಿ. ನಾಯಕ, ಕರ್ಜಿ ಮೊದಲಾದವರು ಮಾತಾಡಿ ಏಕೀಕರಣಕ್ಕಾಗಿ ಧನ ಸಾಹಾಯ್ಯ ಮಾಡುವದು ಎಷ್ಟು ಅವಶ್ಯವೆಂಬದನ್ನು ಪ್ರತಿಪಾದಿಸಿದರು.

ಏಕೀಕರಣ ಅತ್ಯವಶ್ಯ

ಅನಂತರ ಸ್ವಾಮಿಗಳು ಮಾತಾಡುತ್ತ ಕರ್ನಾಟಕ ಏಕೀಕರಣವನ್ನು ಸಾಧಿಸುವದು ಎಷ್ಟು ಅತ್ಯವಶ್ಯವಾಗಿದೆಂಬುದನ್ನು ಹೇಳಿ ಹಣವಿಲ್ಲದೆ ಈ ಕಾರ್ಯ ಸಾಧ್ಯವಾಗದೆಂದು ನುಡಿದರು ಅಲ್ಲದೆ ಕನ್ನಡಿಗರೆಲ್ಲ ದ್ವೇಷಾಸೂಯೆಗಳನ್ನು ಮರೆತು ಎಲ್ಲರೂ ಒಗ್ಗಟ್ಟಿನಿಂದ ಕಾರ್ಯ ಮಾಡಲಿಕ್ಕೆ ಬೇಕು. ಇಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಪರಸ್ಪರರು ಭಿನ್ನಾಭಿಪ್ರಾಯದಿಂದ ದ್ವೇಷಾಸೂಯೆಗಳನ್ನು ತಾಳಿರುವರು ಇಷ್ಟೇ ಅಲ್ಲ ಅದರಿಂದ ಕಾರ್ಯಕ್ಕೂ ಹಾನಿಯಾಗಹತ್ತಿದ್ದನ್ನು ನೋಡಿ ನಮಗೆ ಬಹಳ ವಿಷಾದವಾಗುತಿದೆ. ಇದು ಹೋಗಲಿಕ್ಕೆ ಬೇಕು. ಈ ಬಗೆಯ ಪರಿಸ್ಥಿತಿಯ ಮೂಲಕವಾಗಿಯೆ ನಮಗಿಂದು ಹಣ ಕೂಡದಂತಾಗಿದೆಯೆಂದು ಹೇಳಬಹುದು. ಅಲ್ಲದೆ ಗಾಂಧೀಜಿ ಸ್ಮಾರಕಕ್ಕಾಗಿ ಹಣ ಕೊಡುವೆನೆಂದು ಹೇಳಿ ತಪ್ಪಿಸಿಕೊಳ್ಳುವವರೂ ಉಂಟು. ಆದರೆ ನಿಜವಾದ ಗಾಂಧಿ ಸ್ಮಾರಕವೆಂದರೆ ಏಕೀಕರಣ ನಿಧಿಗೆ ಸಹಾಯ ನೀಡುವದು ಎಂದು ನಾವು ಅಧಿಕಾರವಾಣಿಯಿಂದ ಅಪ್ಪಣೆ ಕೊಡುತ್ತೇವೆ. ಅದುದರಿಂದ ಪ್ರತಿಯೊಬ್ಬರು ಏಕೀಕರಣ ನಿಧಿಗೆ ಸಹಾಯ ಮಾಡಿರೆಂದು ಕೇಳಿಕೊಂಡರು. ೭೦೦ ರಷ್ಟು ರೂಪಾಯಿಗಳು ಸಭೆಯಲ್ಲಿ ಕೂಡಿದವು.

ಭಾರವಾದ ಎದೆಯಿಂದ ಹೋಗುವೆವು

೨ನೆಯ ತಾರೀಕು ಸಾಯಂಕಾಲ ಹುಬ್ಬಳ್ಳಿ ಗುರುದೇವ ಸಾಹಿತ್ಯ ಸಮಿತಿಯ ಪರವಾಗಿ ಶ್ರೀ ಗಂಗಪ್ಪಾ ವಾಲಿಯವರು ಬರೆದ ಕಲ್ಯಾಣಕ್ರಾಂತಿ ಎಂಬ ಕವನ ಸಂಗ್ರಹದ ಪ್ರಕಾಶನ ಸಮಾರಂಭ ಶ್ರೀಗಳ ಅಮೃತಹಸ್ತದಿಂದ ನಡೆಯಿತು. ಕರ್ನಾಟಕ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸಮಿತಿಯವರು ಮಾನಪತ್ರವನ್ನೋದಿ ಶ್ರೀಗಳವರಿಗೆ ಸಮರ್ಪಿಸಿ ತಮ್ಮ ಕಾರ್ಯದಲ್ಲಿ ಅವರ ಆಶೀರ್ವಾದವನ್ನು ಕೋರಿದರು. ಸ್ವಾಮಿಗಳನ್ನು ಪುಷ್ಪಹಾರದಿಂದ ಸತ್ಕರಿಸಿ ಪ್ರಕಾಶನ ಕಾರ್ಯವನ್ನು ಪ್ರಾರಂಭಿಸಬೇಕೆಂದು ಕೇಳಿಕೊಂಡರು.

ಅನಂತರ ಶ್ರೀ ಶಿಗ್ಗಾವಿಮಠ, ವಿ. ಬಿ. ನಾಯಕ, ಬಿ. ಎಚ್. ಶ್ರೀಧರ, ಸಿ. ಎಸ್. ಕರಬಿ ಮತ್ತು ಚಿಂತಾಮಣಿರಾವ ಹಳಪೇಟಿಯವರು ಮಾತಾಡಿ ಶ್ರೀ ಗಂಗಪ್ಪನವರ ಮತ್ತು ಅವರ ಕಾರ್ಯದ ಪರಿಚಯ ಮಾಡಿಕೊಡುತ್ತ ಉತ್ತಮ ಕಾವ್ಯ ಎಷ್ಟೊಂದು ಉಪಯುಕ್ತವಾಗಿದೆಯೆಂಬುದನ್ನೂ ಜನಜೀವನದ ನೀತಿರೀತಿಗಳನ್ನು ತಿದ್ದಲು ಸಹಾಯಕವಾಗಬಲ್ಲುದೆಂಬುದನ್ನೂ ವಿವರಿಸಿದರು. ಆ ಬಳಿಕ ಶ್ರೀ ಗಂಗಪ್ಪನವರು ತಮ್ಮ ಕವನಗಳನ್ನು ಹೇಳಲು ಧ್ವನಿವಾಹಕ ಯಂತ್ರದ ಮುಂದೆ ಬಂದರು. ಆಗ ಶ್ರೀಗಳು ಆನಂದೋದ್ರೇಕದಿಂದ ತಮ್ಮ ಕೊರಳೊಳಗಿನ ಹೂಮಾಲೆಯನ್ನು ಅವರ ಕೊರಳೊಳಗೆ ಹಾಕಿ ಹರಸಿದರು. ಗಂಗಪ್ಪನವರು ಸುಸ್ವರವಾಗಿ ತಮ್ಮ ಪದ್ಯಗಳನ್ನು ಅಂದ ಬಳಿಕ ಸ್ವಾಮಿಗಳು ಈ ರೀತಿ ಅಪ್ಪಣೆ ಕೊಡಿಸಿದರು.

ಸಾಹಿತ್ಯದ ಕೇಂದ್ರವಾಗಿದ್ದ ಧಾರವಾಡವೆ ಕರ್ನಾಟಕದ ರಾಜಧಾನಿಯಾಗಲು ತಕ್ಕದೆಂದು ನಾವು ಈ ವರೆಗೆ ತಿಳಿದಿದ್ದೆವು. ಆದರೆ ಇಂದು ಇಂಥ ತರುಣ ಕವಿಗಳನ್ನು ಮತ್ತು ವಿಮರ್ಶಕರನ್ನು ರಸಿಕರನ್ನು ನೋಡಿದರೆ ಹುಬ್ಬಳ್ಳಿಯೇನು ಹಿಂದೆ ಬಿದ್ದಿಲ್ಲ. ರಾಜಧಾನಿಯು ಹುಬ್ಬಳ್ಳಿಯೆ ಆಗಲಿಕ್ಕೆ ಬೇಕು ಎಂದು ನಾವು ನಮ್ಮ ಮತವನ್ನು ಕೊಡುವೆವು ಎಂದು ಹೇಳಿದರು. ಅನಂತರ ಅವರು ಕಾವ್ಯದ ವಿಮರ್ಶೆಯನ್ನು ಮಾಡುತ್ತ ಆಳವಾದ ಅನುಭವದಿಂದ ಹೊರಹೊಮ್ಮಿದ ಭಾವನೆ ಕಾವ್ಯವೆಂದೂ ಜನಜೀವನಕ್ಕೆ ಉಪಯುಕ್ತವಾದ ಕಾವ್ಯವನ್ನು ಬರೆಯುವದೇ ಕವಿಗಳ ಧ್ಯೇಯವಾಗಿರಬೇಕೆಂದೂ ಹೇಳಿ ಹಿಂದಿನ ಶರಣರು ಮತ್ತು ದಾಸರು ಈ ದಿಸೆಯಲ್ಲಿ ಒಳ್ಳೆ ಯಶಸ್ಸನ್ನು ಸಂಪಾದಿಸಿರುವರೆಂದು ಹೇಳಿದರು. ಕರ್ನಾಟಕದಲ್ಲಿ ಇಂದಿನ ಸಾಹಿತ್ಯದಲ್ಲಿ ಬಹ್ವಂಶವು ಅನುಪಯುಕ್ತವಾಗಿದೆಯೆಂದೂ ನಮ್ಮ ಪುಸ್ತಕಾಲಯಕ್ಕೆ ಬಂದು ನೋಡಿದರೆ ಈ ಮಾತು ಗೊತ್ತಾಗುವದೆಂದೂ ಬಂದ ಪುಸ್ತಕಗಳನ್ನೆಲ್ಲ ಸ್ವೀಕರಿಸುತಿದ್ದರೂ ಯೋಗ್ಯವಾದವುಗಳನ್ನಷ್ಟೇ ಪುಸ್ತಕಾಲಯದಲ್ಲಿ ಇಡುತಿರುವುದಾಗಿಯೂ ಹೇಳಿ ಗ್ರಂಥಮಾಲೆಯವರು ಪುಸ್ತಕ ಲೇಖಕರು ಉಪಯುಕ್ತತೆಯ ಕಡೆಗೆ ಹೆಚ್ಚು ಲಕ್ಷ ಕೊಡಬೇಕಾದುದು ಅತ್ಯವಶ್ಯವೆಂದೂ ಹೇಳಿದರು.

ಕೊನೆಯಲ್ಲಿ ಅವರು ಕರ್ನಾಟಕದ ಇಂದಿನ ವಿಷಮ ಪರಿಸ್ಥಿತಿಯತ್ತ ಹೊರಳಿ ಹೀಗೆ ಹೇಳಿದರು. ಹರಿದು ಹಂಚಿ ಹೋದ ಕರ್ನಾಟಕ ಇಂದು ಇಷ್ಟು ಹೀನ ಸ್ಥಿತಿಯಲ್ಲಿರುವದಕ್ಕೆ ಇಲ್ಲಿನ ಜನರ ಪರಸ್ಪರ ದ್ವೇಷಾಸೂಯೆ ಮತಭೇದಗಳೂ ಕಾರಣವೆಂದು ಹೇಳಬೇಕಾಗುವದು. ಇದನ್ನೆಲ್ಲ ಬಿಟ್ಟುಗೊಟ್ಟು ಒಮ್ಮತದಿಂದ ಮುಂದುವರಿದದ್ದಾದರೆ ಧ್ಯೇಯ ಸಾಧಿಸಿಯೇ ತೀರುವುದು. ಕೇಂದ್ರ ಮಂತ್ರಿ ಮಂಡಳದಲ್ಲಿ ಕರ್ನಾಟಕದ ಒಬ್ಬನಾದರೂ ಮಂತ್ರಿಯಿರದಿರುವದು ಅದೆಷ್ಟು ನಾಚಿಕೆಗೇಡು! ಕಾಂಗ್ರೆಸ ಕಾರ್ಯ ಸಮಿತಿಯಲ್ಲಿ ಯಾವಾಗಲೂ ಒಬ್ಬನಾದರೂ ಕನ್ನಡಿಗ ಸದಸ್ಯನಾಗಿ ಇರದಿರುವದು ಅದೆಷ್ಟು ವಿಷಾದಕರ !! ಕರ್ನಾಟಕದ ಋಣ ತೀರಿಸುವೆವೆಂದು ನಮ್ಮ ಮುಖ್ಯ ಮಂತ್ರಿಗಳು ಹೇಳುತಲೆ ಇರುವರು. ಆದರೆ ಅದೆಂದು ಸಾಧ್ಯವಾಗುವದೊ ತಿಳಿಯದು ? ಇದಕ್ಕೆಲ್ಲ ನಾವು ಅವಿರತ ಪ್ರಯತ್ನ ಮಾಡಬೇಕು. ನಾನು ಈ ಮೊದಲು ಹೇಳಿದಂತೆ ದ್ವೇಷಾಸೂಯೆಗಳನ್ನು ಬಿಟ್ಟುಗೊಟ್ಟು ಒಮ್ಮುಖದಿಂದ ಹೋರಾಡಬೇಕು. ಅಧಿಕಾರ ಲಾಲಸೆಯನ್ನು ಬಿಟ್ಟು ಬಿಡಬೇಕು. ಅಂದರೇನೇ ನಾವು ಮುಂದೆ ಬರುವದು. ಕರ್ನಾಟಕ ಪ್ರಾಂತಕ್ಕಾಗಿ ಒಂದು ಲಕ್ಷ ರೂಪಾಯಿ ಕೂಡದಿರುವದೆಂದರೆ ನಾಚಿಕೆಗೇಡು! ಆ ಸಮಿತಿ, ಈ ಮಂಡಲ ಎಂದು ಅನ್ಯತ್ರ ಕೂಡಿದರೆ ಲಕ್ಷ ರೂಪಾಯಿ ಕೂಡುವದಿಲ್ಲ ಇಷ್ಟೇ ಅಲ್ಲ ಎಲ್ಲವೂ ಅಲಕ್ಷ್ಯವಾಗುವದು. ಇಲ್ಲಿನ ಪರಿಸ್ಥಿತಿಯನ್ನು ನೋಡಿ ನಾವಂತೂ ಭಾರವಾದ ಎದೆಯಿಂದ ಉರುವಕೊಂಡಕ್ಕೆ ಹೋಗುತಿರುವೆವು. ಇದನ್ನೆಲ್ಲ ಸರಿಪಡಿಸಿ ಅದನ್ನು ಇಳಿಸುವ ಹೊಣೆ ಕನ್ನಡಿಗರನ್ನೇ ಕೂಡಿದೆ. ಇನ್ನೊಮ್ಮೆ ನಾವು ಇತ್ತ ಬರುವಷ್ಟರಲ್ಲಿ ಇದೆಲ್ಲ ಪರಿಸ್ಥಿತಿ ಸುಧಾರಿಸಿ ಸ್ವತಂತ್ರ ಸ್ವಾಯತ್ತ ಕರ್ನಾಟಕವಾಗಲೆಂದು ಆಶಿಸುತ್ತೇವೆ. ಅದನ್ನು ಸಾಧಿಸುವ ಹೊಣೆಯೆಲ್ಲ ಕನ್ನಡಿಗರ ಮೇಲೆ ವಿಶೇಷತಃ ಕರ್ನಾಟಕದ ಧುರೀಣರ ಮೇಲೆಯೇ ಇದೆ ಎಂಬುದು ನಿರ್ವಿವಾದ. ಈ ರೀತಿ ಶ್ರೀಗಳ ಭಾಷಣವಾದ ಮೇಲೆ ಆಭಾರಮನ್ನಣೆ ಮತ್ತು ವಂದೇ ಮಾತರಂ ಗೀತವಾಗಿ ಸಭೆ ಕಾರ್ಯ ಕೊನೆಗಂಡಿತು.

ಬುಧವಾರ ದಿನ ಅವರು ಗದುಗಿನ ಕಾರ್ಯಕ್ರಮ ತೀರಿಸಿಕೊಂಡು ಉರುವಕೊಂಡಕ್ಕೆ ಪ್ರಯಾಣ ಬೆಳೆಸಿದರು.

ರೈತರಿಗೆ ಧಾರವಾಡ ಕಲೆಕ್ಟರರ ಎಚ್ಚರಿಕೆ

ಆಹಾರ ಧಾನ್ಯದ ಬೆಲೆ ಏರತೊಡಗಿದ್ದರಿಂದ ಸರಕಾರವೇ ಬಿತ್ತಿಗೆಗೆ ಬೀಜಕೊಂಡು ಸಂಗ್ರಹಿಸುವದು ಆಗಲಿಕ್ಕಿಲ್ಲ. ಆದ್ದರಿಂದ ರೈತರು ಬೀಜಕ್ಕೂ ಆಹಾರಕ್ಕೂ ಬೇಕಾಗುವಷ್ಟು ಕಾಳುಗಳನ್ನಿಟ್ಟುಕೊಂಡು ಉಳಿದ ಕಾಳು ಮಾರಬೇಕೆಂಬುದಾಗಿ ಧಾರವಾಡ ಜಿಲ್ಲಾ ಕಲೆಕ್ಟರರು ರೈತರಿಗೆ ಎಚ್ಚರಿಕೆ ಹೇಳಿದ್ದಾರೆ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಸಮಯೋಚಿತ ಸಲಹೆ

ಉರುವಕೊಂಡದ ಸ್ವಾಮಿಗಳಾದ ಶ್ರೀ ಶಿವಬಸವ ರಾಜೇಂದ್ರರು ಧಾರವಾಡ ಹುಬ್ಬಳ್ಳಿಯಲ್ಲಿಯ ಭಾಷಣಗಳಲ್ಲಿ ಕನ್ನಡ ಜನತೆಯನ್ನು ಉದ್ದೇಶಿಸಿ ಕೊಟ್ಟ ಸಂದೇಶವು ಅಮೋಘವಾಗಿದೆ ಸಮಯೋಚಿತವಾಗಿದೆ. ಪ್ರತಿಯೊಬ್ಬ ಕನ್ನಡಿಗ ಕಾರ್ಯರೂಪದಲ್ಲಿ ತರಲು ಉಚಿತವಾದಂತಹದಾಗಿದೆ. ಅವರ ಭಾಷಣಗಳ ಮುಖ್ಯಾಂಶವನ್ನು ಬೇರೆ ಕಡೆ ಕೊಟ್ಟಿದ್ದೇವೆ. ಸ್ವಾಮಿಗಳು ಬೇರೆ ಬೇರೆ ವಿಷಯಗಳನ್ನು ವಿವೇಚಿಸಿದರೂ ಮುಖ್ಯವಾಗಿ ಕರ್ನಾಟಕದ ಇಂದಿನ ದುಃಸ್ಥಿತಿಯನ್ನು ನೋಡಿ ಬಹಳ ಮಟ್ಟಿಗೆ ವಿಷಾದಗೊಂಡಿದ್ದಾರೆ. ಇಲ್ಲಿನ ಧುರೀಣರಲ್ಲಿನ ಭಿನ್ನಾಭಿಪ್ರಾಯ, ಪರಸ್ಪರ ದ್ವೇಷಾಸೂಯೆ, ಅಧಿಕಾರಲಾಲಸೆ, ಒಬ್ಬರನ್ನೊಬ್ಬರು ಹಿಂದೆ ಜಗ್ಗುವಿಕೆ ಮೊದಲಾದವುಗಳಿಂದ ನಾಡಿನ ಪ್ರಗತಿಗೆ ಒಳ್ಳೆ ಆಘಾತವಾಗಹತ್ತಿದೆಂದು ಅವರು ಕಂಡುಕೊಂಡಿದ್ದಾರೆ. ಇದರ ಪರಿಣಾಮವಾಗಿಯೋ ಏನೋ ಇಂದು ಕೇಂದ್ರ ಸರಕಾರದಲ್ಲಿಯಾಗಲಿ ಕಾಂಗ್ರೆಸ ಕಾರ್ಯಸಮಿತಿಯಲ್ಲಿಯಾಗಲಿ ಕರ್ನಾಟಕಕ್ಕೆ ಸ್ಥಾನ ಸಿಕ್ಕಿಲ್ಲ. ಇದು ನಾಚಿಕೆಗೇಡು, ವಿಷಾದಕರ ಎಂದು ಶ್ರೀಗಳು ಅಭಿಪ್ರಾಯಪಟ್ಟಿದ್ದಾರೆ. ಇದೆಲ್ಲ ನಿವಾರಣೆಯಾಗಿ ಕರ್ನಾಟಕ ಭಾರತದಲ್ಲಿ ಒಂದು ಉಚ್ಚ ಸ್ಥಾನ ಪಡೆಯಬೇಕಾದರೆ ಭಾರತದಲ್ಲಿ ಇಷ್ಟೇ ಅಲ್ಲ ಪರರಾಷ್ಟ್ರಗಳಲ್ಲಿಯೂ ತನ್ನ ಸಾಂಸ್ಕೃತಿಕ ಸಂದೇಶವನ್ನು ಬೀರಬೇಕಾದರೆ ಅದು ಏಕೀಕೃತವಾಗಬೇಕು. ಬಹಳ ದಿನಗಳಿಂದ ಕಟ್ಟಿಕೊಂಡಿದ್ದ ಈ ಹೊಂಗನಸು ಬೇಗ ನನಸಾಗಲಿ ಎಂದು ಹಾರಯಿಸಿದ್ದಾರೆ. ಈ ಧ್ಯೇಯ ಸಿದ್ಧಿಸಬೇಕಾದರೆ ವಿಧಾಯಕ ಕಾರ್ಯವಾಗಬೇಕಾದುದು ಅಗತ್ಯ, ಅವಶ್ಯ. ಇದನ್ನು ನೆನೆದು ಮಹಾಸಮಿತಿಯವರು ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಬೇಕೆಂದು ಗೊತ್ತುಪಡಿಸಿದ್ದಾರೆ. ಆದರೆ ಒಂದೇ ಧ್ಯೇಯವನ್ನಿಟ್ಟುಕೊಂಡು ಎರಡು ಸಮಿತಿಗಳು ಬೇರೆ ಬೇರೆ ದಿಸೆಯಲ್ಲಿ ಕಾರ್ಯ ಮಾಡುತ್ತಿರುವುದರಿಂದ ಲಕ್ಷ ರೂಪಾಯಿ ಕೂಡುವುದಿಲ್ಲ ಇಷ್ಟೇ ಅಲ್ಲ ಎಲ್ಲವೂ ಅಲಕ್ಷಿತವಾಗುತ್ತದೆ ಎಂದು ಹೇಳಿ ಧುರೀಣರೆಲ್ಲ ಒಂದೆಡೆ ಸೇರಿ ಎರಡೂ ಸಮಿತಿಗಳನ್ನು ಒಕ್ಕೂಡಿಸಿ ಒಮ್ಮತದಿಂದ ಪ್ರಯತ್ನಿಸಬೇಕಲ್ಲದೆ ಪರಸ್ಪರರಲ್ಲಿದ್ದ ದ್ವೇಷಾಸೂಯೆಗಳನ್ನು ಬಿಟ್ಟುಕೊಡಬೇಕೆಂದೂ ಕೇಳಿಕೊಂಡರು. ಸುಂದರವಾದ ಕನ್ನಡ ನಾಡನ್ನು ಕಟ್ಟಬೇಕಾದರೆ ಇದು ಅತ್ಯವಶ್ಯ. ಇಲ್ಲಿನ ವಿಷಮ ಪರಿಸ್ಥಿತಿಯನ್ನು ನೋಡಿ ಭಾರವಾದ ಎದೆಯಿಂದ ನಾವು ಉರುವಕೊಂಡಕ್ಕೆ ಹೋಗುತ್ತಿರುವೆವು. ಅದನ್ನು ಇಳಿಸುವ ಹೊಣೆ ಕನ್ನಡಿಗರ ಮೇಲೆಯೇ ಇದೆ ಎಂದು ಒಳ್ಳೆ ಕಳಕಳಿಯಿಂದ ಹೇಳಿದರು. ಸ್ವಾಮಿಗಳ ನೊಂದ ಹೃದಯವನ್ನು ಸಂತೃಪ್ತಗೊಳಿಸುವದು ಕನ್ನಡಿಗರೆಲ್ಲರ ಕರ್ತವ್ಯವಾಗಿದೆ. ಕನ್ನಡಿಗರೆಲ್ಲ ಇತ್ತ ಗಮನಿಸಿ ಅವರ ಸಮಯೋಚಿತ ಸಲಹೆಯಂತೆ ನಡೆದದ್ದಾದರೆ ಅವರನ್ನು ಕರೆಯಿಸಿಕೊಂಡಿದ್ದು ಸಾರ್ಥಕವಾಗುವದು.

ಗಡಿಯ ರಕ್ಷಣೆ

ಹೈದ್ರಾಬಾದ ನಿಜಾಮ ಸರ್ಕಾರವು ಹಿಂದುಸ್ಥಾನ ಒಕ್ಕೂಟ ಸರಕಾರದ ಗೂಡ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡಿದ್ದರೂ ಹಿಂದುಸ್ಥಾನದ ಗಡಿ ಭಾಗಗಳಲ್ಲಿ ನಿಜಾಮ ಸಂಸ್ಥಾನದ ಪುಂಡರ ಮತ್ತು ಪುಂಡರ ವೇಷ ಹಾಕಿಕೊಂಡ ಪೋಲೀಸರ (?) ಪುಂಡಾಟಿಕೆ ನಡೆದಿದೆಯೆಂದು ಒಂದೇ ಸಮನೆ ಸುದ್ದಿಗಳು ಬರಹತ್ತಿವೆ. ಮದ್ರಾಸದ ಅದವಾನಿ ತಾಲೂಕಿನ ಗಡಿಯಲ್ಲಿ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಗಡಿಯಲ್ಲಿ ನಿಜಾಮ ಸಂಸ್ಥಾನದ ಪುಂಡರು ನಡೆಸಿದ ಹಾವಳಿಯನ್ನು ನೋಡಿದರೆ ಗಡಿರಕ್ಷಣೆಗಾಗಿ ಒಕ್ಕೂಟ ಸರಕಾರದವರು ಕೂಡಲೆ ಉಪಾಯ ಕೈಕೊಳ್ಳುವುದು ಅತ್ಯವಶ್ಯವೆಂದು ಹೇಳಬೇಕಾಗುವುದು. ಊರನ್ನು ಸೊಕ್ಕು ಲೂಟಿ ಮಾಡುವದು, ಕೊಳ್ಳೆ ಇಡುವುದು, ಅಡ್ಡಿ ಮಾಡಿದವರನ್ನು ಗಾಯಗೊಳಿಸುವದು ನಡೆದಿವೆ. ಗಡಿ ಭಾಗಗಳಲ್ಲಿ ಪೋಲೀಸರ, ಒಕ್ಕೂಟ ಸರಕಾರದ ಪೋಲೀಸರ ಸಂಖ್ಯೆ ಹೆಚ್ಚಿಗಿಲ್ಲದ್ದರಿಂದ, ಶಸ್ತ್ರಾಸ್ತ್ರಗಳೂ ಅವರ ಹತ್ತರ ಹೆಚ್ಚಿಗೆ ಇಲ್ಲದ್ದರಿಂದ ಪುಂಡಾಟಿಕೆಯನ್ನು ತಡೆಯುವದು ಅವರಿಂದ ಸಾಧ್ಯವಾಗುವದಿಲ್ಲ. ಅಂತೆಯೆ ಒಕ್ಕೂಟ ಸರಕಾರದ ಪೋಲೀಸರು ಕೂಡ ಗಾಯ ಹೊಂದುವ ಪ್ರಸಂಗ ಬರುವದು. ಪೋಲೀಸರದೆ ಈ ಹಾಡಾದ ಬಳಿಕ ಸಾಮಾನ್ಯ ಜನತೆಯದೆಷ್ಟೆಂದು ಕಷ್ಟನಿಷ್ಠುರಗಳಿಗೆ ಈಡಾಗಬೇಕಾಗುವದೆಂಬುದನ್ನು ಪ್ರತ್ಯೇಕ ಹೇಳಬೇಕಿಲ್ಲ. ಗಡಿ ಭಾಗಗಳಲ್ಲಿ ಜನರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿರೆಂದು ಮುಂಬಯಿ ಸರಕಾರಕ್ಕೆ ಕೇಳಿಕೊಂಡಾಗ ಸಾಧ್ಯವಿಲ್ಲ ಎಂದು ಮುಂಬಯಿ ಸರಕಾರದ ಗೃಹಖಾತೆಯವರು ಅಪ್ಪಣೆ ಕೊಟ್ಟದ್ದರು. ಜನತೆಯ ಕೈಯಲ್ಲಿ ಶಸ್ತ್ರಾಸ್ತ್ರಗಳನ್ನು ಕೊಟ್ಟರೆ ಅವುಗಳ ದುರುಪಯೋಗವಾಗಬಹುದೆಂದು ಸರಕಾರಕ್ಕೆ ಅಂಜಿಕೆಯಿದ್ದರೆ ತಾವಾದರೂ ಗಡಿಗಳನ್ನು ಭದ್ರವಾಗಿಡಲಿಕ್ಕೆ ಬೇಕಾಗಿತ್ತು. ಆದರೆ ಅವರು ಇತ್ತ ಅಷ್ಟೊಂದು ಗಮನ ಕೊಡದ್ದರಿಂದ ಜನರು ಈಗ ಕಷ್ಟಕ್ಕೊಳಗಾಗಬೇಕಾಯಿತು. ಆದುದು ಆಗಿ ಹೋಯಿತು ಇನ್ನು ಮೇಲಾದರೂ ಮುಂಬಯಿ ಮತ್ತು ಮದ್ರಾಸ ಸರಕಾರದವರು ತಮ್ಮ ಗಡಿಗಳಲ್ಲೆಲ್ಲ ಭದ್ರವಾದ ಸೈನಿಕರ ಮತ್ತು ಪೋಲೀಸರ ಕಾವಲವನ್ನಿಟ್ಟು ಜನತೆಯ ವಿತ್ತ ಜೀವಿತಗಳನ್ನು ಸುರಕ್ಷಿತವಾಗಿರಿಸಿ ಈಗ ಉಂಟಾದ ಭಯಾನಕ ಪರಿಸ್ಥಿತಿಯನ್ನು ಹೋಗಲಾಡಿಸಬೇಕೆಂದು ಬಿನ್ನವಿಸುತ್ತೇವೆ.

ಮುಂಬಯಿ ಮುಂಗಡ ಪತ್ರಿಕೆ

ಮುಂಬಯಿ ಪ್ರಾಂತದ ಅರ್ಥಸಚಿವರಾದ ಮಾನ್ಯ ವೈಕುಂಠಲಾಲ ಮೆಹತಾ ಇವರು ಪ್ರಾಂತದ ಮುಂಗಡ ಪತ್ರಿಕೆಯನ್ನು ಶಾಸನ ಸಭೆಯಲ್ಲಿ ಮಂಡಿಸಿದ್ದು ಕಳೆದ ವಾರ ಅದರ ಮುಖ್ಯಾಂಶವನ್ನು ಕೊಟ್ಟಿದ್ದೇವೆ. ಮಾನ್ಯ ವೈಕುಂಠಲಾಲರು ಅರ್ಥಶಾಸ್ತ್ರ ಪ್ರವೀಣರು ಸಹಕಾರ ಶಾಸ್ತ್ರದ ಆಳವಾದ ಅಭ್ಯಾಸ ಮಾಡಿ ಜನತೆಯ ಹಿತ ಸಂಬಂಧಗಳನ್ನರಿತವರು. ಜನಸಾಮಾನ್ಯದ ಹಿತವೆಂತಾಗಬಲ್ಲುದೆಂಬುದನ್ನನು ಲಕ್ಷಿಸಿಯೇ ಅವರು ಈ ಮುಂಗಡ ಪತ್ರಿಕೆಯನ್ನು ಸಿದ್ಧಪಡಿಸಿರುವರೆಂದು ಹೇಳಿದರೆ ತಪ್ಪಾಗದು. ಈ ವರ್ಷದ ಮುಂಗಡ ಪತ್ರಿಕೆಯಲ್ಲಿ ೨ ಕೋಟಿ ೬೫ ಲಕ್ಷ ರೂಪಾಯಿಗಳ ಕೊರತೆಯನ್ನು ತೋರಿಸಿದ ರೂ ಹೆಚ್ಚಿನ ವೆಚ್ಚ ಮಹಾತ್ಮರ ಗ್ರಾಮಾಭಿವೃದ್ಧಿಯ ತತ್ವದ ಪ್ರಸಾರಕ್ಕಾಗಿ ಆಗುತ್ತಿರುವುದರಿಂದ ಇಷ್ಟವೇ ಎಂದು ಹೇಳಬಹುದು. ೩೦-೫೦ ಹಳ್ಳಿಗಳ ಗುಂಪಿನಲ್ಲಿ ಸಮಗ್ರ ಗ್ರಾಮಸೇವೆಯ ವಿಧಾಯಕ ಚಟುವಟಿಕೆಗಳಿಗಾಗಿ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿದೆ. ಗಾಂಧೀಜಿಗೆ ಪ್ರಿಯಕರವಾಗಿದ್ದ ಈ ಗ್ರಾಮೋದ್ಧಾರ ಯೋಜನೆಗೆ ಹಣ ವೆಚ್ಚಮಾಡುವದನ್ನು ಯಾರೂ ಆಕ್ಷೇಪಿಸಲಾರರು. ಆದರೆ ಹಿಂದಿನ ಸರಕಾರದ ಕಾಲಕ್ಕೆ ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯಿರಿ ಎಂಬ ಯೋಜನೆಯಲ್ಲಿ ಎಷ್ಟೋ ಹಣ ವೆಚ್ಚವಾಗಿ ಉದ್ದೇಶ ಮಾತ್ರ ಸಫಲವಾಗದಿದ್ದಂತೆ ಈಗ ಆಗಬಾರದೆಂದಿಷ್ಟೇ ನಾವು ಎಚ್ಚರಿಕೆ ಕೊಡಬಯಸುತ್ತೇವೆ. ಗ್ರಾಮೋದ್ಧಾರದ ನೆವದಿಂದ ತಮ್ಮ ಬೊಜ್ಜು ಬೆಳೆಸುವಂಥವರಿಗೆ ಯಾವದೇ ಬಗೆಯ ಅವಕಾಶ ಸಿಕ್ಕದಂತೆ ನೋಡಿಕೊಳ್ಳಬೇಕು. ಅರ್ಥಸಚಿವರು ಶಿಕ್ಷಣದ ಬೆಳವಣಿಗೆಗಾಗಿ ೧ ಕೋಟಿ ೧೩ ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ವೆಚ್ಚ ಮಾಡಲು ನಿರ್ಧರಿಸಿದ್ದು ಮತ್ತೊಂದು ಮಹತ್ವದ ವೆಚ್ಚದ ವಿಷಯವಾಗಿದೆ. ಸಾರ್ವತ್ರಿಕ ಒತ್ತಾಯದ ಶಿಕ್ಷಣ, ಮೂಲ ಶಿಕ್ಷಣ ಉಚ್ಚ ಶಿಕ್ಷಣ ಮೊದಲಾದವುಗಳಿಗಾಗಿ ಹೆಚ್ಚೆಚ್ಚು ಹಣ ಬೇಕಾದುದು ಸ್ವಾಭಾವಿಕ. ಶಿಕ್ಷಣದ ಈ ಯೋಜನೆ ಯಶಸ್ವಿಯಾಗಲೆಂದು ಯಾರಾದರೂ ಹಾರಯಿಸಬಹುದಾಗಿದೆ. ಈ ಮುಖ್ಯ ವಿಷಯಗಳಲ್ಲದೆ ಇನ್ನಿತರ ಬಾಬುಗಳಿಗಾಗಿಯೂ ಹೆಚ್ಚು ಹಣವನ್ನು ವೆಚ್ಚ ಮಾಡಲು ನಿರ್ಧರಿಸಿದ್ದರಿಂದ ಆಯಕ್ಕಿಂತ ವ್ಯಯ ಹೆಚ್ಚಾಗಿ ಕೊರತೆಯುಂಟಾಗಿದೆ. ಈ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿ ಅರ್ಥಸಚಿವರು ಹೇರಿದ ಕರಗಳೂ ಜನಸಾಮಾನ್ಯಕ್ಕೆ ಭಾರವಾಗುವಂತಹವಲ್ಲೆಂದು ಹೇಳಬಹುದು. ವಿಲಾಸ ಭೋಗದ ವಸ್ತುಗಳನ್ನು ಹುಡುಕಿಯೆ ಹೊಸ ಕರಗಳನ್ನು ಹೇರಲಾಗಿದೆ. ಪೆಟ್ರೋಲು ಮನರಂಜನ ಮೊದಲಾದವುಗಳ ಮೇಲೆ ಹೆಚ್ಚು ಕರ ಹೇರಿದ್ದರಿಂದ ಜನಸಾಮಾನ್ಯ ಹೊಸ ಕರಗಳಿಂದ ತೊಂದರೆಗೊಳಗಾಗದೆಂದು ಹೇಳಬಹುದು. ಸರಕಾರದ ಯೋಜನೆಗಳೆಲ್ಲ ಕಾರ್ಯಕಾರಿಯಾಗಬೇಕಾದರೆ ಬರಿ ಹಣವೊಂದೇ ಸಾಲದು. ಕಾರ್ಯ ಕುಶಲ ದಕ್ಷ ಅಧಿಕಾರಿಗಳೂ ಸದಾ ಸರಕಾರಕ್ಕೆ ಸಹಾಯ ಮಾಡುವ ಜನರೂ ಇರುವದು ಅವಶ್ಯ. ಇಲ್ಲದಿದ್ದರೆ ಈ ಯೋಜನೆಗಳಿಗೆ ವೆಚ್ಚ ಮಾಡುವ ಹಣ ನಿರರ್ಥಕವಾಗಿ ಜನತೆಯ ಮೇಲೆ ಹೇರಿದ ಕರ ಮಾತ್ರ ಭಾರವಾಗಿ ಪರಿಣಮಿಸುವದಲ್ಲಿ ಸಂದೇಹವಿಲ್ಲ.

ಕೇಂದ್ರ ಸರಕಾರದ ಆಯವ್ಯಯ

ಕೇಂದ್ರ ಸರಕಾರದ ಆಯವ್ಯಯ ಪತ್ರಿಕೆಯನ್ನು ಅರ್ಥಸಚಿವರಾದ ಷಣ್ಮುಖಂ ಚೆಟ್ಟಿಯವರು ಹಿರಿಯೋಲಗದಲ್ಲಿ ಮಂಡಿಸಿದುದಷ್ಟು. ಸ್ವತಂತ್ರ ಹಿಂದುಸ್ಥಾನ ಸರಕಾರದ ಪ್ರಥಮ ಆಯವ್ಯಯ ಪತ್ರಿಕೆಯಿದು ಎಂದು ಹೇಳಬಹುದು. ಷಣ್ಮುಖಂರವರು ಪಂಡಿತ ಮೋತೀಲಾಲರ ಗರಡಿಯಲ್ಲಿ ತಯಾರಾದವರು ಆದರೆ ಸ್ವಾರ್ಥತ್ಯಾಗಕ್ಕೆ ಇರಬೇಕಾದ ಸಿದ್ಧತೆ ಇಲ್ಲದ್ದರಿಂದ ಅವರು ಕಾಂಗ್ರೆಸ್ಸಿನಿಂದ ಇಷ್ಟು ದಿನ ಸಿಡಿದು ನಿಂತಿದ್ದರು. ಏನೇ ಇದ್ದರೂ ಸ್ವತಂತ್ರ ಭಾರತದಲ್ಲಿ ಅವರು ಗಣ್ಯವಾದ ಸ್ಥಾನವನು ಪಡೆದು ದೇಶದ ಬೊಕ್ಕಸದ ಯಂತ್ರವನ್ನೆ ಚಲಿಸುತ್ತಿರುವರು. ಅವರು ಈ ವರ್ಷ ಸಿದ್ಧಪಡಿಸಿದ ಮುಂಗಾಣಿಯು ಕ್ರಾಂತಿಕಾರಕವೆಂದು ಹೇಳಬಹುದು. ಸ್ವತಂತ್ರ ಭಾರತದ ಗೊತ್ತುಗುರಿಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿದ ಮುಂಗಡ ಪತ್ರವೆಂದೂ ಹೇಳಬಹುದು. ನಮ್ಮ ಆರ್ಥಿಕ ಮತ್ತು ಔದ್ಯೋಗಿಕ ಪ್ರಗತಿಗೆ ಇದೊಳ್ಳೆ ಮಹತ್ವದ ಸಾಧನವೂ ಆಗಿದೆ. ಬರುವ ವರ್ಷದ ಆಯ ೨೩೦ ಕೋಟಿ ೩೭ ಲಕ್ಷ ರೂಪಾಯಿ ವ್ಯಯ ೨೫೭ ಕೋಟಿ ೩೭ ಲಕ್ಷ ರೂಪಾಯಿಗಳೆಂದು ಎಣಿಕೆ ಹಾಕಿ ೨೭ ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸಲಾಗಿದೆ. ಹಿಂದುಸ್ಥಾನದಂಥ ವಿಶಾಲ ರಾಷ್ಟ್ರದ ಆಯವ್ಯಯದ ವಿಚಾರ ಮಾಡುವಾಗ ಇಷ್ಟು ಕೊರತೆ ಹೆಚ್ಚೆಂದೆನಿಸಲಾರದು. ಅದರಲ್ಲಿಯೂ ಹಿಂದುಸ್ಥಾನ ಇಬ್ಭಾಗವಾಗಿ ಅನಿರೀಕ್ಷಿತವಾದ ಕೆಲವು ಹೊಣೆಗಳು ವೆಚ್ಚಗಳು ಒಕ್ಕೂಟ ಸರಕಾರದ ಮೇಲೆ ಬಿದ್ದಿರುವಾಗ ಮತ್ತು ಅಂತರ್ ರಾಷ್ಟ್ರೀಯ ಪರಿಸ್ಥಿತಿ ನಮ್ಮ ರಾಷ್ಟ್ರದ ಅಂತರಿಕ ಪರಿಸ್ಥಿತಿ ಹಗಗೆಟ್ಟಿರುವಾಗ ಇಷ್ಟು ಕೊರತೆ ಹೆಚ್ಚಲ್ಲೆಂದು ಅರ್ಥಶಾಸ್ತ್ರ ವಿಶಾರದರು ಒಪ್ಪದಿರಲಾರರು. ಸೈನ್ಯದ ವೆಚ್ಚ, ಆಹಾರ ಪದಾರ್ಥಗಳ ಆಯಾತ ವೆಚ್ಚ, ಪುನರ್ನಿವೇಶನದ ವೆಚ್ಚ, ನೋಕರರ ಸಂಬಳ ಮತ್ತು ಭತ್ತೆಯನ್ನು ಹೆಚ್ಚಿಸಿದುದರಿಂದ ಬರುವ ಹೆಚ್ಚಿನ ವೆಚ್ಚ ಇದೆಲ್ಲವನ್ನೂ ಲೆಕ್ಕಕ್ಕೆ ಹಿಡಿದರೆ ಆಯಕ್ಕಿಂತ ವ್ಯಯ ಹೆಚ್ಚಾಗಾಗದೆ ಗತ್ಯಂತರವಿಲ್ಲೆಂದು ಒಪ್ಪಬೇಕಾಗುವದು. ಈ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿ ಅರ್ಥ ಸಚಿವರು ಯೋಜಿಸಿದ ಉಪಾಯಗಳು ಉಚಿತವೆಂದು ಹೇಳಬಹುದಾಗಿದೆ. ಜನಸಾಮಾನ್ಯದ ಮೇಲೆ ಹೆಚ್ಚಿಗೆ ಭಾರ ಬೀಳದಂತೆ ಯೋಜಿಸಲಾಗಿದೆ. ಮೊತ್ತಮೊದಲು ಅನವಶ್ಯಕ ನೋಕರರ ಸಂಖ್ಯೆಯನ್ನು ಕಡಿಮೆ ಮಾಡಿ ಮಿತವ್ಯಯ ಮಾಡಲು ಹವಣಿಸಿದ್ದಾರೆ. ಮೋಟರುಗಳ ಆಯಾತ ಸುಂಕ, ಸಿಗರೇಟು, ಕಾಫಿ, ಚಹಾ ಮುಂತಾದ ವಿಲಾಸ ಭೋಗ ಸಾಮಾನುಗಳ ಮೇಲೆ ಹೆಚ್ಚು ಕರವನ್ನು ಹೇರಿರುವರು. ಅಲ್ಲದೆ ನಮ್ಮ ಸ್ವತಂತ್ರ ಹಿಂದುಸ್ಥಾನದ ಉದ್ಯೋಗಾಭಿವೃದ್ಧಿಯಾಗಿ ಅದು ಪರದೇಶಗಳನ್ನವಲಂಬಿಸದಂತಾಗಲೆಂಬ ಹಿರಿಯಾಸೆಯಿಂದ ಅರ್ಥಸಚಿವರು ಉದ್ದಿಮೆಗಾರರಿಗೆ ಬೇಕಾದಷ್ಟು ಸವಲತ್ತು ತೋರಿಸಿದ್ದಾರೆ. ಸುಪರ ಟ್ಯಾಕ್ಸನ್ನು ಇಳಿಸಿದ್ದಾರೆ. ಅಮೇರಿಕೆಯ ಅನುಕರಣ ಮಾಡಿ ೧೦೦ ಕ್ಕೆ ೫ ರ ವರೆಗೆ ಕಂಪನಿಗಳು ಮನ್ನಣೆ ಪಡೆದ ಧರ್ಮಾರ್ಥ ಸಂಸ್ಥೆಗಳಿಗೆ ದತ್ತಿಗಳನ್ನು ಕೊಡಬಹುದೆಂದೂ ವ್ಯಕ್ತಿಗಳು ೧೦೦ ಕ್ಕೆ ೧೦ ರಷ್ಟು ಧರ್ಮಾರ್ಥ ಸಂಸ್ಥೆಗಳಿಗೆ ಈ ರೀತಿ ಸಹಾಯ ಮಾಡಬಹುದೆಂದೂ ಹೀಗೆ ದತ್ತಿಯೆಂದು ಕೊಟ್ಟ ಹಣವನ್ನು ಉತ್ಪನ್ನದ ಮೇಲಿನ ಕರವನ್ನು ಆಕರಿಸುವಾಗ ಲಾಭದೊಳಗಿಂದ ಕಳೆಯಬಹುದೆಂದು ಅರ್ಥಸಚಿವರು ಸಾರಿದ್ದಾರೆ. ಸರಕಾರದವರು ತಮಗೆ ಬರುವ ಉತ್ಪನ್ನವನ್ನು ಕಡಮೆ ಮಾಡಿಕೊಂಡರೆಂದು ಇದರಿಂದ ಗೊತ್ತಾಗುವದು. ಆದರೆ ಧರ್ಮಾರ್ಥ ಸಂಸ್ಥೆಗಳು ದೇಶದಲ್ಲಿ ಹೆಚ್ಚಿ ಬಡವರ ಕಲ್ಯಾಣವಾಗಬೇಕಾದರೆ ಸರಕಾರವೂ ತನ್ನ ಪಾಲಿನ ಕರ್ತವ್ಯವನ್ನು ಮಾಡಬೇಕಾಗುವದೆಂಬದನ್ನು ನೆನೆದರೆ ಇದೊಳ್ಳೆ ಯೋಜನೆಯೆಂದು ಹೇಳಬಹುದು. ನಮ್ಮ ಉದ್ದಿಮೆವಾಲರು ಇದರ ಲಾಭವೆಂತು ಮಾಡಿಕೊಳ್ಳುವರೋ ನೋಡಬೇಕು. ಉದ್ದಿಮೆಗಳಿಗೆ ತೋರಿಸಿದ ಸವಲತ್ತುಗಳ ಯೋಗ್ಯ ಲಾಭ ಪಡೆದು ಉದ್ಯೋಗಸ್ಥರು ದೇಶದಲ್ಲಿಯ ಉದ್ಯೋಗ ಧಂದೆಗಳು ಬೆಳೆಯುವಂತೆ ಯೋಜಿಸಿದ್ದಾದರೆ ಎಲ್ಲವೂ ಸುಗಮವಾಗುವುದು. ಒಕ್ಕಲತನಕ್ಕೂ ಹಳ್ಳಿ ಜೀವನಕ್ಕೂ [illegible] ಪದಾರ್ಥಗಳ ಬೆಲೆ ಹೆಚ್ಚಿಗೆ ಬಂದರೆ [illegible] ಧಾನ್ಯ [illegible] ಕೋಟಿ [illegible] ಯೋಗಗಳನ್ನು [illegible] ಅರ್ಥಸಚಿವರ ಯೋಜನೆಗಳಲ್ಲಿ [illegible] ದೇಶ ಅಭಿವೃದ್ಧಿ [illegible] ತ್ತೇವೆ.

ಮದ್ರಾಸದ ಮುನ್ನಡೆ

ಮದ್ರಾಸ ಪ್ರಾಂತವು ಬೇರೆ ಎಲ್ಲ ಪ್ರಾಂತಗಳಿಗಿಂತ ಅನೇಕ ದೃಷ್ಟಿಯಿಂದ ಮುಂದುವರಿದದೆಯೆಂದು ಧಾರಾಳವಾಗಿ ಹೇಳಬಹುದು. ಮಂತ್ರಿಮಂಡಳದ ಸ್ಥಾಪನೆಯ ಕಾಲಕ್ಕೆ ಅಲ್ಲದೆ ಅದರ ಪುನರ್ಘಟನೆಯ ಕಾಲಕ್ಕೆ ಎಷ್ಟೋ ಮತಭೇದ ತಿಕ್ಕಾಟಗಳು ಕಂಡು ಬಂದರೂ ಆಡಳಿತದಲ್ಲಿ ಮಾತ್ರ ಎಲ್ಲಿಯೂ ಶಿಥಿಲತೆ ಕಂಡು ಬರುವುದಿಲ್ಲ. ಗಾಂಧೀಜಿಯ ವಿಧಾಯಕ ಕಾರ್ಯವನ್ನು ಮುಂದೆ ಸಾಗಿಸುವಲ್ಲಿ ಮಂತ್ರಿಮಂಡಳ ಹೆಚ್ಚು ಆಸ್ಥೆ ವಹಿಸಿದೆಯೆಂದೂ ಹೇಳಬಹುದು. ಅದರಲ್ಲಿಯೂ ಮದ್ಯಪಾನ ಪ್ರತಿಬಂಧದ ವಿಷಯದಲ್ಲಿ ಬೇರೆ ಎಲ್ಲ ಪ್ರಾಂತಗಳಿಗಿಂತ ಮದ್ರಾಸ ಪ್ರಗತಿಪಥದಲ್ಲಿಯಿದೆಯೆಂಬಲ್ಲಿ ಸಂದೇಹವಿಲ್ಲ. ಬರುವ ಅಕ್ಟೋಬರ ೨ ರೊಳಗಾಗಿ ಅಂದರೆ ಮಹಾತ್ಮಾ ಗಾಂಧಿಯವರ ಜಯಂತಿ [illegible] ದಿನದೊಳಗಾಗಿ ಇಡೀ ಪ್ರಾಂತದಲ್ಲೆಲ್ಲ ಮದ್ಯಪಾನ ಪ್ರತಿಬಂಧವನ್ನು ಮಾಡಬೇಕೆಂದು ಮದ್ರಾಸ ಸರಕಾರದವರು ಯೋಜಿಸಿದ್ದಾರೆ. ಪ್ರಾಂತದ ಆಯದಲ್ಲಿ ಅಬಕಾರಿ ಉತ್ಪನ್ನವು ಬಹಳವಿದೆಂಬುದು ಸರ್ವಶ್ರುತ. ಇಂಥ ಭಾರಿ ಉತ್ಪನ್ನವನ್ನು ಕಳೆದುಕೊಳ್ಳಲಿಕ್ಕೆ ಸರಕಾರ ಸಹಸಾ ಸಿದ್ಧವಾಗಲಾರದು. ಜನತೆಗೆ ಮದ್ಯವನ್ನು ಕುಡಿಸಿ ಬಂದ ಉತ್ಪನ್ನದಿಂದ ಮಕ್ಕಳ ಶಿಕ್ಷಣದ ಏರ್ಪಾಡು ಮಾಡುತ್ತಿದ್ದುದು ಉಂಟು. ಆದರೆ ನೈತಿಕ ದೃಷ್ಟಿಯಿಂದ ವಿಚಾರ ಮಾಡಿ, ಕಾಂಗ್ರೆಸು, ಮಹಾತ್ಮಾ ಗಾಂಧಿಯವರು ಇದಕ್ಕೆ ಕೊಟ್ಟ ಮಹತ್ವವನ್ನು ನೆನೆದು ಮದ್ರಾಸ ಸರಕಾರವು ಈ ಮದಿರಾ ರಾಕ್ಷಸದ ನಿರ್ಮೂಲನ ಮಾಡಲು ಮುಂದಾದುದು ಅಭಿನಂದನೀಯ ಮತ್ತು ಅನುಕರಣೀಯವಾಗಿದೆ. ಹೀಗೆ ಉತ್ಪನ್ನವು ಕಡಮೆಯಾಗಿದ್ದರೂ ಸರಕಾರದವರು ಹೊಸ ಕರವನ್ನೇನೂ ಹೇರದೆ ಉಳಿತಾಯದ ಮುಂಗಡ ಪತ್ರವನ್ನೆ ಮಂಡಿಸಿದ್ದು ಮತ್ತಷ್ಟು ಅಭಿನಂದನೀಯ. ಇದಲ್ಲದೆ ಮದ್ರಾಸ ಸರಕಾರದವರು ಜೂಜಾಟವನ್ನು ನಿಲ್ಲಿಸಬೇಕೆಂದು ಗೊತ್ತುಪಡಿಸಿ ಆ ಸಂಬಂಧದ ಮಸೂದೆಯೊಂದನ್ನು ತಂದು ಪರಿಶೀಲಕ ಸಮಿತಿಗೆ ಅದನ್ನು ಕಳಿಸಿದರು. ಕುದುರೆ ಜೂಜಾಟದಿಂದ ಜನ ಎಷ್ಟೊಂದು ಹಣ ಹಾಳು ಮಾಡಿಕೊಳ್ಳುತ್ತಾರೆಂಬುದನ್ನು ನೆನೆದರೆ ಇಂಥ ಮಸೂದೆ ಎಂದೋ ಬರಬೇಕಾಗಿತ್ತೆಂದು ಹೇಳಬೇಕಾಗುವದು. ಆದರೆ ಇದೆಲ್ಲ ಸರಕಾರಕ್ಕೆ ಉತ್ಪನ್ನದ ಬಾಬುಗಳಾದ್ದರಿಂದ ಅವನ್ನು ಕಳೆದುಕೊಳ್ಳಲೂ ಅದು ಸಹಸಾ ಸಿದ್ಧವಾಗುವದಿಲ್ಲ. ಕಾಂಗ್ರೆಸ ಸರಕಾರದಂಥ, ಜನತೆಯ ನೀತಿರೀತಿಗಳ ಸುಧಾರಣೆಯತ್ತ ಹೆಚ್ಚು ಗಮನಕೊಡುವಂಥ ಸರಕಾರಗಳು ಮಾತ್ರ ಇದೆಲ್ಲ ಅನೈತಿಕ ಬಗೆಯಿಂದ ಸಂಪಾದಿಸಿದ ಹಣವನ್ನು ಕಳೆದುಕೊಳ್ಳಲು ಸಿದ್ಧವಾಗಬಲ್ಲವು. ಮದ್ರಾಸ ಪ್ರಾಂತ ಈ ದಿಸೆಯಲ್ಲಿ ಇಟ್ಟ ಹೆಜ್ಜೆ ಯಶಸ್ವಿಯಾಗಿ ಉಳಿದ ಪ್ರಾಂತಗಳು ಅದನ್ನು ಅನುಸರಿಸುವಂತಾಗಲಿ.

ಸುಸ್ವಾಗತ

ಇಂದು ಮಾರ್ಚ ೮ ನೇ ತಾರೀಖು ದಕ್ಷಿಣ ಸಂಸ್ಥಾನಗಳ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕಂಥ ದಿನ. ದಕ್ಷಿಣದಲ್ಲಿಯ ಹದಿನಾರು ಸಂಸ್ಥಾನಗಳು ಇಂದು ಮುಂಬಯಿ ಪ್ರಾಂತದಲ್ಲಿ ವಿಲೀನ ಹೊಂದಿ ಸಂಸ್ಥಾನಿಕರ ಏಕತಂತ್ರಾಧಿಕಾರದಿಂದ ಮುಕ್ತವಾದವು. ಅಲ್ಲಿನ ಜನರು ಹೊಣೆಗಾರ ರಾಜ್ಯವನ್ನು ಪಡೆಯುವದಕ್ಕಾಗಿ ಬಹಳ ದಿನಗಳಿಂದ ಪ್ರಯತ್ನಿಸುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬದಲಾಗಿ ಸಂಸ್ಥಾನಗಳು ವಿಲೀನ ಹೊಂದಿ ಒಕ್ಕೂಟದ ಭಾಗಗಳಾಗಿ ಬಿಟ್ಟದ್ದರಿಂದ ಸಂಸ್ಥಾನ ಪ್ರಜೆಗಳೂ ಒಕ್ಕೂಟ ಪ್ರಜೆಗಳಾದರು. ಇಂದು ಈ ಸಂಸ್ಥಾನಗಳಲ್ಲೆಲ್ಲ ಉತ್ಸವವೇ ಉತ್ಸವ. ಈ ಸಂಸ್ಥಾನ ಪ್ರಜೆಗಳನ್ನು ಹಿಂದೀ ಒಕ್ಕೂಟ ಪ್ರಜೆಗಳು ಸ್ವಾಗತಿಸುವರೆಂಬಲ್ಲಿ ಸಂದೇಹವಿಲ್ಲ. ಎಲ್ಲ ದೃಷ್ಟಿಯಿಂದಲೂ ಅನುಕೂಲವಾಗುವಂತೆ ಅವುಗಳು ಆಯಾ ಜಿಲ್ಲೆಗಳಲ್ಲಿ ಸೇರಿಸಲ್ಪಡುವವೆಂದು [illegible] ಬಯಸುವೆವು.

ಅಂತರಾಷ್ಟ್ರೀಯ

ಬ್ರಿಟಿಶರ ಪೆಗ್ಗುಂಡಿನ ಗರ್ಜನೆ

ಯೆಹೂದಿ ಗಲಭೆಗಾರರನ್ನು ಹತ್ತಿಕ್ಕಲು ಬ್ರಿಟಿಶರು ಪೆಗ್ಗುಂಡನ್ನು ಮೊನ್ನೆ ಜೆರೂಸಲೆಮಿನಲ್ಲಿ ೩ ಬಾರಿ ಪ್ರಯೋಗಿಸಿದರು. ಇಂತಹ ಪೆಗ್ಗುಂಡುಗಳನ್ನು ನಗರದಲ್ಲಿ ಅವರು ಪ್ರಯೋಗಿಸಿದುದು ಇದೇ ಮೊದಲು. ಅದು ಕೂಡಲೆ ಪರಿಣಾಮಕಾರಿಯಾಯಿತು. ಆ ಕೂಡಲೆ ಅವರು ಯೆಹೂದ್ಯರನ್ನು ನಿಗ್ರಹಿಸದಿದ್ದರೆ ಇನ್ನೂ ಭಯಂಕರ ಆಯುಧಗಳನ್ನು ಬಳಸಲಾಗುವುದೆಂದು ಯೆಹೂದಿ ಮುಖ್ಯ ಅರಬರಿಗೆ ಎಚ್ಚರಿಕೆಯನ್ನು ಸಾರಿದರು.

ಈ ಸಂಗತಿಯು ಬೆತ್ಲೆಹೇಮ್ ರಸ್ತೆಯು ಸನಿಹದಲ್ಲಿ ನಡೆಯಿತು. ಹೀಗೆ ಕಾದಲು ಯೆಹೂದಿಗಳು ವಿಲಿಟರಿ ಕಾರೊಂದರತ್ತ ಗುಂಡು ಹಾರಿಸಿದ್ದೇ ಕಾರಣವಾಯಿತು. ಅ ಕ್ಷಣ ೩ ಸಶಸ್ತ್ರ ಮೋಟಾರು ಕಾರುಗಳು ಅವರನ್ನು ಬೆಂಬತ್ತಿ ಮೋಡಿನಂತೆ ಪೆಗ್ಗುಂಡುಗಳನ್ನು ಹಾರಿಸಿ ತಣ್ಣಗೆ ಮಾಡಿದವು.

ಕೈರೋ—ಹೈಫಾ ರೈಲಿನಲ್ಲಾದ ಸ್ಫೋಟದಿಂದ ಬ್ರಿಟಿಶ ಸಿಪಾಯಿಗಳಲ್ಲಿ ೨೦ ಜನ ಸತ್ತರೆಂದೂ ೩೩ ಜನ ಗಾಯಗೊಂಡರೆಂದೂ ವರದಿ ಬಂದಿದೆ. ಸ್ಫೋಟದಿಂದ ರೈಲಿನ ೪ ಬಂಡಿಗಳು ಒಡೆದು ಚೂರಾದವು. ೨ ವ-ರದ ಕಾರುಗಳು ನುಚ್ಚುನೂರಾದವು. ಒಳಗಿದ್ದ ಪಯಣಿಗರ ದೇಹಗಳು ದಶದಿಕ್ಕುಗಳಲ್ಲಿ ಚೆಲ್ಲಿ ಹೋದವು. ನೂರಾರು ಗಜಗಳ ವರೆಗೆ ರೈಲು ಕಂಬಿಗಳು ಕಿತ್ತು ಹೋದವು.

ನಗರದ ಲೋಕೋಪಯೋಗಿ ಕಾರ್ಯಾಲಯವನ್ನು ಯೆಹೂದಿಗಳು ಮುತ್ತಿ ಅಲ್ಲಿದ್ದ ೧೦ ಸಾವಿರ ಪೌಂಡು ಬೆಲೆಯ ವಸ್ತುಗಳನ್ನು ಅಪಹರಿಸಿಕೊಂಡು ಹೋದರು.

ಈ Hit and run ಕಣ್ಣು ಮುಚ್ಚಾಲೆಯ ಕೂಟಯುದ್ಧದ ಸಾಹಸ್ಯಕ ನೀತಿಯನ್ನು ಅನುಸರಿಸುತ್ತ ಯೆಹೂದಿಗಳೂ ಅರಬರೂ ಪರಸ್ಪರ ಕಚ್ಚಾಡಿ ವಿನಾಶಹೊಂದುವುದನ್ನು ಈಗೀಗ ಬ್ರಿಟಿಶರು ಶಿಕ್ಷಿಸುತ್ತ ಹಲವೊಮ್ಮೆ ಹಾಗೇ ಸುಮ್ಮನಿರುತ್ತ ಸ್ವಾಗಿರುವುದು ನಾಗರಿಕವೆಂದು ಹೇಳಲಾಗುವುದಿಲ್ಲ. ಬ್ರಿಟಿಶರಾಗಲಿ ಸಂಯುಕ್ತ ರಾಷ್ಟ್ರಸಂಘವಾಗಲಿ, ಒಮ್ಮೆಲೆ ಈ ಯಾದವಿಯನ್ನು ನಿಲ್ಲಿಸಿಬಿಡಬೇಕು; ಇಲ್ಲವೆ ಅವರವರಿಗೇ ವ್ಯಾಜ್ಯವನ್ನು ಬಗೆಹರಿಸಿಕೊಳ್ಳಲು ಬಿಟ್ಟು ತಣ್ಣಗೆ ಕುಳಿತುಬಿಡಬೇಕು. ಹಾಗಲ್ಲದೆ ಈ ಪ್ರಕಾರ ಕಾಲಹರಣ ಮಾಡುತ್ತ, ಮುಟ್ಟಿ ಮುಟ್ಟಿ ಬಿಡುತ್ತ ಹೋಗುವುದು ಪ್ರಾಮಾಣಿಕತೆಯ, ಸದಾಶಯದ ಗುರುತಲ್ಲವೆಂದು ಹೇಳದಿರಲಾರೆವು.

ಟ್ರೂಮನ್ನರೊಡನೆ ನಾಡಿಗ ಕೃಷ್ಣಮೂರ್ತಿ

ಕಳೆದ ಕ್ರಿಸ್‌ಮಸ್ ಕಾಲದಲ್ಲಿ ಅಮೇರಿಕದ ಅಧ್ಯಕ್ಷರಾದ ಟ್ರೂಮನ್ನರು ಒಂದು ಪತ್ರಿಕಾಕರ್ತರ ಸಮ್ಮೇಲನವನ್ನು ಕರೆದಿದ್ದರು. ಅಲ್ಲಿಗೆ ೨೫ ಜನ ಪತ್ರಿಕಾ ಪ್ರತಿನಿಧಿಗಳು ಹೋಗಿದ್ದರು. ಹಿಂದೀ ಯುವಪ್ರತಿನಿಧಿಯಾಗಿ ಕನ್ನಡಿಗರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರೂ ಅವರಲ್ಲಿ ಒಬ್ಬರಾಗಿದ್ದರು.

ಮೂರ್ತಿಯವರು ಕ್ರಿಸ್‌ಮಸ್ಸಿಗೆ ಕೆಲ ದಿನಗಳ ಹಿಂದೆ ಟ್ರೂಮನ್ನರನ್ನು ಭೆಟ್ಟಿಯಾಗಲು ವಾಶಿಂಗ್ಟನ್ನಿಗೆ ತೆರಳಿದ್ದರು. ಅವರು ಹಿಂದುಸ್ಥಾನದಲ್ಲಿರುವ ತಮ್ಮ ಪತ್ರಿಕೆಯನ್ನು ಪ್ರತಿನಿಧಿಸಿದ್ದರು. ಆ ಕಾಲದಲ್ಲಿ ಅಲ್ಲಿ ಹಿಂದೀ ರಾಯಭಾರಿ ಹಾಜರಿದ್ದಿಲ್ಲವಾದ ಕಾರಣ ಖಾಸಗಿ ಭೆಟ್ಟಿಗೆ ಅವಕಾಶ ದೊರೆಯಲಿಲ್ಲ. ಆದುದರಿಂದ ಪತ್ರಿಕಾ ಕರ್ತರ ಸಮ್ಮೇಲನದಲ್ಲಿಯ ಭೆಟ್ಟಿಗೇ ಶ್ರೀ. ಮೂರ್ತಿಯವರು ಒಪ್ಪಿಗೆಯಿತ್ತರು.

ಅಧ್ಯಕ್ಷರ ಕ್ರಿಸ್‌ಮಸ್ ಭಾಷಣಕ್ಕೆ ಸ್ವಲ್ಪ ಮುಂಚೆ ನೇಮಿತ ಸಮ್ಮೇಲನ ಕರೆದುದರಿಂದ ಭೆಟ್ಟಿಯು ಬಹಳ ಗಡಿಬಿಡಿಯದಾಯಿತು. ಅಧ್ಯಕ್ಷರು ಮೂರ್ತಿಯವರನ್ನು ಆದರದಿಂದ ಬರಮಾಡಿಕೊಂಡು ಅಭಿನಂದನೆ ವಿನಿಮಯ ಮಾಡಿದರು.

ಸಮ್ಮೇಲನದಲ್ಲಿ ಅಧ್ಯಕ್ಷರು ಬೆಲೆಯ ಏರಿಕೆ, ಪರರಾಷ್ಟ್ರ ಧೋರಣ, ಪರಿಸ್ಥಿತಿ ಸುಧಾರಿಸುವುದೆಂಬ ಭರವಸೆ ಇವುಗಳ ವಿಷಯವಾಗಿ ಹೇಳಿದರು.

ಅನಂತರ ಶ್ರೀ. ನಾಡಿಗರು ಶ್ವೇತಭವನವನ್ನು ಸಂದರ್ಶಿಸಿ ಅದರ ರೇಡಿಯೋ ಕೋಣೆಯನ್ನೂ ಒಟ್ಟಿನ ಸರಳ ಸೌಂದರ್ಯವನ್ನೂ ಮೆಚ್ಚಿದರು. ಹೊರದ ಭಾಗ ಕೆಲವು ಅಭಿಪ್ರಾಯಗಳ ಕ್ಕೆಟ್ಟುಕೊಂಡದಕ್ಕಾಗಿ ಕೆಲವರನ್ನು ಮಿಲಿಟರಿ ಯಲ್ಲೇ ಉಳಿಸಿಕೊಂಡದ್ದರ ವಿರುದ್ಧ ಪಿಕೆಟಿಂಗ ಮಾಡುತ್ತಿದ್ದುದನ್ನು ಕಂಡು ತಾವು ಅದನ್ನು ಹಿಂದುಸ್ಥಾನದ ಪತ್ರಿಕೆಗೆ ಬರೆದು ಹಾಕುವದಾಗಿ ಹೇಳಿದರೆಂದು ಅಮೇರಿಕದ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆ.

ಚೀನದ ವಿಭಜನೆ?

ಚೀನೀ ಕಮ್ಯುನಿಸ್ಟರೊಡನೆ ಕಾಳಗ ನಡೆಸಲು ಚಿಯಾಂಗ ಸರಕಾರಕ್ಕೆ ಅಮೇರಿಕವು ೧೦೦೦ ವಿಮಾನಗಳದೊಂದು ವಾಯುಬಲವನ್ನು ಕೊಡುತ್ತಿರುವುದಾಗಿ ತಿಳಿಯುತ್ತದೆ. ೮೩೬ ವಿಮಾನಗಳನ್ನು ಆಗಲೇ ಮುಟ್ಟಿಸಲಾಗಿದೆ.

ಇತ್ತೀಚಿನ ಸುದ್ದಿಯ ಪ್ರಕಾರ ಮಂಚೂರಿಯು ಇನ್ನೇನು ಚಿಯಾಂಗರ ಕೈಬಿಟ್ಟು ಹೋಯಿತು ಎಂಬಂತಿದೆ. ಅಲ್ಲದೆ ಕಮ್ಯುನಿಸ್ಟ ಮುಖಂಡನಾದ ಮಾವೊತ್ಸೆತುಂಗನ ಕೈಕೆಳಗೆ ೮ ಲಕ್ಷ ಸೈನಿಕರು ಹಳೆಯ ರಾಜಧಾನಿಯಾದ ಯೆನಾನನ್ನು ಆಕ್ರಮಿಸಲು ಹೊಂಚು ಹಾಕುತ್ತಿದ್ದಾರೆಂದೂ ಸುದ್ದಿಯುಂಟು. ಇದರ ಮೇಲೆ ಕಮ್ಯುನಿಸ್ಟರಿಗೂ ರಾಷ್ಟ್ರೀಯ ಪಕ್ಷೀಯರಿಗೂ ಗುಪ್ತಸಂಧಾನ ನಡೆದು ಚೀನವು ವಿಭಕ್ತವಾಗಿ ಉತ್ತರ ಭಾಗವು ಕಮ್ಯುನಿಸ್ಟರಿಗೂ ದಕ್ಷಿಣ ಮತ್ತು ಮಧ್ಯ ಭಾಗಗಳು ಚಿಯಾಂಗರ ರಾಷ್ಟ್ರೀಯ ಪಕ್ಷದವರಿಗೂ ಸೇರುವುವೆಂದು ವದಂತಿಯಿದೆ.

ನೈಋತ್ಯದಲ್ಲಿ ಪೂರೈಕೆಯ ಮಾರ್ಗಗಳನ್ನು ಪುನಃ ತೆರೆಯಲು ಈಗ ಚಿಯಾಂಗರು ಕೆಲವು ಸೈನ್ಯದ ತುಂಡುಗಳನ್ನು ಕಳುಹಿದಾಗಿ ಸುದ್ದಿ. ಯಿಂಕೋ ರೇವುಪಟ್ಟಣದಿಂದ ರಾಷ್ಟ್ರೀಯ ಸೈನ್ಯಗಳು ಹಿಂಜರಿದಿವೆಯೆಂಬುದು ಮತ್ತೊಂದು ಸುದ್ದಿ. ಅದಕ್ಕೆ ಕಮ್ಯುನಿಸ್ಟರ ದಾಳಿಯಿಂದ ಬಹಳವಾಗಿ ನಷ್ಟ ಹೊಂದಿದ್ದೇ ಕಾರಣವೆಂದು ಹೇಳಲಾಗಿದೆ. ಅದರೆ ಕಮ್ಯುನಿಸ್ಟರು ಮುಕ್ಡೆನ್ನಿಂದ ೫೦ ಮೈಲಿನಲ್ಲಿರುವ ಕೈಯುರ್ನ್ ನಗರವನ್ನು ಕಳೆದುಕೊಂಡ ವಾರ್ತೆಯಿದೆ. ಅಲ್ಲಿ ಸರಕಾರಿ ದಳಗಳು ಶತ್ರುವಿಗೆ ಹೆಚ್ಚು ನಷ್ಟ ಕೊಟ್ಟ ಸುದ್ದಿಯೂ ಬಂದಿದೆ.

ಫೆಬ್ರುವರಿ ೧೮ ರಲ್ಲಿ ಅಧ್ಯಕ್ಷ ಟ್ರೂಮನ್ನರು ೫೭೦ ದಶಲಕ್ಷ ಡಾಲರುಗಳನ್ನು ಚೀನಕ್ಕೆ ಸಹಾಯ ಮಾಡಲು ಅನುಮತಿ ಕೊಡಬೇಕೆಂದು ಕಾಂಗ್ರೆಸ್ಸನ್ನು ಕೇಳಿಕೊಂಡರೆಂದು ಅಮೇರಿಕದ ವಾರ್ತಾಸಂಸ್ಥೆಯೊಂದು ಹೊರಗೆಡಹಿದೆ. ಚೀನದ ಆರ್ಥಿಕ ಪುನರುದ್ಧಾರಕ್ಕಾಗಿ ಈ ಸಹಾಯವನ್ನು ನೀಡಹೋಗಿರುವುದಾಗಿ ಅಧ್ಯಕ್ಷರು ಅಪ್ಪಣೆ ಕೊಡಿಸಿದರೂ ಚಾಣಾಕ್ಷರಾದ ರಾಜನೀತಿಜ್ಞರು—ಇದು ದೇವರ ನೆವ, ಪೂಜಾರಿಗೆ ನೈವೇದ್ಯ—ಎಂಬಂತೆ ಕಮ್ಯುನಿಸ್ಟರನ್ನು ಮೂಲೋತ್ಪಾಟನ ಮಾಡಿ ಚೀನದಲ್ಲಿ ಅಮೇರಿಕದ ವರ್ಚಸ್ಸು ಮತ್ತು ಅಧಿಕಾರಗಳನ್ನು ಸ್ಥಾಪಿಸಿ ತನ್ಮೂಲಕ ಅಮೇರಿಕದ ವ್ಯಾಪಾರಾಭಿವೃದ್ಧಿಯನ್ನೂ ರಾಜಕೀಯ ಬಲೋತ್ಕರ್ಷವನ್ನೂ ಸಾಧಿಸುವ ದೂರದ ಸಂಚೆಂದು ತಿಳಿಯದಿರಲಾರರು.

ನಾಳೆ ೩ನೆಯ ಮಹಾಯುದ್ಧವಾಗುವುದು ಖಂಡಿತವೆನಿಸುವುದಾದರೆ ಅದು ಬಂಡವಲಶಾಹಿ ಮತ್ತು ಕಮ್ಯುನಿಜಂ ತತ್ವಗಳ ಪರಸ್ಪರ ಸ್ಪರ್ಧೆಯಿಂದಲೇ ಎಂಬುದು ಕಟ್ಟಿಟ್ಟ ಮಾತು. ಅದರಿಂದಲೇ ರಶಿಯವನ್ನು ಹೆಡಮುರಿಗೆಗಟ್ಟಿ ಬಂಧಿಸಲು ಅಮೇರಿಕವಿಂದು ಗ್ರೀಸು, ತುರ್ಕಿ, ಚೀನ, ಇರಾಕ್, ಇರಾನ್ ಮುಂತಾದ ಪೂರ್ವಾರ್ಧಗೋಲಕ್ಕೆ ರಾಷ್ಟ್ರಗಳಲ್ಲಿ ತನ್ನ ಜನ, ಧನ, ಯಂತ್ರ, ತಂತ್ರಗಳನ್ನು ನಿಲ್ಲಿಸಿ ಯಾವಾಗಲೆಂದರಾವಾಗ ಶತ್ರುವಿನ ಮೇಲೆ ಛೂ ಬಿಡಲು ಸಿದ್ಧತೆ ನಡೆಸಿದೆ. ಈ ಕಮ್ಯುನಿಸ್ಟ್ ವಿರೋಧದ ಅತ್ಯುಗ್ರ ಕಾರ್ಯಾಚರಣೆ ಹೀಗೇ ಸಾಗಿದರೆ ಭೂಮಿತಾಯಿಗಿನ್ನೊಂದು ರಕ್ತಾಭಿಷೇಕವಾಗಲು ಹೆಚ್ಚು ಕಾಲ ಹಿಡಿಯಲಿಕ್ಕಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಡಬಹುದು. ಅಮೇರಿಕದ ಈ ಪ್ರಯತ್ನದಲ್ಲಿ ಚೀನವೊಂದು ನಿರ್ಣಾಯಕ ಕೇಂದ್ರವೆಂದೇ ಗಣಿಸಬಹುದು. ಇಲ್ಲಿ ಅಮೇರಿಕ ಸೋಲುವ ಲಕ್ಷಣವೇ ಸಧ್ಯ: ಹೆಚ್ಚಾಗಿ ಕಂಡು ಬರುತ್ತಿದೆ.

ಹೊಸ ಜೆಕ್ ಸರಕಾರದ ಚಟುವಟಿಕೆ

ಜೆಕೊಸ್ಲೋವೇಕಿಯದ ಹೊಸ ಕಮ್ಯುನಿಸ್ಟ ಸರಕಾರದ ನ್ಯಾಯ ಮಂತ್ರಿಗಳಾದ ಡಾ. ಕೆಪಿಕರು ನಾಡಿನ ನ್ಯಾಯಪದ್ಧತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ರಾಷ್ಟ್ರೀಯ ಸಂರಕ್ಷಣ ಕಾರ್ಯ ಸಮಿತಿಯನ್ನು ಜಿಲ್ಲೆ ಜಿಲ್ಲೆಗಳಲ್ಲಿ ಸ್ಥಾಪಿಸಿದ್ದು ಬಹು ಮುಖ್ಯವಾದುದು.

ರಾಷ್ಟ್ರೀಯ ಜೀವನದಲ್ಲಿ ರಾಷ್ಟ್ರದ್ರೋಹಿಗಳಿಗೆ ಕೊಡುವ ಕಾರಣ ದಂಡನ ಶಿಕ್ಷೆಯನ್ನು ಪರಿಶೀಲಿಸುವದೇ ಈ ಸಮಿತಿಯ ಕರ್ತವ್ಯ. ಇದರ ಆಜ್ಞೆಗಳನ್ನು ಆಚರಣೆಗೆ ತರುವ ಹೊಣೆ ಸರಕಾರದ್ದಿರುತ್ತದೆ. ರಾಷ್ಟ್ರದ ಆರ್ಥಿಕ ಜೀವನ ಮತ್ತು ರಾಜಕೀಯ ಪಕ್ಷಗಳು ಅದರ ನಿರ್ಣಯಕ್ಕೆ ಬದ್ಧವಿವೆಯೆಂದು ಸಾರಲಾಗಿದೆ.

ಈ ಸುಧಾರಣೆಗಳನ್ನು ಘೋಷಿಸುತ್ತ ಸಾರ್ವಜನಿಕ ಸಭೆಯೊಂದರಲ್ಲಿ ಡಾ. ಕೆಪಿಕರು—೧೫ದಿನಗಳ ಹಿಂದೆ ಕಮ್ಯುನಿಸ್ಟ ರಾಜೀನಾಮೆಯಿಂದ ನಾಡಿಗೆ ದಿಕ್ಕುಗೆಟ್ಟನ್ನುಂಟು ಮಾಡಿದ ಜೆಕ್ ಸಾಮ್ಯವಾದಿ ಪಕ್ಷ, ಪ್ರಜಾ ಪಕ್ಷ ಮತ್ತು ಸ್ಲೋವೇಕ್ ಪ್ರಜಾಪ್ರಭುತ್ವ ಪಕ್ಷಗಳಲ್ಲಿಯ ಯಾವ ಮಂತ್ರಿಯೂ ಮೇಲಿನ ಸಮಿತಿಯ ಪರಿಶೀಲನಕ್ಕೊಳಪಡದೆ ಸಾರ್ವಜನಿಕ ಜೀವನದಲ್ಲಿ ತಲೆಹಾಕಬಾರದೆಂದು ಆಜ್ಞಾಪಿಸಿದರು. ಹಳೆಯ ಅಪ್ರಯೋಜಕ ಕಾಯಿದೆಗಳನ್ನು ಕಿತ್ತು ಹಾಕಿ ಹೊಸ ಘಟನೆಯೊಂದನ್ನು ತಯಾರಿಸಿ ಸಾಮ್ಯವಾದಿ ಪ್ರಜಾರಾಜ್ಯದ ಅಸ್ತಿವಾರವನ್ನು ಹಾಕಲಾಗುವುದೆಂದೂ ಅವರು ಹೇಳಿದರು.

ರಾಷ್ಟ್ರದ ಅಧ್ಯಕ್ಷರಾದ ಡಾ. ಎಡ್ವರ್ಡ್ ಬೆನೆಸರು ಇಷ್ಟರಲ್ಲಿಯೆ ರಾಜೀನಾಮೆ ಕೊಟ್ಟಿದ್ದಾರೆಂದು "ಸಂಯುಕ್ತ-ಕರ್ನಾಟಕ"ದ ಲಂಡನ ಪ್ರತಿನಿಧಿ ಬರೆಯುತ್ತಾನೆ.

ಸ್ವೀಡನ್, ನಾರ್ವೆ ಮತ್ತು ಡೆನ್ಮಾರ್ಕಗಳ ಮುಖ್ಯ ಮಂತ್ರಿಗಳು ಇದೇ ತಾ ೧೫ಕ್ಕೆ ಸ್ಟಾಕ್‌ಹೋಮಿನಲ್ಲಿ ಸಭೆ ಸೇರಿ ಫಿನ್‌ಲಂಡ್ ಮತ್ತು ಜೆಕೋಸ್ಲೋವೇಕಿಯಗಳಲ್ಲಿ ನಡೆದ ಘಟನೆಗಳನ್ನು ಚರ್ಚಿಸಲಿರುವರೆಂದು ತಿಳಿಯುತ್ತದೆ.

ಸಧ್ಯದಲ್ಲಿ ಅಧಿಕಾರಾರೂಢವಾದ ಜೆಕ್ ಕಮ್ಯುನಿಸ್ಟ ಪಕ್ಷವನ್ನು ಜೆಕ್ ಸಾಮ್ಯವಾದಿ ಪಕ್ಷವೆಂದು ಅಧಿಕೃತವಾಗಿ ಕರೆಯಲಾಗುವದೆಂದು ಹೇಳಲಾಗಿದೆ.



ಬಿಂದು ಮಾಧವ ಕೊಣ್ಣೂರರು

ಅಮೇರಿಕದಲ್ಲಿ ಇಂದು ಸುಮಾರು ನೂರು ಕನ್ನಡಿಗರಿದ್ದಾರೆ: ಶ್ರೀ ಬಿಂದು ಮಾಧವ ಕೊಣ್ಣೂರರು ವಿಜಾಪುರದ ಅಚ್ಚ ಕನ್ನಡಿಗರು. ಮುಂಬಾಯಿ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದು ಇಂಗ್ಲೆಂಡಿಗೆ ಹೋಗಿ ಅಲ್ಲಿ ಟೆಕ್ಸ್‌ಟೈಲ್ ಕಾರ್ಖಾನೆಯಲ್ಲಿ ಒಂಬತ್ತು ತಿಂಗಳು ತರಬೇತಿ ಹೊಂದಿ, ಹೋದ ವರ್ಷ ಅಮೇರಿಕಕ್ಕೆ ಬಂದರು.

ಮಿಸ್ಸೂರಿ ವಿಶ್ವ ವಿದ್ಯಾಲಯದಲ್ಲಿ 'Agriculture' ವ್ಯವಸಾಯದ ವಿಷಯದಲ್ಲಿ ಎಂ. ಎ. ಡಿಗ್ರಿಗೆ ಓದುತ್ತಿದ್ದಾರೆ. ಅವರು ಸರ್ಕಾರದ ವಿದ್ಯಾರ್ಥಿ ವೇತನದಿಂದ ಬರದೆ ತಮ್ಮ ಸ್ವಶಕ್ತಿಯಿಂದ ಇಲ್ಲಿಗೆ ಬಂದು ಈಗ ದುಡಿದು ಜೀವನ ನಡೆಯಿಸಿಕೊಂಡು ಅಭ್ಯಾಸ ಮಾಡುತ್ತಿದ್ದಾರೆ.

ಭಾರತೀಯ ವಿದ್ಯಾರ್ಥಿಗಳಿಗೆಲ್ಲಾ ಹಿರಿಯರಾದ ಇವರು ಆಗಾಗ್ಗೆ ಸಂತೈಸಿ, ಜ್ಞಾನ ಹೇಳಿ, ಅಡಿಗೆ ಮಾಡಿ ಬಡಿಸಿ, ಜೋತಿಷ್ಯ ಹೇಳಿ, ಎಲ್ಲರನ್ನೂ ಅವರ ನಗೆಯ ಬುಗ್ಗೆಯಲ್ಲಿ ಮುಳುಗಿಸಿಕೊಂಡು ಬಿಟ್ಟಿದ್ದಾರೆ. ಅಂದಿನ ೩೦೦ ರೂ. ಸಂಬಳ ತೆಗೆಯುತ್ತಿದ್ದ ರಾಯರು ಇಂದು ವೈಸನೆಸ್ಸಿ ಮುಸುರೆ ಪಾತ್ರೆ ತೊಳೆಯುತ್ತ ದುಡಿದು ಓದುತ್ತಿರುವ ದೃಶ್ಯ ಕನ್ನಡಿಗರಿಗೆ ಹೆಮ್ಮೆಯ ಮಾತು.

ಫಿನ್ಲೆಂಡಿನಲ್ಲಿ ರಶಿಯದ ಹಸ್ತ?

ರಶಿಯ ಮತ್ತು ಫಿನ್ಲೆಂಡುಗಳ ನಡುವೆ ಪರಸ್ಪರ ಸಹಾಯಕ ಮಿಲಿಟರಿ ಒಪ್ಪಂದವನ್ನು ಮಾಡಿಕೊಳ್ಳುವ ಸೂಚನೆಯನ್ನು ಜನರಲಿಸಿಮೋ ಸ್ಟಾಲಿನ್ನರು ಫಿನ್ನಿಶ್ಯರ ಮುಂದೆ ಇಟ್ಟಿದ್ದಾರೆ. ಇದಕ್ಕೆ ಫಿನ್ನಿಶ್ಯರು ಯಾವ ಉತ್ತರವನ್ನು ಕೊಡುವರೆಂಬುದನ್ನು ಅವರ ಹತ್ತಿರದ ಸ್ಕ್ಯಾಂಡಿನೇವಿಯನ್ ರಾಷ್ಟ್ರಗಳು ಭಯ ಕುತೂಹಲಗಳಿಂದ ಇದಿರು ನೋಡುತ್ತಿವೆ.

ಫಿನ್ನಿಶ್ ಸರಕಾರವು ಈ ಸೂಚನೆಯನ್ನು ಪಾರ್ಲಿಮೆಂಟಿನ ಮುಂದೆ ಇಡುವದೆಂದು ತಿಳಿದು ಬಂದಿದೆ.

ಫಿನ್ಲೆಂಡಿನಲ್ಲಿ ರಶಿಯವು ತನ್ನ ವರ್ಚಸ್ಸನ್ನು ಸ್ಥಾಪಿಸಲು ಹೀಗೆ ಸೂಚನೆಯನ್ನು ತಂದಿರಬೇಕೆಂದು ತರ್ಕಿಸಿ ಸ್ವೀಡನ್, ಡೆನ್ಮಾರ್ಕ ಮುಂತಾದ ನಾಡುಗಳು ಕಳವಳಕ್ಕೀಡಾಗಿವೆ. ಕಮ್ಯುನಿಸ್ಟ ಸರಕಾರವನ್ನು ಫಿನ್ಲೆಂಡಿನಲ್ಲಿ ಸ್ಥಾಪಿಸಲು ಇದೊಂದು ಸಂಚೆಂದು ಅವುಗಳ ವಿಚಾರ. ಈ ಒಪ್ಪಂದವನ್ನು ಫಿನ್ಲೆಂಡು ರಶಿಯದೊಡನೆ ಮಾಡಿಕೊಳ್ಳಲೊಪ್ಪಿದರೆ ಸ್ವೀಡನ್ನು ತನ್ನ ತಾಟಸ್ಥ್ಯವನ್ನು ಬಿಟ್ಟುಬಿಡುವುದೆಂದು ಸ್ಟಾಕ್‌ಹೋಮಿನಲ್ಲಿ ಹೇಳಲಾಗುತ್ತಿದೆ.

ಇದು ಪಶ್ಚಿಮ ಯುರೋಪಿನಲ್ಲಿಯ ಅಮೇರಿಕದ ವರ್ಚಸ್ಸನ್ನು ಮೆಟ್ಟಿ ತನ್ನದನ್ನು ಸ್ಥಾಪಿಸಲು ರಶಿಯ ಹೂಡಿದ ತಂತ್ರವೆಂಬುದು ಸ್ವಯಂಸಿದ್ಧವಿದೆ.

ಕುರ್ದರ ಬೆದರಿಕೆ

ಕುರ್ದರೆಂಬ ಕಾಡು ಜನರು ಪರ್ಶಿಯದ ಸೈನ್ಯದೊಡನೆ ಯುದ್ಧ ಮಾಡಿ ಸೋತು ಕಳೆದ ವರ್ಷ ರಶಿಯಕ್ಕೆ ಓಡಿ ಹೋಗಿದ್ದರು. ಅವರೀಗ ರಶಿಯದ ಅಧಿಕಾರಿಗಳ ನೆರವಿನಿಂದ ಪರ್ಶಿಯವನ್ನು ಪುನಃ ಪ್ರವೇಶಿಸುವ ಪ್ರಯತ್ನವನ್ನು ಮಾಡಲಿದ್ದಾರೆ.

ರಶಿಯವು ಜನವರಿ ೩೧ ರಲ್ಲಿ ಅಮೇರಿಕದ ಮಿಲಿಟರಿ ವಿಶಿಷ್ಟಜ್ಞರನ್ನು ಪರ್ಶಿಯದೊಳಗೆ ಬಿಟ್ಟದ್ದನ್ನು ವಿರೋಧಿಸಿದ್ದಕ್ಕೆ ಪೋಲಿಸ ಉತ್ತರವನ್ನು ಪರ್ಶಿಯವು ರಶಿಯಕ್ಕೆ ಕೊಟ್ಟಿದೆ.

ಕುರ್ದರ ಸಂಖ್ಯೆ ಸುಮಾರು ೩೦ ಲಕ್ಷವಾಗಬಹುದು. ಅವರು ಪರ್ಶಿಯ, ತುರ್ಕಿ, ಇರಾಕ ಮತ್ತು ಸಿರಿಯಗಳಿಗೆ ಸೇರಿದ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಅವರಲ್ಲಿ ಪ್ರತ್ಯೇಕ ಕುರ್ದಿಸ್ತಾನದ ಕನಸು ತಲೆದೋರಿದೆಯೆಂದೂ ಹೇಳಲಾಗುತ್ತದೆ.



ಮಿಸ್ ಸಿಸಿಲಿ ಉಷ್ಟ್ಲಂ— ೨೩ ವರ್ಷದ ಈ ಬ್ರಿಟಿಶ ಯುವತಿ ಬೆಲ್ಗ್ರೇಡಿನಲ್ಲಿರುವ ರಾಯಭಾರಿ ಮಂಡಲದ ೩ನೆಯ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟಿದ್ದಾಳೆ ಮತ್ತು ಪರರಾಷ್ಟ್ರ ಮಂತ್ರಿ ಖಾತೆಯಲ್ಲಿ ರಾಯಭಾರ ಹುದ್ದೆ ಪಡೆದ ಹೆಂಗಸರಲ್ಲಿ ಇವಳೇ ಮೊದಲಿಗಳು.

ಕೂಲಿ ನಿಯಂತ್ರಣದ ಬಗ್ಗೆ ಬ್ರಿಟನ್ ತೆಗೆದುಕೊಂಡ ಕ್ರಮ

ಬೆಲೆಯ ಏರಿಕೆಯು ಯುದ್ಧದ ಒಂದು ಅನಿವಾರ್ಯ ಪರಿಣಾಮ. ಇದು ಕೆಲವೇ ರಾಷ್ಟ್ರಗಳಿಗೆ ಹಿಡಿದ ರೋಗವಲ್ಲ; ವಿಶ್ವವ್ಯಾಪಿಯೆನಿಸಿಬಿಟ್ಟಿದೆ. ಈಗಲೋ ಆಗಲೋ ಕೈಮೀರಿ ಹೋಗುವಂತಿರುವ ಈ ಪಿಡುಗನ್ನು ತ್ವರೆಯಿಂದ ಹದಕ್ಕೆ ತರಬೇಕಾಗಿದೆ. ಇದು ಎಲ್ಲ ನಾಡುಗಳಲ್ಲೂ ಕಂಡುಬರುವ ವ್ಯಾಧಿಯಾದುದರಿಂದ ಇದರ ನಿವಾರಣೆಗಾಗಿ ವೈಯುಕ್ತಿಕ ರಾಷ್ಟ್ರಗಳು ಕೈಕೊಂಡ ಕ್ರಮಗಳು ಎಲ್ಲರಿಂದಲೂ ಪರಿಶೀಲನೀಯವೆನಿಸುತ್ತವೆ; ಆದುದರಿಂದ ಅದರ ಪರಿಹಾರೋಪಾಯವು ತಯಾರಿಕೆ ಮತ್ತು ಪ್ರಯೋಗಗಳಲ್ಲಿ ವಿಶ್ವವ್ಯಾಪ್ತಿಯುಳ್ಳದ್ದಾದರೆ ಅತ್ಯಂತ ಪರಿಣಾಮಕಾರಿಯೆನಿಸೀತು.

ಇತ್ತೀಚೆಗೆ ಅಧ್ಯಕ್ಷ ಟ್ರೂಮನ್ನರು ಬೆಲೆಯ ಏರಿಕೆಯನ್ನು ಹೀಗೇ ಏರಗೊಟ್ಟರೆ ಸಂಯುಕ್ತ ಸಂಸ್ಥಾನದ ಆರ್ಥಿಕ ಸ್ಥಿತಿಯ ಮೇಲೆ ಎಂತಹ ದುಷ್ಪರಿಣಾಮವುಂಟಾಗಬಹುದೆಂಬುದರ ಬಗ್ಗೆ ಅತಿ ತ್ವರೆಯ ಎಚ್ಚರಿಕೆಯನ್ನು ಕಾಂಗ್ರೆಸಿಗೆ ಕೊಟ್ಟಿದ್ದು ಸುವಿದಿತವಿದೆ. ಅವರ ಎಚ್ಚರಿಕೆಯ ತಳ್ಳಿವಂಪರೆ, ಇನ್ನೂ ಬೆಲೆಯೇರಿತೆಂದರೆ ಅದು ಕೇವಲ ಅಮೇರಿಕದ ಸಂಯುಕ್ತ ಸಂಸ್ಥಾನಕ್ಕಷ್ಟೇ ಅಲ್ಲ, ಇಡಿ ಜಗತ್ತಿಗೇ ವಿನಾಶವನ್ನು ತಂದೊಡ್ಡಬಹುದು—ಎಂಬುದು.

ಮಹಾವಿಪತ್ತು

ಬ್ರಿಟನ್ನಿನಲ್ಲಿ ಸರಕಾರವು ವೈಯಕ್ತಿಕ ಆದಾಯ, ವೆಚ್ಚ ಮತ್ತು ಪರಮಾವಧಿಗೇರಿದ ಬೆಲೆಗಳ ಮೇಲೆ ಒಂದು ಅತಿ ಮುಖ್ಯವಾದ ಬೇಳಿಕೆಯನ್ನು ಹೊರಡಿಸಿದೆ. ಬ್ರಿಟನ್ನಿನ ಆರ್ಥಿಕ ಸುಸ್ಥಿತಿಯು ಮುಖ್ಯವಾಗಿ ಅಲ್ಲಿಯ ಸುಮಾರು ೫ ಕೋಟಿ ಜನರಿಗೆ ಬೇಕಾದ ಆಹಾರ ಮತ್ತು ಇತರ ಸಾಮಗ್ರಿಗಳನ್ನು ಕೊಳ್ಳಲು ಅಗತ್ಯವಾದಷ್ಟು ಸಾಮಾನುಗಳನ್ನು ತಯಾರಿಸಿ ನಿರ್ಯಾತ ಮಾಡುವ ಶಕ್ತಿಯನ್ನೂ ನಾಡಿನ ಉದ್ದಿಮೆಗಳು ಯಥಾವತ್ತಾಗಿ ನಡೆಯುತ್ತಿರುವಂತೆ ಮಾಡುವುದನ್ನೂ ಅವಲಂಬಿಸಿದೆ. ಇಂದು ಕಂಡು ಬರುವ ಜಾಗತಿಕ ವ್ಯಾಪಾರದಲ್ಲಿಯ ಸ್ಪರ್ಧೆಯ ಪರಿಸ್ಥಿತಿಯಲ್ಲಿ ಸಂಯುಕ್ತ ರಾಜ್ಯದ ಉತ್ಪಾದನದ ವೆಚ್ಚವು ಅತಿ ಮುಖ್ಯವಾದುದು. ಉತ್ಪಾದನದ ವೆಚ್ಚವು ಸಾಮಾನ್ಯವಾಗಿ ಒಂದು ಉದ್ಯಮವು ಲಾಭ, ಕೂಲಿ ಮತ್ತು ಸಂಬಳಗಳಿಗಾಗಿ ಎಷ್ಟನ್ನು ಖರ್ಚುಮಾಡುತ್ತದೆ ಎಂಬುದರ ಮೇಲೆ ಅವಲಂಬಿಸಿದೆ. ಮತ್ತು ಈ ಲಾಭ, ಕೂಲಿ, ಸಂಬಳಗಳು ವೈಯಕ್ತಿಕ ಆದಾಯದ ರೂಪದಲ್ಲಿ ಪದಾರ್ಥಗಳ ಪರಿಮಾಣಾನುಸಾರವಾಗಿ ಉಪಲಭ್ಯವಾದ ಒಟ್ಟು ಹಣದ ಸಂಖ್ಯಾಪರಿಮಿತಿಯನ್ನು ಸ್ಥಿರೀಕರಿಗೊಳಿಸ ಬಲ್ಲವು.

ಉಳಿದ ನಾಡುಗಳಲ್ಲಿರುವಂತೆ ಬ್ರಿಟನ್ನಿನಲ್ಲಿ ಇಂದು ಪದಾರ್ಥಗಳಿಗಿಂತ ದುಡ್ಡು ಹೆಚ್ಚಿದೆ ಮತ್ತು ಆ ಕಾರಣದಿಂದ ಪರಿಸ್ಥಿತಿ ಹದಕ್ಕೆ ಬರಬೇಕಾದರೆ ಬಹಳ ಕಾಲಬೇಕು ಎಂಬ ಸ್ಥಿತಿಯಿಲ್ಲ. ಸರಕಾರವು ವೈಯಕ್ತಿಕ ಆದಾಯದ ಮೇಲೆ ಹಾಕಿದ ನೇರವಾದ ಕರ ಭಾರದಿಂದಲೂ ವಿತರಣವಾಗುವ ಲಾಭದ ಮೇಲಿನ ಕರಗೆಯಿಂದಲೂ ಬಹಳ ಮಟ್ಟಿಗೆ ಅತಿಪ್ರಸರಣವನ್ನು ತಡೆಗಟ್ಟಲು ಹವಣಿಸಿದೆ. ಈ ಧೋರಣದ ಪರಿಣಾಮವಾಗಿ ೭೯೯ ಮತ್ತು ೯೩೨ ಕೋಟಿ ರೂಪಾಯಿಗಳ ನಡುವೆ ಉಳಿದ ಅಂತರವು ಮಾರ್ಚ ೩೧ ರಲ್ಲಿ ಮುಗಿದ ವರ್ಷದ ಮುಂಗಡ ಪತ್ರಿಕೆಯ ೪೨೬೦ ಕೋಟಿ ರೂಪಾಯಿಗಳ ಲೆಕ್ಕದಿಂದ ತಿಳಿದುಬರುತ್ತದೆ. ಅದರ ಮುಂಗಡ ಪತ್ರಿಕೆಯಲ್ಲಿ ಕಾಣಿಸಲಾದ ಇಷ್ಟು ದೊಡ್ಡ ಪರಿಮಾಣದ ಉಪಾಯ ಕೂಡ ಸಾಕಾಗದೆಂದು ಸ್ಪಷ್ಟವಾಗಿ ಒಪ್ಪಲಾಗಿದೆ. ಇಲ್ಲಿಯವರೆಗಿನ ಅನುಭವದ ಪ್ರಕಾರ, ಏರುತ್ತಿರುವ ಬೆಲೆಗೂ ಆದಾಯಕ್ಕೂ ಎಂದಿನಂತೆ ಸ್ಪರ್ಧೆಯು ಪ್ರಾರಂಭವಾಗದಂತೆ ನೋಡಿಕೊಳ್ಳಬೇಕಾದರೆ ಇನ್ನೂ ಎಷ್ಟೋ ಕೆಲಸಗಳನ್ನು ಮಾಡಬೇಕಾಗುತ್ತದೆ. ಅಂತಹ ಸ್ಪರ್ಧೆಯುಂಟಾದಲ್ಲಿ ಯಾವಾಗಲೂ ಕಾಲಕ್ರಮೇಣ ಬೆಲೆಯೇ ಗೆದ್ದು ನಾಡಿನಲ್ಲಿ ಅವರ್ಣನೀಯವಾದ ಬಡತನ, ನಿರುದ್ಯೋಗ ಮತ್ತು ಅತೃಪ್ತಿಗಳನ್ನು ಉಂಟುಮಾಡುತ್ತದೆ.

ಎರಡು ವಿಕಲ್ಪಗಳು

ಬ್ರಿಟನ್ನಿನ ಅತಿದಿಕ್ಕಟ್ಟಿನಂತಹ ಅತಿಪ್ರಸರಣ ಪ್ರತಿಭಟನೆಯ ಕಾಲದ ಈ ಕಾಲದಲ್ಲಿ ಆದಾಯದ ಏರಿಕೆಯ ಮೇಲೊಂದು ತಡೆಹಾಕುವ ಮೇಲ್ವಾಣಿಯನ್ನು ಕಟ್ಟುನಿಟ್ಟಿನಿಂದ ಇಲ್ಲದೆ ಕೇವಲ ಉತ್ಪಾದನದ ಉತ್ಕರ್ಷಕ್ಕೆ ಬದಲಾಗಿ ಮಾತ್ರ ಬೆಲೆಯ ಏರಿಕೆಗೆ ಅವಕಾಶ ಕೊಡುವುದರಿಂದ ದುಷ್ಪರಿಣಾಮಗಳನ್ನು ಬೆಲೆಯ ವಿರುದ್ಧವಾಗಿ ಎತ್ತಿ ಕಟ್ಟಬಹುದು. ೨ನೆಯ ವಿಕಲ್ಪವು ಸಂಪೂರ್ಣವಾಗಿ ಪರಿಣಾಮಕಾರಿಯಾಗಬೇಕಾದರೆ ಹೆಚ್ಚಿನ ಉತ್ಪಾದನೆಯು ಹೆಚ್ಚಿದ ಆದಾಯಕ್ಕಿಂತಲೂ ಹೆಚ್ಚು ಬೆಲೆ ಬಾಳುವುದಾಗಿರಬೇಕು. ಅಂತಹ ಧೋರಣಗಳು ಸ್ವಾಭಾವಿಕವಾಗಿ ಹೊಸ ಸಮಸ್ಯೆಗಳನ್ನು ಹುಟ್ಟಿಸುವುವು. ಮತ್ತು ಎಲ್ಲಕ್ಕೂ ಮುಖ್ಯವಾದ ವಿವಿಧೋದ್ಯೋಗಗಳಿಂದ ಬರುವ ವೈಯಕ್ತಿಕ ಆದಾಯಗಳಲ್ಲಿ (ಕೂಲಿ ಸಂಬಳ ಕೂಡಿ) ಹೊಸ ವಿಧದ ಸಂಬಂಧದ ಕಲ್ಪನೆ ನೆಲೆನಿಲ್ಲಬೇಕೆಂಬುದಕ್ಕೆ ಒಯ್ದು ಮುಟ್ಟಿಸುವುವು.

ಬೇರೆ ಬೇರೆ ಉದ್ಯೋಗಗಳ ಕೂಲಿಗಳ ನಡುವೆ ಇರುವ ಪರಂಪರಾಗತವಾದ ಮತ್ತು ರೂಢಿಬದ್ಧವಾದ ಸಂಬಂಧಗಳನ್ನು ಪುನರ್ವ್ಯವಸ್ಥೆಗೊಳಿಸುವದು ಅಗತ್ಯ. ಆವಶ್ಯಕ ಕೆಲಸದ ಆರ್ಥಿಕ ಬೆಲೆಗನುಗುಣವಾಗಿ ಸಂಬಳ ಕೊಡಬೇಕಲ್ಲದೆ ಹಳೆಯ ರೂಢಿಗಳಿಗನುಸಾರವಾಗಿ ಅಲ್ಲ; ಬಟ್ಟೆ, ಒಕ್ಕಲುತನ ಮತ್ತು ಕಲ್ಲಿದ್ದಲು ಕೋರುವುದು ಮುಂತಾದ ಕೆಲಸಗಾರರು ಕಡಿಮೆಯಿರುವ ಬ್ರಿಟಿಶ ಉದ್ಯೋಗಗಳಲ್ಲಿ ಶ್ರಮಕ್ಕೆ ದೊರೆವ ಪ್ರತಿಫಲದಲ್ಲಿ ನ್ಯಾಯವಾದ ಸಮತೋಲವಿಲ್ಲ. ಇದನ್ನರಿತು, ಇಂದಿನ ತ್ವರಿತವಾದ ಅವಶ್ಯಕತೆಯನ್ನು ತಿಳಿದು, ಹಿಂದಿನ ಐತಿಹಾಸಿಕ ಗತಾನುಗತಿಕತೆಯನ್ನು ಲಕ್ಷಿಸದೆ, ಸರಕಾರದ ಧೋರಣವಿಂದು ಕೂಲಿಕಾರರು ಕಡಿಮೆಯಿರುವ ಉದ್ಯೋಗಗಳಲ್ಲಿ ಮಾತ್ರ ಕೂಲಿ ಹೆಚ್ಚಿಸಿ ಅವುಗಳತ್ತ ಕೂಲಿಕಾರರನ್ನು ಆಕರ್ಷಿಸುವುದರಲ್ಲಿ ತೊಡಗಿದೆ.

ಆದಾಯಕ್ಕೆ ಮೊದಲು ಉತ್ಪಾದನೆ

ಇದೊಂದನ್ನು ಬಿಟ್ಟು ತೆರಿಗೆಯಿಂದಲ್ಲದೆ ಉಳಿದ ಯಾವ ಸಾಧನದಿಂದಲೂ ನೇರವಾಗಿ ವೈಯಕ್ತಿಕ ಆದಾಯದಲ್ಲಿ ಕೈಹಾಕಬಾರದೆಂಬುದೇ ಸರಕಾರದ ಧೋರಣ; ನಾಡಿನ ಸಂತೆಗೆ ಹೆಚ್ಚು ಹೆಚ್ಚು ಸಾಮಾನುಗಳು ಮತ್ತು ಕೆಲಸಗಾರರು ದೊರಕುವವರೆಗೆ ವೈಯಕ್ತಿಕವಾದ ಧನಸಹಾಯವನ್ನು ಸಾಮಾನ್ಯ ರೀತಿಯಿಂದ ಹೆಚ್ಚಿಸುವುದಕ್ಕೆ ಅದು ವಿರುದ್ಧವಿದೆ. ಹಾಗೆಯೇ ಸಾಮೂಹಿಕವಾದ ಕೂಲಿ, ಸಂಬಳಗಳ ಒಪ್ಪಂದಗಳಿಗೆ ಗಟ್ಟಿಯಾಗಿ ಅಂಟಿಕೊಂಡಿರಬೇಕೆಂಬುದನ್ನು ಅದು ಮುಖ್ಯವೆಂದು ತಿಳಿಯುತ್ತದೆ. ಏಕೆಂದರೆ ಅದೊಂದೇ ಕ್ರಮಬದ್ಧವಾದ ಬದಲಾವಣೆಗೆ ಮಾರ್ಗವೆನಿಸಿದೆ. ಅಲ್ಲದೆ ಸರಕಾರವು ಸಾಮಾನ್ಯ ಹಿತದ ಕಡೆ ಕೊಡುವಷ್ಟು ಲಕ್ಷ್ಯವನ್ನು ವೈಯಕ್ತಿಕ ಹಿತದತ್ತ ಕೊಡಲು ಬಯಸುವದಿಲ್ಲ.

ಉದ್ಯೋಗ ಸಂಪೂರ್ಣವಾಗಿರುವಾಗ ಅತಿಪ್ರಸರಣದ ಅಪಾಯಗಳನ್ನು ಬೇಗನೆ ಪರಿಹರಿಸುವುದೂ ಬ್ರಿಟನ್ನಿನ ಕರ್ತವ್ಯ. ಇತ್ತೀಚೆಗೆ ಹಣಕಾಸಿನ ಮಂತ್ರಿಗಳಾದ ಸರ್ ಸ್ಟ್ಯಾಫರ್ಡ್ ಕ್ರಿಪ್ಸರು "ನಾವು ನಮ್ಮ ವೈಯಕ್ತಿಕ ಆದಾಯಗಳನ್ನು ಹೆಚ್ಚಿಸಲು ಪದಾರ್ಥ ಮತ್ತು ಕೂಲಿಕೆಲಸದ ಕೊರತೆಯನ್ನು ಬಳಸಿಕೊಂಡರೆ ಇಡಿ ಆರ್ಥಿಕ ಮಂದಿರವೇ ಕಳಚಿ ಬೀಳುವಂತೆ ಮಾಡಿದಂತಾಗುತ್ತದೆ. ನಿಜವಾಗಿಯೂ ಉದ್ಯೋಗದ ಸಂಪೂರ್ಣತೆಯನ್ನು ನಾಶಪಡಿಸಿ ಉದ್ಯೋಗದಲ್ಲಿ ಅರಕ್ಷಿತತೆಯನ್ನು ತರಲು ಅತಿಪ್ರಸರಣದ ಏರಾಟವನ್ನು ತಂದು ಬಿಟ್ಟರೆಸಾಕು; ಅದು ನಮ್ಮ ಉದ್ದಿಮೆಗಳಿಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ಪಡೆಯಲು ಅಸಾಧ್ಯವಾಗಿ ಬಿಡುತ್ತದೆ. ನಾವು ಆಗ ಕಡಿಮೆ ಆಹಾರ ಇಲ್ಲವೆ ಕಡಿಮೆ ಕಚ್ಚಾ ಪದಾರ್ಥಗಳನ್ನು ಪಡೆವ ಸ್ಥಿತಿ ಬರುತ್ತದೆ. ಏಕೆಂದರೆ, ಎರಡಕ್ಕೂ ಸಾಲುವಷ್ಟು ನಿರ್ಯಾತವನ್ನು ನಾವು ಮಾಡಲಾರೆವು" ಎಂದು ಸರಿಯಾಗಿಯೇ ಹೇಳಿದ್ದಾರೆ.

ಮೇಲಿನ ಮಾತುಗಳು ಬ್ರಿಟನ್ನಿನ ಅತಿಪ್ರಸರಣ ಪ್ರತಿಭಟನೆಯು ಇಡಿ ಜಗತ್ತಿನದಾಗಿದೆ ಎಂಬುದನ್ನು ತೋರಿಸಿ ಕೊಡುತ್ತವೆ. ಬೆಲೆಗಳು ಜಿಲ್ಲಾ ಸಿಲ್ಲಿಯಾದರೆ ಆಯಾತವನ್ನು ಇನ್ನೂ ಕಡಿಮೆ ಮಾಡಬೇಕಾಗುತ್ತದೆ ಮತ್ತು ಕೊರ

ಒಕ್ಕಲುತನದಲ್ಲಿ ಹೊಸದೃಷ್ಟಿ

ಇತ್ತೀಚೆಗೆ ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ಬ್ರಿಟಿಶ ಒಕ್ಕಲುತನಕ್ಕೆ ಹೆಚ್ಚಿನ ಲಕ್ಷ್ಯವನ್ನು ಪೂರೈಸಲಾಗುವುದೆಂದಾಗ ಅವರು ಬ್ರಿಟನ್ನಿನ ಪುನರಚನೆಯ ಯೋಜನೆಯ ಒಂದು ಮುಖವನ್ನು ಎತ್ತಿದಂತಾಯಿತು. ರಾಷ್ಟ್ರದ ಪರ್ಣಶಾಲ ಮತ್ತು ಕಾರಖಾನೆಗಳಲ್ಲಿಯ ಅವಿಶ್ರಾಂತ ಚಟುವಟಿಕೆಯು ಹಿಂದೆ ಅಷ್ಟೇ ಮಹತ್ವದ್ದೆನಿಸಿದ ರಾಷ್ಟ್ರದ ಜೀವನನ್ನು ಹದಕ್ಕೆತರುವ ಉತ್ತಮ ದರ್ಜೆಯ ಒಕ್ಕಲುತನದ ಉದ್ಯೋಗದಿಂದದೆ. ಬ್ರಿಟನ್ನಿನಲ್ಲಿ ಇಂದು ನಡೆಯುತ್ತಿರುವ ಜಟಿಲವಾದ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಗತಿಯಲ್ಲಿ ತಂತವನ್ನು ಪಾತ್ರವನ್ನು ಧಿವರ್ತಿಸಲು ಎಷ್ಟರಮಟ್ಟಿಗೆ ಉದ್ಯೋಗ ಮತ್ತು ಒಕ್ಕಲುತನಗಳು ಪರಸ್ಪರ ಪ್ರತಿಕ್ರಿಯೆಗಳಲ್ಲಿ ಕೊಡಗುವುವು. ಎಂಬುದು ಅತ್ಯಂತ ಆಕರ್ಷಕವಾಗಿದೆ.

ರಾಷ್ಟ್ರೀಯ ಜೀವನದಲ್ಲಿ ಉದ್ಯೋಗ ಮತ್ತು ಒಕ್ಕಲುತನಗಳು ಎರಡು ವಿರುದ್ಧ ಮತ್ತು ಪರಸ್ಪರ ಘಾತಕ ಗುಣವುಳ್ಳವೆನಿಸಿದ ದಿನಗಳು ಎಂದೋ ಕಳೆದು ಹೋದವು. ಇದೆಯ ಪಕ್ಷ ಬ್ರಿಟನ್ನಿನಲ್ಲಿ ಒಕ್ಕಲುತನವೆಂಬುದು ಲೋಹದವನ್ನು ಶುದ್ಧ ಮಾಡುವ ಇಲ್ಲವೆ ಯಂತ್ರಗಳನ್ನು ತಯಾರಿಸುವ ಕೆಲಸದಷ್ಟೇ ಜಾಣಾಕ್ಷತೆ ಅಗತ್ಯವಿರುವ ಒಂದುತಂತ್ರ.

ಒಕ್ಕಲಿಗನಿಗೆ ಪ್ರಥಮಾವಧಿಯ ಸಂಬಳವನ್ನು ಕೊಡುವುದಾಗಿ ಖಾತ್ರಿ ಮಾಡಿಕೊಡಲಾಗಿದೆ. ಅದು ಉಳಿದ ಎಲ್ಲ ತಜ್ಞ ಕೆಲಸಗಾರರ ಸಂಬಳಕ್ಕೆ ಯಾವ ದೃಷ್ಟಿಯಿಂದಲೂ ಕಡಿಮೆಯೆನಿಸುವದಿಲ್ಲ. ಮತ್ತು ಅವನ ಕೆಲಸವು ಉಳಿದೆಲ್ಲ ತಾಂತ್ರಿಕರ ಕೆಲಸದಷ್ಟೇ ತಾಂತ್ರಿಕವೆನಿಸಿದೆ.

ಯಂತ್ರೋಪಯೋಗ

ಇದು ಕೇವಲ ಯಂತ್ರೋಪಯೋಗದ ಪರಿಣಾಮವಲ್ಲ. ಯಂತ್ರೋಪಯೋಗವೇನೋ ಬ್ರಿಟನ್ನಿನ ಒಕ್ಕಲುತನದಲ್ಲಿ ಉಳಿದ ದೇಶಗಳಿಗಿಂತ ಹೆಚ್ಚಾಗಿ ನಡೆದಿದೆ. ಇದು ಆಹಾರೋತ್ಪಾದನದ ಸರ್ವಾಂಗೀಣ ಪ್ರಶ್ನೆಯನ್ನೆದುರಿಸುವ ಪ್ರಯತ್ನ ವಿಶೇಷವೇನೆಂದರೆ, ಎಲ್ಲ ಮಾದರಿಯ ಎಲ್ಲ ಗಾತ್ರದ ಹೊಲಗಳಲ್ಲೂ ಯಂತ್ರೋಪಯೋಗ ನಡೆದಿದೆ. ಉದಾಹರಿಸುವುದಾದರೆ, ಸಾವಿರಾರು ಎಕರೆಗಳುಳ್ಳ ಹೊಲಪ್ರಾಂತದಲ್ಲಿ ಯಾಂತ್ರಿಕೋಪಕರಣಗಳನ್ನು ಬಳಸಿ ಒಂದು ಬೆಳೆತೆಗೆಯುವುದು ನೇರವಾದ ಕ್ರಮ. ಆದರೆ ಕಾರಖಾನೆಯ ಪದ್ಧತಿಯನ್ನು ೫೦ ಎಕರೆಯ ಒಂದು ಹೊಲದಲ್ಲಿ ವಿವಿಧ ಬೆಳೆಗಳನ್ನು ತೆಗೆಯಲು ಬಳಸುವುದಕ್ಕೆ ಬಹಳ ಬುದ್ಧಿವಂತಿಕೆ ಬೇಕು.

ಆದರೂ ಇದನ್ನು ಕಳೆದ ಕೆಲ ವರ್ಷಗಳಲ್ಲಿ ಬ್ರಿಟನ್ನಿನಲ್ಲಿ ಹೆಚ್ಚಿನ ಪ್ರಮಾಣದಿಂದ ಮಾಡಲಾಗಿದೆ. ಒಂದು ಸಂಪೂರ್ಣ ಹೊಸ ದೃಷ್ಟಿಯ ವ್ಯವಸ್ಥೆಯಿಂದ ಅದನ್ನು ಶಕ್ಯಗೊಳಿಸಲಾಗಿದೆ.

ಇತ್ತೀಚೆಗೆ ಸಹಕಾರ ಪದ್ಧತಿಯಿಂದ ಹೆಚ್ಚಿನ ಪ್ರಮಾಣದಿಂದ ಚಿಕ್ಕ ರೈತರು ಹುಲ್ಲು ಒಣಗಿಸಲು ಅನುಕೂಲ ಪಡಿಸುವ ರಾಷ್ಟ್ರೀಯ ಯೋಜನೆಯೊಂದು ಹೊರಟ ಸುದ್ದಿಯಿದೆ. ಇಂದಿನ ಈ ಬೆಳವಣಿಗೆಯ ಸ್ಥಿತಿಯಲ್ಲಿ ಯೋಜನೆಗಳಿಗೆ ದ್ರವ್ಯರೂಪದ ಸಹಾಯ ಒದಗಿಸಿ ಸಾಗುವಳಿಯ ಹೊಸ ಪದ್ಧತಿಯನ್ನು ಅಮಲಿನಲ್ಲಿ ತರಲು ಒಕ್ಕಲುತನದ ಮಂತ್ರಶಾಖೆಯು ಸಾಲ ಮತ್ತು ದಾನಗಳನ್ನು ರೈತರಿಗೆ ಕೊಡಹೊಡಗಿದೆ.

ಇನ್ನೊಂದು ವಿಧವಾಗಿ ಹೇಳಬೇಕಾದರೆ, ಪ್ರಯೋಗ ಮತ್ತು ಸಂಘಟನೆಯಿಲ್ಲದೆ ಹೊಸ ತಂತ್ರಗಳನ್ನು ಅಭಿವೃದ್ಧಿಗೆ ತರಲು ಸಾಧ್ಯವಾಗುವುದಿಲ್ಲ. ಆದರೆ ಹಾಗೆ ಮಾಡಲು ಕೆಲವೊಮ್ಮೆ ಬಹಳ ಬಂಡವಾಲ ಹಾಕಿದ ದೊಡ್ಡ ಕಾರ್ಯದ ಸಿದ್ಧತೆಯಿಲ್ಲದೆ ಅನುಕೂಲವಾಗದು. ಬ್ರಿಟಿಶ ಸರಕಾರವು ಚಿಕ್ಕ ರೈತರಿಗೆ ಹುರುಪುಕೊಟ್ಟುದರಿಂದ ಅವರು ಉಳಿದ ನಾಡುಗಳಲ್ಲಿಯ ರೈತರಂತೆ ಸಂಕುಚಿತ ವರ್ಗವಾಗಿ ಉಳಿದಿಲ್ಲ. ಅಲ್ಲದೆ ಸರಕಾರವು ಅವರೆಂದೂ ಸಾಲಕ್ಕೆ ಬೀಳದಂತೆ ನೋಡಿಕೊಳ್ಳುತ್ತದೆ.

ತೆಯ ಕೆಳಿಯು ನಾಡಿಂದ ನಾಡಿಗೆ ನೆಗೆಯುತ್ತದೆ. ಇನ್ನು ಈ ಯುದ್ಧದಲ್ಲಿ ಬ್ರಿಟನ್ನು ಪಡೆದ ಜಯದ ಪ್ರಮಾಣವು ಬ್ರಿಟಿಶ ನಿರ್ಯಾತದ ಉತ್ತಮತರ ಸ್ಪರ್ಧಾಬದ್ಧ ಬೆಲೆಗಳಿಂದ ಲಾಭಪಡೆವ ಸಾಗರೋತ್ತರದ ಗಿರಾಕಿಗಳ ಮೇಲೂ ಸಾಮಾನ್ಯವಾದ ಪರಿಣಾಮವನ್ನು ಉಂಟುಮಾಡುತ್ತದೆ.

× ಜಾನ್ ಕಿಂಗ್ಸ್ಲಿಯವರ ವರದಿಯನ್ನು ಅನುಸರಿಸಿ ಬರೆದುದು.

ಹುಲ್ಲು ಬೆಳೆಸುವುದು

ಕಳೆದ ಬೇಸಿಗೆಯಲ್ಲಿ ಹಾಲುಹಾಕುವ ಹಂಗಾಮಿನ ಆರಂಭದಲ್ಲಿ ಹುಲ್ಲು ಬೆಳೆಸುವ ಯೋಜನೆ ಪ್ರಾರಂಭವಾಯಿತು, ಅಲ್ಲಿಯ ಇಂಗ್ಲಂಡಿನಲ್ಲಿ ೯೦ ಜನ ರೈತರು ಸೇರಿ ೩೦೦ ಎಕರೆ ಹೊಲದಲ್ಲಿ ಹುಲ್ಲು ತಯಾರಿಸಲು ಹೊರಟರು. ಸರಕಾರದಿಂದ ಒಣಗಿಸುವ ಯಂತ್ರವನ್ನು ತಂದು ಹಸಿ ಬೆಳೆದ ಹುಲ್ಲನ್ನು ಒಣಗಿಸಲಾಯಿತು. ದಿನಕ್ಕೆ ೩ ಬಾರಿ ಆ ಯಂತ್ರವನ್ನು ಬಳಸಲಾಗುತ್ತಿತ್ತು. ೨೪ ರಲ್ಲಿ ೩೦ ಗಂಟೆಗಳನ್ನು ಆ ಬಗ್ಗೆ ವಿನಿಯೋಗಿಸಲಾಗುತ್ತಿತ್ತು. ಹುಲ್ಲು ಸುಗ್ಗಿಯಲ್ಲಿ ಒಮ್ಮೆ ಕೊಯ್ಯುವುದರ ಬದಲು ೨–೩ ಸಾರೆ ಕೊಯ್ಯಲಾಗುತ್ತಿತ್ತು; ಆದರೂ ಅದರ ಆಹಾರಸತ್ವ ಕಡಿಮೆಯಾಗದಂತೆ ನೋಡಿಕೊಳ್ಳಲಾಗುತ್ತಿತ್ತು.

ಹುಲ್ಲು ಬೆಳೆಸುವುದು ಬ್ರಿಟನ್ನಿನಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿದ ಒಂದು ತಂತ್ರ. ಗತಶತಮಾನದಿಂದಲೇ ಹುಲ್ಲನ್ನು ಒಂದು ಬೆಳೆಯೆಂದು ಗಣಿಸಲಾಗುತ್ತಿದ್ದರೂ ಸರ್ ಜಾರ್ಜ ಸ್ಟೇಪಲ್‌ಟನ್ ಎಂಬ ಬ್ರಿಟಿಶ ವಿಜ್ಞಾನಿಯು ೨೦ನೆಯ ಶತಮಾನದ ಮಧ್ಯಕ್ಕೆ ಸ್ವಲ್ಪ ಮುಂಚೆ ಅದನ್ನು ವಿಶೇಷವಾಗಿ ಅಭಿವೃದ್ಧಿಗೆ ತಂದನು.

ಹುಲ್ಲನ್ನು ಬೆಳೆವಲ್ಲಿ ೨ ವಿಧದ ಹುಲ್ಲಿನಲ್ಲಿ ಒಂದಾದ ಮೇಲೊಂದರಂತೆ ಬೆಳೆಸಬೇಕು. ಜೊತೆಗೆ ಇತರ ಬೆಳೆಗಳನ್ನೂ ಆಗೀಗ ವಿಕಲ್ಪವಾಗಿ ಬೆಳೆಸಬಹುದು. ಹುಲ್ಲುಗಳಲ್ಲಿ ವಿಶೇಷವಾಗಿ ಬೆಳೆವ ಜಾತಿಯನ್ನು ಆರಿಸಿ ಅಂಥವನ್ನೇ ಹೆಚ್ಚಾಗಿ ಬೆಳೆಸಲಾಗುವುದು. ಸಸಿ ಹುಲ್ಲನ್ನು ೨ ರಿಂದ ೫ ವರ್ಷಗಳ ವರೆಗೆ ಬೆಳೆಸಿ ಕೊಯ್ಯುತ್ತಾರೆ ಇಲ್ಲವೆ ದನಗಳನ್ನು ಅಲ್ಲಿ ಮೇಯಿಸುತ್ತಾರೆ. ಇಂಗ್ಲಂಡ್ ಮತ್ತು ವೇಲ್ಸಗಳಲ್ಲಿ ಮಿಶ್ರ ಒಕ್ಕಲುತನವನ್ನು ಮಾಡುತ್ತಾರೆ. ಅಂಥಲ್ಲಿ ದನಕರುಗಳನ್ನು ಸಾಕಣೆಗೆ ತೆಗೆದುಕೊಂಡಾಗ ಮೇಯಿಸುವುದು ಮತ್ತು ತಿನಿಸುವುದರಿಂದ ಚಿಕ್ಕ ಹುಲ್ಲು ಫಲವತ್ತಾಗುವುದಲ್ಲದೆ ಉಳಿದ ಬೆಳೆಗಳಿಗೂ ಕ್ಷೇತ್ರ ಹದವಾಗಿ ಪರಿಣಮಿಸುತ್ತದೆ.

ಹೆಚ್ಚು ಮಾಂಸಲದ ಫಲ

ಪರೀಕ್ಷೆಮಾಡಿದಲ್ಲಿ ಹುಲ್ಲುಗಾವಲಿನಿಂದ ಎಕರೆಯೊಂದಕ್ಕೆ ೫೦ ಕಾರ್ಟರ್ ಒಣ ಹುಲ್ಲನ್ನು ತೆಗೆಯಲಾಗುತ್ತದೆಂದು ಕಂಡುಬಂದಿದೆ ಆದರಲ್ಲಿ ೬೨೦ ಪೌಂಡುಗಳಷ್ಟು ಮಾಂಸಲ (Protein) ಅಂಶವಿಲ್ಲವೆ ಶರೀರಪುಷ್ಟಿಗೆ ಅಗತ್ಯವಾದ ಆಹಾರಾಂಶವಿದೆ. ಇದು ಕಾಂದಪಂಲಗಳ ಬೆಳೆಗೆ ಸರಿಸಮವಾಗಿ ನಡೆದಿದೆಯೆನ್ನಬಹುದು. ಹುಲ್ಲಿನಲ್ಲಿ ಬೇರೆ ಬೀಜಬಿತ್ತಿ ಬೆಳೆತೆಗೆದು ನೋಡಿದಲ್ಲಿ ೩ ರಿಂದ ೫ ಪಟ್ಟು ಹೆಚ್ಚು ಹೆಚ್ಚು ಬೆಳೆಬಂದದ್ದುಂಟು. ತಿನಿಸುವುದು ಮತ್ತು ಸ್ವಾಭಾವಿಕವಾಗಿ ಪ್ರಾಣಿಗಳಿಂದ ಫಲವತ್ತಾಗಿ ಮಾಡುವದು ಧಾನ್ಯಗಳ ಬೆಳೆಯ ಉತ್ಕರ್ಷಕ್ಕೆ ಕಾರಣವಾಗುವುದು.

ಇತ್ತೀಚೆಗೆ ಒಕ್ಕಲುತನದ ಖಾತೆಯು ನೂರಕ್ಕೆ ೨೦ ರಷ್ಟು ಹುಲ್ಲನ್ನು ಹೆಚ್ಚು ಬೆಳೆಸುವ ಗುರಿಯಿದೆ ಎಂದುದಕ್ಕೆ ಇದೇ ಹಿನ್ನೆಲೆಯಾಗಿದೆ. ಹೆಚ್ಚು ಭಾಗದಲ್ಲಿ ಹುಲ್ಲು ಬೆಳೆಸಲಾಗುವುದೆಂದು ಇದರ ಅರ್ಥವಲ್ಲ; ಹುಲ್ಲುಬೆಳೆಸುವ ತಂತ್ರವನ್ನು ಇನ್ನೂ ಸುಧಾರಿಸಲಾಗುವುದು ಎಂದರ್ಥ. ಸಾಂದ್ರ ಫಲಶಕ್ತಿಯನ್ನು ಹೆಚ್ಚಿಸುವ ಯೋಜನೆಗಳಿಂದ ಉತ್ತಮ ಬೀಜಗಳ ಆಯ್ಕೆಯಿಂದ, ಮಾಂಸಲಾಂಶ ಹೆಚ್ಚುಳ್ಳ ಬೀಜಗಳ ವಿಕಲ್ಪಪ್ರಯೋಗದಿಂದ ಮತ್ತು ಇತರ ಸಾಧನಗಳಿಂದ ಈ ಖಾತೆಯಲ್ಲಿ ಉತ್ಪಾದನೆಯನ್ನು ಇನ್ನೂ ಹೆಚ್ಚುಮಾಡುವ ಹವಣಿಕೆಯಿದೆ. ಚಿಕ್ಕ ಸಾಗುವಳಿದಾರ ಕೂಡ ತಾಂತ್ರಿಕ ಕ್ರಮದಲ್ಲಿ ಮೇಲ್ಪಟ್ಟಕ್ಕೇರುವಂತೆ ಸರಕಾರವು ನೋಡಿಕೊಳ್ಳುವದು.

ಬ್ರಿಟನ್ನಿನಲ್ಲಿಯೂ ಈ ಕಾರ್ಯೋತ್ಸಾಹವು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಹಾರಕ್ಕೆ ಬಹಳಮಟ್ಟಿಗೆ ನೆರವೀಯುತ್ತದ್ದಾಗಿದೆ. ಸರಕಾರವು ದೀರ್ಘಕಾಲಿಕ ಯೋಜನೆಯನ್ನು ಕೂಡ ಈ ದಿಶೆಯಲ್ಲಿ ಸಿದ್ಧಪಡಿಸಿ ಜಗತ್ತಿನಲ್ಲಿ ಒಕ್ಕಲಿಗನ ಸ್ವಾಸ್ಥ್ಯ, ಒಕ್ಕಲುತನ, ಇವುಗಳನ್ನು ಅಭಿವೃದ್ಧಿಗೆ ತರಲು ಯೋಚಿಸಿದೆ.

× ಡಾ. ಜಾರ್ಜ ಗ್ರಿಫ್ಲ್ಡರ ಬರಹದ ಆಧಾರದಿಂದ

ಅಕ್ಟೋಬರದಷ್ಟೊತ್ತಿಗೆ ಪ್ರಾಂತದಲ್ಲೆಲ್ಲ ಪಾನ ನಿರೋಧ

ಜೂಜಾಟ ನಿರ್ಮೂಲನ ಮಸೂದೆ

ಮುದ್ರಾಸ ಶಾಸನ ಸಭೆಯ ಕಾರ್ಯಕಲಾಪ

ಮುದ್ರಾಸ ಶಾಸನ ಸಭೆಯಲ್ಲಿ ನಿನ್ನೆ ಪೋಲೀಸ ಮತ್ತು ಜೂಜಾಟ ಮಸೂದೆಯನ್ನು ವಿವರವಾಗಿ ಚರ್ಚಿಸಿ ಪರಿಶೀಲನ ಸಮಿತಿಗೆ ಒಪ್ಪಿಸಲಾಯಿತು. ಈ ಚರ್ಚೆಯಲ್ಲಿ ಮುಸ್ಲಿಂ ಲೀಗಿನ ಅನೇಕ ಸದಸ್ಯರು ಭಾಗವಹಿಸಿ ಅದನ್ನು ಸಮರ್ಥಿಸಿದರು. ಬಡವರನ್ನೂ ಶ್ರೀಮಂತರನ್ನೂ ನಿರ್ಮೂಲ ಮಾಡುತ್ತಿರುವ ಈ ಕುದುರೆಯ ಜೂಜಾಟವನ್ನು ನಿಲ್ಲಿಸಬೇಕಾದದ್ದವಶ್ಯವೆಂದು ಸದಸ್ಯರು ಅಭಿಪ್ರಾಯಪಟ್ಟರು. ಗೃಹಮಂತ್ರಿಗಳು ಈ ರೀತಿ ಉತ್ತರ ಕೊಟ್ಟರು. ಮುಸ್ಲಿಂಲೀಗಿನ ಬಗ್ಗೆ ಶಾಸನ ಸಭೆಯಲ್ಲಿ ನಡೆದ ಚರ್ಚೆಯಿಂದ ಚುಚ್ಚಲ್ಪಟ್ಟ ಗೃಹಮಂತ್ರಿಗಳು ಸ್ವಲ್ಪ ಬಿಸಿಬಿಸಿಯಾಗಿ ಲೀಗಿಗೆ ಕಠಿನ ಮಾತುಗಳನ್ನು ಹೇಳಿದರು. ಮತೀಯ ಭಾವನೆಗಳಿಂದ ದೂರವಿರುವ ಸರಕಾರವಿರುವ ರಾಷ್ಟ್ರದಲ್ಲಿ ಮತೀಯ ಪಕ್ಷಗಳಿರುವದು ತಪ್ಪೆಂಬದಾಗಿ ಘಂಟಾಘೋಷವಾಗಿ ಹೇಳುತ್ತೇನೆ. ನನ್ನೆದುರಿಗೆ ಕುಳಿತಿರುವವರು ತಮ್ಮ ಘೋಷಣೆಯನ್ನು ಬದಲಿಸಿ ಹಿಂದೀ ರಾಷ್ಟ್ರಕ್ಕೆ ತಮ್ಮ ನಿಷ್ಠೆಯನ್ನು ತೋರಿಸಲಿ. ಮಾರ್ಚ ೧೦ಕ್ಕೆ ಮುದ್ರಾಸಿನಲ್ಲಿ ನಡೆಯಲಿರುವ ಮುಸ್ಲಿಂಲೀಗ ಸಭೆಯನ್ನು ಅದರ ಕಾರ್ಯಕಲಾಪಗಳನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇನೆ. ನನ್ನ ತೀರ್ಪನ್ನು ಅದರ ಮೇಲಿನ ಕ್ರಮವನ್ನೂ ನಾನು ಅಲ್ಲಿಯವರೆಗೆ ಮುಂದೂಡಿದ್ದೇನೆ ಎಂದು ಲೀಗಿನವರನ್ನು ತೀವ್ರವಾಗಿ ಎಚ್ಚರಿಸಿದರು. ಮೇಲೆ ಹೇಳಿದಂತೆ ಮಸೂದೆಗೆ ಸಭೆ ಒಪ್ಪಿಗೆ ಕೊಟ್ಟಿತು.

ಮುದ್ರಾಸ ಪ್ರಾಂತದಲ್ಲೆಲ್ಲ ಅಕ್ಟೋಬರ ೨ರ ವೇಳೆಗೆ ಪಾನನಿರೋಧವಾಗುವದೆಂದು ಮದ್ಯಪಾನ ನಿರೋಧ ಮಂತ್ರಿಗಳು ಆಶ್ವಾಸನವಿತ್ತರು. ಮದ್ಯ ಇಳಿಸುವ ಭಟ್ಟಿ ಕೇಂದ್ರಗಳಿಗೆ ಜಾಗರೂಕತೆಯಿಂದ ಗಮನವನ್ನೀಯಲಾಗುತ್ತದೆ ಎಂದು ಭರವಸೆಯಿತ್ತರು.

ದಕ್ಷಿಣ ಮಂಡಲ ಜಿಲ್ಲೆಗಳ ಹಾಗು ಇತರ ಭಾಗಗಳ ಭೂಗರ್ಭ ಶೋಧನೆಯನ್ನು ಹೆಚ್ಚುಮಟ್ಟಿಗೆ ನಡೆಸಲು ಅಧಿಕಾರಿಗಳ ಸಂಖ್ಯೆ ಹೆಚ್ಚಿಸಲಾಗುವದೆಂದು ಕೈಗಾರಿಕೆ ಮಂತ್ರಿಗಳು ಹೇಳಿದರು.

ಆಯವ್ಯಯ ಚರ್ಚೆ

ಒಂಬತ್ತನೆಯ ತಾರೀಕಿನ ದಿನವೂ ಆಯವ್ಯಯ ಪತ್ರಿಕೆಯ ಮೇಲೆ ಚರ್ಚೆ ಮುಂದುವರಿಯಿತು. ಮುಸ್ಲಿಂಲೀಗ ಸದಸ್ಯರು ಮುಸಲ್ಮಾನರಿಗೆ ಅನ್ಯಾಯವಾಗಿದೆಯೆಂಬ ಒಂದೇ ಪಲ್ಲವಿಯನ್ನು ಹಾಡಿದರು. ಎಲ್ಲ ಕಡೆಯಿಂದ ಮುಸಲ್ಮಾನರು ಹಿಂದೆ ಹಾಕಲ್ಪಟ್ಟಿದ್ದಾರೆ. ಅಲ್ಪಸಂಖ್ಯಾಕರಿಗೆ ಭದ್ರತೆಯಿಲ್ಲ; ಅರ್ಥಿಕೋನ್ನತಿಗೆ ಯಾವ ಕಾರ್ಯಕ್ರಮವೂ ಇಲ್ಲ. ಮುಸಲ್ಮಾನರ ಶಿಕ್ಷಣಕ್ಕೆ ಮುಖ್ಯವಾಗಿ ಧಾರ್ಮಿಕ ಶಿಕ್ಷಣಕ್ಕೆ ಕುಂದುಂಟಾಗಿದೆಯೆಂದು ಮುಂತಾಗಿ ಅವರ ಅಭಿಪ್ರಾಯ. ತಾವು ದೇಶಭಕ್ತರಾಗಿದ್ದರೂ ತಮ್ಮ ಮೇಲಿನ ಅಪನಂಬಿಕೆ ಇನ್ನೂ ಹೋಗಿಲ್ಲವೆಂದೂ ಅವರು ಆಕ್ಷೇಪಿಸಿದರು. ಬಂಡವಾಳಗಾರರಿಗೆ ಹೆಚ್ಚು ಹಿತ ಈ ಬಜೆಟ್ಟಿನಿಂದ ಆಗುತ್ತಿದೆಯೆಂದು ಕಮ್ಯೂನಿಸ್ಟರು ಭಾಷ್ಯ ಮಾಡಿದರು.

ಶ್ರೀ ಎ. ಕಾಳೇಶ್ವರರಾಯರು ಹಣಕಾಸಿನ ಸಚಿವರನ್ನು ಅಭಿನಂದಿಸುತ್ತ ಪಾನನಿರೋಧ ಕಾರ್ಯಕ್ರಮವನ್ನು ಜಯಪ್ರದವಾಗಿ ಕೊನೆಗಾಣಿಸಿದ್ದಕ್ಕೆ ಸಂತೋಷಪಟ್ಟರು. ರಾಯಲ ಸೀಮೆಯ ಪ್ರದೇಶವನ್ನು ಆಂಧ್ರ ವಿಶ್ವವಿದ್ಯಾಲಯದಲ್ಲಿ ಸೇರಿಸಲು ಆಂಧ್ರ ಪ್ರಾಂತವನ್ನು ಬೇರೆಯಾಗಿಸಲು ಪ್ರತ್ಯೇಕ ಸಮಿತಿಯೊಂದನ್ನು ನಿರ್ಮಿಸುವದಕ್ಕೆ ಹಣವನ್ನಿತ್ತದಿದ್ದುದಕ್ಕೆ ಆಕ್ಷೇಪಿಸಿದರು.

ಹಿಂದಿನ ಮಂತ್ರಿ ಕೆ. ಭಾಷ್ಯಂರವರು ಆಡಳಿತದಲ್ಲಿಯ ಅನೇಕ ಲೋಪದೋಷಗಳನ್ನೆತ್ತಿ ತೋರಿಸಿದರು. ನಿಯಂತ್ರಣದ ಬಗೆಗೆ ಹೇಳುತ್ತ ನಿಧಾನವಾಗಿ ತಂದರೇನೇ ಬಡಜನರಿಗೆ ತೊಂದರೆಯಾಗುವದಿಲ್ಲೆಂದು ಹೇಳಿ ಸರಕಾರ ಆಹಾರ ಧೋರಣೆಯನ್ನು ಬಹಳ ಮಟ್ಟಿಗೆ ಮಾರ್ಪಡಿಸಬೇಕೆಂದರು.

ಶ್ರೀ. ವೇದರತ್ನಂ ಪಿಳ್ಳೆಯವರು ಸರಕಾರದ ಸಿಬ್ಬಂದಿಯನ್ನು ಕಡಿಮೆ ಮಾಡಿ ಕೆಳದರ್ಜೆ ನೌಕರರ ಸಂಬಳವನ್ನು ಹೆಚ್ಚಿಸಬೇಕೆಂದರು. ರೈತರು ತಮಗೆ ಸಂಬಂಧ ನ್ಯಾಯ ದೊರೆಯದೆಂದು ಕೂಗುತ್ತಿದ್ದಾರೆ. ಹಳ್ಳಿಯ ಜನರ ಕಷ್ಟಗಳ ಕಡೆಗೆ ಸರಕಾರ ಹೆಚ್ಚಿಗೆ ಗಮನ ಕೊಡಬೇಕೆಂದು ಶ್ರೀಮತಿ ಸೀತಾಮಹಾಲಕ್ಷ್ಮಮ್ಮ ಅವರು ಅಭಿಪ್ರಾಯಪಟ್ಟರು.

ಕನ್ನಡ ಸುದ್ದಿಗಳ ಪ್ರಸಾರ

ಪ್ರಶ್ನೋತ್ತರ ಸಮಯದಲ್ಲಿ ಶ್ರೀ ಬಿ. ಅನಂತಾಚಾರ್ಯರು ದಿಲ್ಲಿಯ ಆಕಾಶವಾಣಿಯಿಂದ ಪ್ರಸಾರವಾಗುತ್ತಿರುವ ಕನ್ನಡ ಸುದ್ದಿಯನ್ನು ಮುದ್ರಾಸ ಕೇಂದ್ರದಿಂದಲೂ ಬಿತ್ತರಿಸುವಂತೆ ಕೇಂದ್ರ ಸರಕಾರವನ್ನು ಪ್ರಾಂತಿಕ ಸರಕಾರ ಕೇಳಿದೆಯೋ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಕೈಗಾರಿಕೆ ಮಂತ್ರಿಗಳಾದ ಶ್ರೀ. ಎಚ್. ಸೀತಾರಾಮ ರೆಡ್ಡಿಯವರು ಉತ್ತರಿಸಿದರು. ಪ್ರಾಂತದ ಕನ್ನಡ ಜನತೆಯಲ್ಲಿ ತಳಮಳಿಕೆಯನ್ನುಂಟುಮಾಡುವ ಹೊಣೆ ತನ್ನದೆಂದು ಸರಕಾರ ಅರಿತಿದೆಯೋ ಎಂದು ಅನಂತಾಚಾರ್ಯರು ಮತ್ತೆ ಕೇಳಿದ್ದಕ್ಕೆ ಮಂತ್ರಿವರ್ಯರು ಮುದ್ರಾಸ ಪ್ರಾಂತೀಯ ಪ್ರಸಾರ ಶಾಖೆಯವರು ತೆಗೆದುಕೊಂಡ ಸುದ್ದಿ ಸಂಗ್ರಹದ ಮೇರೆಗೆ ಕನ್ನಡದಲ್ಲಿ ಸುದ್ದಿಯನ್ನು ಕೇಳುವವರು ನೇರವಾಗಿ ದಿಲ್ಲಿ ಕೇಂದ್ರದಿಂದಲೇ ಕೇಳಲಿಚ್ಛಿಸುವರೆಂದು ತಿಳಿದುಬಂದಿದೆಯೆಂದು ಉತ್ತರ ಕೊಟ್ಟರು.

ಮುದ್ರಾಸ ಹೈದರಾಬಾದ ಗಡಿ

೨ನೇ ತಾರೀಕು ಮುದ್ರಾಸ ಹೈದರಾಬಾದ ಗಡಿಯಲ್ಲಿಯ ಹಳ್ಳಿಗಳಲ್ಲಿಯ ಜನರ ಜೀವಿತ ಹಾಗು ಆಸ್ತಿಯ ಸುರಕ್ಷಿತತೆಯ ಬಗ್ಗೆ ಸರಕಾರವು ಕೈಕೊಂಡ ಉಪಾಯಗಳ ಸಂಬಂಧದಲ್ಲಿ ಪ್ರಶ್ನೋತ್ತರಗಳು ನಡೆದುವು. ಗೃಹಮಂತ್ರಿಗಳಾದ ಡಾ. ಸುಬ್ಬರಾಯನವರು ಉತ್ತರ ಕೊಡುತ್ತ ಹೀಗೆ ಹೇಳಿದರು.

ದಿಸೆಂಬರ ೩೦ಕ್ಕೆ ತಿರವೂರಿನಲ್ಲಿ ನಿಜಾಮ ಪೋಲೀಸರು ಕೆಲವರ ಬೆನ್ನಟ್ಟಿ ಹೋಗಿ ಅವರ ಮೇಲೆ ಗೋಳೀಬಾರು ಮಾಡಿ ಇಬ್ಬರನ್ನು ಗಾಯಗೊಳಿಸಿ ಅವರನ್ನು ತೆಗೆದುಕೊಂಡು ಹೋದರು. ಅವರು ಬದುಕಿರುವರೊ ಸತ್ತಿರುವರೊ ತಿಳಿದಿಲ್ಲ. ಹೈದರಾಬಾದ ಸರಕಾರಕ್ಕೆ ಈ ವಿಷಯದಲ್ಲಿ ಬರೆದರೆ ಅವರಿಂದ ಉತ್ತರ ಬಂದಿಲ್ಲ. ಈ ವಿಷಯದಲ್ಲಿ ಅಧಿಕಾರಿಗಳಿಂದ ಬಂದ ವರದಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸದಸ್ಯರ ಮೇಜಿನ ಮೇಲೆ ಇಡಲಾಗುವದಿಲ್ಲೆಂದು ಹೇಳಲಾಯ್ತು. ಮುದ್ರಾಸ ಸರಕಾರ ಹೈದರಾಬಾದ ಸರಕಾರದ ಕೂಡ ನೇರವಾದ ಸಂಬಂಧವಿಲ್ಲೆಂದೂ ಹೇಳಲಾಯಿತು. ಪೋಲೀಸ ಆಡಳಿತದ ಅವ್ಯವಸ್ಥೆ ಮತ್ತು ಗೃಹಮಂತ್ರಿಗಳ ಅಲಕ್ಷ್ಯದ ಮೂಲಕವೆ ಇದೆಲ್ಲ ಸಂಭವಿಸಿತೆಂಬುದು ಸರಕಾರದ ಗಮನಕ್ಕೆ ಬಂದಿದೆಯೋ ಎಂದು ಕಮ್ಯುನಿಸ್ಟ ಸದಸ್ಯರೊಬ್ಬರು ಕೇಳಿದ್ದಕ್ಕೆ ಗೃಹಮಂತ್ರಿಗಳು ಅದಾವುದೂ ನನಗೆ ಗೊತ್ತಿಲ್ಲ. ಆದರೆ ಗಡಿಯಲ್ಲಿಯ ಜನರನ್ನು ರಾತ್ರಿಯಲ್ಲಿ ಕಮ್ಯುನಿಸ್ಟರು ಪ್ರಲೋಭನಗೊಳಿಸುತ್ತಿರುವರು ಹಗಲಿನಲ್ಲಿ ಇತ್ತೆಹಾದರು ಅವರ ಮೇಲೆ ದಾಳಿ ಮಾಡುತ್ತಿರುವರೆಂದು ಹೇಳಿದರು. ಈ ನಿಶಾಚರರ ಮೇಲೆ ಬಲವಾದ ಕಣ್ಣಿಟ್ಟಿರುವೆವೆಂದೂ ಅವರು ಹೇಳಿದರು.

ವಸತಿ ಗೃಹಗಳಲ್ಲಿನ ಭೋಜನಾಲಯಗಳನ್ನು ಜಾತೀಯತೆಯ ತಳಹದಿಯ ಮೇಲೆ ನಡೆಸಬಾರದೆಂದು ಪ್ರಾಂತದ ಎಲ್ಲ ಶಾಲೆ ಹಾಗು ಕಾಲೇಜ ಅಧಿಕಾರಿಗಳಿಗೆ ಆದೇಶಿಸಲಾಗಿದೆಯೆಂದು ಶಿಕ್ಷಣ ಮಂತ್ರಿಗಳಾದ ಶ್ರೀ. ಅವಿನಾಶಲಿಂಗಂರು ೧ನೇ ತಾರೀಕಿನ ಸಭೆಯಲ್ಲಿ ಹೇಳಿದರು. ಆದರೆ ಭೋಜನಾಲಯಗಳನ್ನು ಶಾಕಾಹಾರ ಮತ್ತು ಮಾಂಸಾಹಾರ ವಿಭಾಗಗಳಲ್ಲಿ ವಿಭಾಗಿಸಲು ಯಾವ ಅಡ್ಡಿಯೂ ಇಲ್ಲವೆಂದು ಅವರು ನುಡಿದರು.

ಕಪ್ಪು ಅಂಗಿ ಸ್ವಯಂಸೇವಕರ ಸಂಸ್ಥೆ ಮತ್ತು ರಾಷ್ಟ್ರೀಯ ಸೇವಾದಲದ ಮೇಲೆ ಮುದ್ರಾಸ ಸರಕಾರದವರು ನಿರ್ಬಂಧ ಹೇರಿದ್ದಾರೆ. ಕಪ್ಪು ಅಂಗಿ ಸಂಸ್ಥೆ ದ್ರವಿಡಸ್ಥಾನಕ್ಕಾಗಿ ಪ್ರಯತ್ನಿಸುತ್ತಿರುವದು.

ಹಿಂದೀ ಸ್ವಾತಂತ್ರ್ಯ ಸಂಗ್ರಾಮವೆಂಬ ಪುಸ್ತಕದ ಮೇಲಿನ ನಿರ್ಬಂಧವನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ಗೃಹಮಂತ್ರಿಗಳು ಹೇಳಿದರು.

ಆಂಧ್ರ ಕಾಂಗ್ರೆಸ್ಸಿಗರೊಬ್ಬರು ಶಾಸನ ಸಭೆಯಲ್ಲಿ ಎತ್ತಿದ ವಿಧಿಬಿಂದುವಿಗೆ ಉತ್ತರ ಕೊಡುತ್ತ ಅಧ್ಯಕ್ಷರಾದ ಜೆ. ಶಣ್ಮುಖಂ ಪಿಳ್ಳೆಯವರು ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಮಂತ್ರಿಗಳನ್ನು ಒತ್ತಾಯಪಡಿಸುವ ಅಧಿಕಾರವು ಶಾಸನ ಸಭೆಯ ಅಧ್ಯಕ್ಷರಿಗೆ ಇಲ್ಲವೆಂದು ಹೇಳಿದರು. ಆದರೂ ಲಿಖಿತದ ಸೂಚನೆಗಳನ್ನು ಮುಂದಿಡದವರು ಟೀಕೆಯನ್ನು ಮಾಡಿ ಆ ಪ್ರಶ್ನೆಯ ವಿವರಗಳನ್ನು ತಿಳಿದುಕೊಳ್ಳಬಹುದೆಂದು ಅವರು ಹೇಳಿದರು.

ಹಿರಿಯೋಲಗ

ಸ್ವತಂತ್ರ ಭಾರತದ ಪ್ರಥಮ ಮುಂಗಡ ಪತ್ರಿಕೆ

ಅಡಿಕೆಯ ಸುಂಕ ತೆಗೆಯಲಾಯ್ತು

ಭಾರತದ ಕೇಂದ್ರ ಸರಕಾರದ ಅರ್ಥಸಚಿವರಾದ ಶ್ರೀ ಆರ್. ಕೆ. ಷಣ್ಮುಖಂ ಚಟ್ಟಿಯಾರರು ಫೆಬ್ರುವರಿ ತಾ. ೨೮ಕ್ಕೆ ಹಿರಿಯೋಲಗದಲ್ಲಿ ಸ್ವತಂತ್ರ ಭಾರತದ ಪ್ರಥಮ ಮುಂಗಡ ಪತ್ರಿಕೆಯನ್ನು ೧೯೪೮—೧೯೪೯ ರ ಸಲುವಾಗಿ ಮಂಡಿಸಿದರು. ಈಗಿರುವ ಕರಗಳನುಸರಿಸಿ ಮುಂದಿನ ವರ್ಷ ೨೩೦ ಕೋಟಿ ೫೨ ಲಕ್ಷ ರೂ. ಗಳ ಆದಾಯವಾಗುವದು. ವೆಚ್ಚವು ೨೫೭ ಕೋಟಿ ೩೭ ಲಕ್ಷ ರೂ. ಗಳೆಂದು ಗಣಿಸಿದ್ದರಿಂದ ೨೬ ಕೋಟಿ ೮೫ ಲಕ್ಷ ರೂ. ಗಳ ಕೊರತೆ ತೋರಿಸಲಾಗಿದೆ.

೩॥ ಲಕ್ಷದ ಗಳಿಕೆಯ ಮೇಲೆ ಮಾತ್ರ ಸೂಪರ ಟ್ಯಾಕ್ಸ ಎಂಬ ಮೇಲ್ತೆರಿಗೆಯನ್ನು ಹಾಕಲು ತೀರ್ಮಾನಿಸಿದ್ದರಿಂದ ಸರಕಾರಕ್ಕೆ ೧ ಕೋಟಿ ರೂ. ಗಳ ಆದಾಯ ಕಡಿಮೆಯಾಗಿದೆ.

ಕೊರತೆಯನ್ನು ತುಂಬಿಕೊಳ್ಳಲು ಕಾಫಿ, ಚಹಾ, ಸಿಗರೇಟು, ತಂಬಾಕ, ಕಡ್ಡಿಪೆಟ್ಟಿಗೆ ಟಾಯರು, ವನಸ್ಪತಿ ತುಪ್ಪ ಇವೇ ಮೊದಲಾದವುಗಳ ಮೇಲೆ ಹೆಚ್ಚಿನ ತೆರಿಗೆ ಕೂಡಿಸಲಾಗಿದೆ. ನಿರ್ಯಾತವಾಗುವ ಚಹದ ಬೆಲೆಯ ಮೇಲೆ ೧೦೦ಕ್ಕೆ ೨೫ರಷ್ಟು ಕರ ಹೇರಲಾಗುವದು. ಕೈಮಗ್ಗದ ಬಟ್ಟೆಗೆ ಕರ ಹೇರುವದಿಲ್ಲ.

ಅಡಿಕೆಯ ಮೇಲಿದ್ದ ಸುಂಕವನ್ನು ತೆಗೆದುಹಾಕಲಾಗಿದೆ.

ಎಣ್ಣೆ ಕಾಳುಗಳ ನಿರ್ಯಾತದ ಮೇಲೆ ೧ ಟನ್ನಿಗೆ ೮೦ ರೂಪಾಯಿಯಂತೆಯೂ ಮಾಂಗನೀಜದ ನಿರ್ಯಾತದ ಮೇಲೆ ೧ ಟನ್ನಿಗೆ ೨೦ ರೂಗಳಂತೆಯೂ ಕರ ಹೇರಲಾಗುವದು.

ಮೋಟಾರು ಕಾರುಗಳ ಆಯಾತದ ಮೇಲೆ ೧೦೦ಕ್ಕೆ ೪೫ ರಷ್ಟಿದ್ದ ಕರವನ್ನು ೫೦ಕ್ಕೆ ಏರಿಸಲಾಗುವದು.

ಸಿಗರೇಟಿನ ಬೆಲೆಯ ಮೇಲೆ ೨೫ರಷ್ಟು ಸುಂಕ ಹೆಚ್ಚಿಸಲಾಗುವದು ಇದೊಂದರಿಂದಲೇ ೭ ಕೋಟಿ ರೂ ಉತ್ಪನ್ನ ಬರುವದೆಂದು ನಿರೀಕ್ಷಿಸಲಾಗಿದೆ.

ಕೆಲವು ಜಾತಿಯ ತಂಬಾಕದ ಮೇಲೆ ೧ ಪೌಂಡಿಗೆ ೯ ಆಣೆ ಇದ್ದುದನ್ನು ೧೨ ಆಣೆಗೂ ಅಗ್ಗದ ತಂಬಾಕದ ಮೇಲೆ ೧ ಗೌಂಡಿಗೆ ೩ ಆಣೆ ಇದ್ದುದನ್ನು ೪ ಆಣೆಗೂ ಏರಿಸಲಾಗಿದೆ.

ಹಂಚಿದ ಲಾಭದ ಮೇಲೆ ಈಗಿರುವ ೫ ಆಣೆಯ ಸೂಪರ ಟ್ಯಾಕ್ಸ ದರವು ಹಾಗೇ ಉಳಿಯುವದು. ಆದರೆ ಹಂಚಲಾರದ ಲಾಭದ ಮೇಲೆ ಮಾತ್ರ ೪ ಆಣೆಯಂತೆ ಕರ ಆಕರಣೆ ಮಾಡಲಾಗುವದು. ಈ ಸವಲತ್ತಿನಿಂದ ಸರಕಾರಕ್ಕೆ ೨ ಕೋಟಿ ರೂ. ಉತ್ಪನ್ನವು ಕಡಿಮೆ ಆಗುವದೆಂದು ಗಣಿಸಲಾಗಿದೆ.

೨೦ ಸಾವಿರ ಅಥವಾ ಅದಕ್ಕೂ ಕಡಮೆ ಉತ್ಪನ್ನವಿದ್ದ ಕಂಪನಿಗಳ ಉತ್ಪನ್ನದ ಮೇಲೆ ಈಗಿದ್ದ ಕರದ ಅರ್ಧದಷ್ಟು ಉತ್ಪನ್ನ ಕರ ಹಾಕಲಾಗುವದು. ಇದರಿಂದ ೧೨ ಲಕ್ಷ ರೂ. ಗಳ ವರಮಾನ ಸರಕಾರಕ್ಕೆ ಕಡಮೆಯಾಗುವದು.

ಅಂಚೆ ರಜಿಸ್ಟ್ರೇಶನ್ ಫೀ ಈಗ ೩ ಆಣೆ ಇದ್ದದ್ದು ೪ ಆಣೆಗೆ ಏರಿಸಲಾಗುವದು.

ಮುಂಗಡ ಪತ್ರಿಕೆಯ ವಿಹಂಗಮ ನೋಟ

ಆದಾಯ	೨೩೦.೫೨ ಕೋಟಿ ರೂ.
ವೆಚ್ಚ	೨೫೭.೩೭ ಕೋಟಿ ರೂ.
ಕೊರತೆ	೨೬.೮೫ ಕೋಟಿ ರೂ.

ಆದಾಯದ ಮುಖ್ಯಾಂಶಗಳು

ಸುಂಕಗಳು	೮೧.೭೫ ಕೋಟಿ ರೂ.
ಅಬಕಾರಿ	೩೪.೦೦ ಕೋಟಿ ರೂ.
ಉತ್ಪನ್ನಕರ	೮೦.೨೪ ಕೋಟಿ ರೂ.

ವೆಚ್ಚದ ವಿವರ

ಸಂರಕ್ಷಣ ಶಾಖೆಗೆ	೧೨೧.೦೮ ಕೋಟಿ ರೂ.
ನಾಗರಿಕ ಶಾಖೆಗೆ	೧೩೬.೨೯ ಕೋಟಿ ರೂ.

ಕರಗಳಲ್ಲಿ ಹೆಚ್ಚಳ

ಸಿಗರೇಟ ನೂರಕ್ಕೆ ೨೫ ರಷ್ಟು
ಚಹಾ ೧ ಪೌಂಡಿಗೆ ೨ ರಿಂದ ೪ ಆಣೆಗೆ ಏರಿತು
ಕಾಫಿ ೧ ಪೌಂಡಿಗೆ ೨ ರಿಂದ ೪ ಆಣೆಗೆ ಏರಿತು
ವನಸ್ಪತಿ ತುಪ್ಪ ೧ ಹಂಡ್ರೆಡ್ ವೆಟಗೆ ೧ ರೂ. ೭ ಆ.
ಟೈರುಗಳು ೧೦೦ಕ್ಕೆ ೫೦ ರಷ್ಟು
ಬೆಂಕಿಪೆಟ್ಟಿಗೆ ೧ ಗ್ರೋಸಿಗೆ ೨ ರೂ. ೮ ಆಣೆ.
ಅಂಚೆ ರಜಿಸ್ಟ್ರೇಶನ್ ೩ ರಿಂದ ೪ ಆಣೆಗೆ ಏರಿತು.
ಟೆಲಿಫೋನ ಸರಚಾರ್ಜ ೧೦೦ಕ್ಕೆ ೪೦ ರಿಂದ ೬೦ಕ್ಕೆ

ಅರ್ಥಸಚಿವರ ಭಾಷಣದ ಸಾರ

ತಾತ್ಪೂರ್ತಿಕ ಮುಂಗಡ ಪತ್ರಿಕೆಯಲ್ಲಿ ಹೋದ ಸಲ ೨೪.೨೫ ಕೋಟಿ ಕೊರತೆ ತೋರಿಸಿದ್ದರೂ ಪ್ರತ್ಯಕ್ಷವಾಗಿ ೬.೫೨ ಕೋಟಿಯ ಕೊರತೆ ಮಾತ್ರ ಆಯಿತು.

ಸಂರಕ್ಷಣ ಶಾಖೆಗೆ ೧೨೧.೦೮ ಕೋಟಿ ವೆಚ್ಚದ ಅಂದಾಜ ಮಾಡಲಾಗಿದೆ. ಆಹಾರದ ಬಗ್ಗೆ ಧನಸಹಾಯವೆಂದು ೧೯.೯೧ ಕೋಟಿ ರೂ. ಎಂದು ಗಣಿಸಿದೆ. ಹೆಚ್ಚು ಆಹಾರ ಬೆಳೆಯಲು ಪ್ರೋತ್ಸಾಹಿಸಲಾಗುವದು.

ಬರುವ ವರ್ಷ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳ ಯೋಜನೆಗಳ ಬಗ್ಗೆ ೧೬೫ ಕೋಟಿ ರೂ. ವಿನಿಯೋಗ ಮಾಡಬಹುದು. ಈ ವೆಚ್ಚವು ಬಂಡವಾಲ ತೊಡಗಿಸುವ ಸ್ವರೂಪದ್ದಿರುವ ಮೂಲಕ ೧೫೦ ಕೋಟಿ ರೂ. ಸಾಲ ತೆಗೆದು ಈ ಯೋಜನೆಗೆ ಹಣ ಒದಗಿಸಲಾಗುವದು.

ಅಸ್ಥಿರ ರಾಜಕೀಯ ಪರಿಸ್ಥಿತಿ ದೇಶದ ವಿಭಜನ ಎಲ್ಲೆಲ್ಲಿಯೂ ನಡೆದ ಜಾತೀಯ ಗಲಭೆ ಇವುಗಳಿಂದ ಸಾರ್ವಜನಿಕರಿಂದ ನಿರೀಕ್ಷಿಸಿದಷ್ಟು ಸಾಲ ದೊರಕಿಸುವದಾಗಲಿಲ್ಲ. ಕಳೆದ ವರ್ಷ ನವೆಂಬರದಲ್ಲಿ ಬಿನ್ನವಿಸಿದಂತೆ ಸಾಲ ಎತ್ತುವ ಯೋಜನೆಗಳಲ್ಲಿ ಸರಕಾರಕ್ಕೆ ಸಾರ್ವಜನಿಕರು ಸಹಾಯ ಸಲ್ಲಿಸಬೇಕೆಂದು ಮತ್ತೆ ಬೇಡಿಕೊಳ್ಳುತ್ತೇನೆ ಎಂಬುದಾಗಿ ಅರ್ಥಸಚಿವರು ನುಡಿದರು.

ಮುಂಗಡ ಪತ್ರಿಕೆಯಿಂದಾದ ಪ್ರತಿಕ್ರಿಯೆಗಳು

ಅರ್ಥಸಚಿವರು ಮಂಡಿಸಿದ ಮುಂಗಡ ಪತ್ರಿಕೆಯ ಬಗ್ಗೆ ಆದ ಪ್ರತಿಕ್ರಿಯೆಗಳು ಒಟ್ಟಿನಲ್ಲಿ ಹಿತಾವಹವಾಗಿವೆಯೆನ್ನಬಹುದು. ಆರ್ಥಿಕ ಪರಿಸ್ಥಿತಿಯನ್ನು ಸಮತೋಲಕ್ಕೆ ತರುವ ಪ್ರಾಮಾಣಿಕ ಪ್ರಯತ್ನವಿದಾಗಿದೆಯೆಂದು ಅನೇಕರ ಅಭಿಮತ. ಅದರೂ ಈ ಬಗ್ಗೆ ಶಾಸನ ಸಭೆಯಲ್ಲಿ ಟೀಕೆಗಳಾಗದಿರಲಿಲ್ಲ. ಶ್ರೀ ಅನಂತಶಯನಂ ಅಯ್ಯಂಗಾರರು ಈ ಮುಂಗಡ ಪತ್ರಿಕೆಗೆ ಸಮಿಶ್ರ ಸ್ವಾಗತವೆಂದರು. ಒಂದಾನೊಂದು ಕಾಲಕ್ಕೆ ವಿಲಾಸವಸ್ತುಗಳೆನಿಸಿದ ಚಹಾ ಕಾಫಿಗಳಂತಹ ಪದಾರ್ಥಗಳು ಇಂದು ಜೀವನಾವಶ್ಯಕ ಸರಕುಗಳಾಗಿವೆ. ಇವುಗಳ ಮೇಲೆ ಕರ ಹೇರಿದ್ದು ಅನುಚಿತವೆಂದು ಅವರು ಪ್ರತಿಪಾದಿಸಿ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ಎದುರಿಸಲು ತಕ್ಕ ಸಿದ್ಧತೆ ಮಾಡಿಕೊಳ್ಳಬೇಕು. ದೇಶದ ಉತ್ಪಾದಕ ಶಕ್ತಿ ಬೆಳೆದು ಸುಸಮರ್ಥ ಸೈನ್ಯಪಡೆಯನ್ನು ಏರ್ಪಡಿಸಿಕೊಳ್ಳಬೇಕು. ಇದಕ್ಕೆ ೫ ವರ್ಷಗಳ ಒಂದು ಯೋಜನೆ ಅಗತ್ಯ. ಇತರ ರಾಷ್ಟ್ರಗಳ ಮೇಲೆ ನಮ್ಮ ವರ್ಚಸ್ಸು ಬೀಳಬೇಕಾದರೆ ಉತ್ಪಾದನೆ ದೇಶದಲ್ಲಿ ಹೆಚ್ಚಲೇಬೇಕು. ಬಡವರ ವಿಚಾರಗಳನ್ನಾದರೂ ಗಮನಿಸುವದು ಅವಶ್ಯ. ಆರ್ಥಿಕ ಮಸೂದೆಯ ತಜ್ಞ ಸಮಿತಿಯು ಈ ಪ್ರಶ್ನೆಗಳನ್ನು ವಿಚಾರಿಸುವದೆಂದು ಆಶಿಸುತ್ತೇನೆ ಎಂದು ಮುಂತಾಗಿ ಹೇಳಿದರು.

ಸಯ್ಯದ ಕರೀಮ ಉದ್ದೀನರು ಹಿಂದುಸ್ತಾನವು ಈಗ ಅನೇಕ ಎಡರುಗಳನ್ನು ಎದುರಿಸುತ್ತಿದ್ದರೂ ಅವುಗಳ ಉಲ್ಲೇಖ ಈ ಪತ್ರಿಕೆಯಲ್ಲಿ ಇಲ್ಲವೆಂದರು. ಅದರಂತೆ ರಾಷ್ಟ್ರೀಕರಣದ ಮಾತು ಹಾಗೂ ಅಧಿಕ ಆಹಾರ ಉತ್ಪಾದನೆಗೆ ಯಾಂತ್ರಿಕ ಸಲಕರಣೆ ಇವುಗಳ ಬಗ್ಗೆ ನಿರ್ದಿಷ್ಟ ಧೋರಣೆ ವ್ಯಕ್ತಪಡಿಸುವಂತಹ ವಿಷಯ ಈ ಮುಂಗಡ ಪತ್ರಿಕೆಯಲ್ಲಿಲ್ಲವೆಂದು ಹೇಳಿ ಲೆಕ್ಕ ಬಾಯಿಗೂಡಿಸಲು ಅರ್ಥಸಚಿವರು ಒಬ್ಬರ ಕಿಸೆಯಿಂದ ಕದ್ದುದನ್ನು ಇನ್ನೊಬ್ಬರ ಕಿಸೆಗೆ ಹಾಕಿದ್ದಾರೆ ಎಂದು ಟೀಕಿಸಿದರು.

ಶ್ರೀ ಹರಿಹರನಾಥ ಶಾಸ್ತ್ರಿಗಳು ಈ ಮುಂಗಡ ಪತ್ರಿಕೆಯು ಬಡವರ ಹಿತನೋಡಿಲ್ಲವೆಂದು ನುಡಿದರು.

ಶ್ರೀಮತಿ ದುರ್ಗಾಬಾಯಿ, ಶ್ರೀ. ಎನ್. ವಿ. ಕೃಷ್ಣಮೂರ್ತಿಯವರು. ಚಹಾ ಕಾಫಿ ಕಡ್ಡಿಪೆಟ್ಟಿಗೆಗಳ ಮೇಲೆ ಹೇರಿದ ಕರವನ್ನು ಟೀಕಿಸಿ ಮಾತನಾಡಿದರು.


ಶ್ರೀ ರಂಗರಾವ ದಿವಾಕರ

ಕರ್ನಾಟಕದ ಪ್ರತಿನಿಧಿಗಳಾದ ಶ್ರೀ ರಂಗರಾವ ದಿವಾಕರರು, ಮುಂಗಡ ಪತ್ರಿಕೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಲಿಲ್ಲ ಯಾವ ವ್ಯವಸ್ಥೆಯೂ ಕಂಡುಬರುವದಿಲ್ಲವೆಂದು ಉದ್ಗಾರತೆಗೆದರು. ಅವರು ಇನ್ನೂ ಹೇಳಿದ್ದು ಹೀಗೆ.

ಸ್ವಾತಂತ್ರ್ಯ ಸಿಕ್ಕ ಬಳಿಕ ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಂಥ ಯೋಜನೆಗಳನ್ನು ಸಿದ್ಧಪಡಿಸುವದು ನಮ್ಮ ಆದ್ಯಕರ್ತವ್ಯ. ಹೊಟ್ಟೆಗೆ ಬಟ್ಟೆಗೆ ಚಾಟಿ ಹಾಯಿತೆಂದು ಆ ಪ್ರಶ್ನೆಯನ್ನು ಕಡೆಗಣಿಸುವದು ಸರಿಯಲ್ಲ. ವ್ಯಾಪಾರ ಲಾಭಕರ, ಸೂಪರ ಟ್ಯಾಕ್ಸ ಹೀಗೆ ಅಲ್ಲಿಷ್ಟು ಇಲ್ಲಿಷ್ಟು ಕರಭಾರ ಕಡಮೆ ಮಾಡಿದರೆ ಉದ್ಯೋಗೀಕರಣಕ್ಕೆ ಪ್ರೋತ್ಸಾಹನ ಕೊಟ್ಟಂತಾಗಲಿಲ್ಲ.

"ಮೊದಲನೆಯ ಮಹತ್ವದ ಕೆಲಸವೆಂದರೆ ನಾವು ಪರದೇಶದಿಂದ ಆಹಾರ ಧಾನ್ಯ ಕೊಳ್ಳುವದನ್ನು ನಿಲ್ಲಿಸಬೇಕು. [illegible] ಈಗ ಬಹಳ ಹಣ

(ಕೊನೆಯ ಪುಟಕ್ಕೆ)



ಕು. ವಿಮಲಾ ರಾಜೆ ಮತ್ತು ಶ್ರೀ. ವಿ. ಎನ್. ಲೋಕೂರ

ಇವರ ವಿವಾಹವು ಪುಣೆಯಲ್ಲಿ ೨೬—೨—೪೮ ನೇ ದಿನ ವಿಜೃಂಭಣೆಯಿಂದ ಜರುಗಿತು. ಶ್ರೀ. ಲೋಕೂರರು, ಮುಂಬಯಿ ಹಾಯ್‌ಕೋರ್ಟಿನ ನಿವೃತ್ತ ನ್ಯಾಯಾಧೀಶ ಶ್ರೀ. ಲೋಕೂರ ನಾರಾಯಣರಾಯರ ಮಕ್ಕಳು. ಕು. ವಿಮಲಾರಾಜೆ ಇವರು ಭೋರ ಸಂಸ್ಥಾನದ ಯುವರಾಜರ ಜ್ಯೇಷ್ಠ ಪುತ್ರಿಯು.

ಫೋಟೋ:— ಶಿಲ್ಪ ಸ್ಟುಡಿಯೋ ಬೆಳಗಾವಿ.

ಮುಂಬಯಿ ವಿಧಿಮಂಡಳ

ಹಿಂದೂ ಮಹಾಸಭೆಯ ಮೇಲಿನ ನಿರ್ಬಂಧದ ಬಗ್ಗೆ ಚರ್ಚೆ

ಮುಂಬಯಿ ವಿಧಿ ಮಂಡಳದಲ್ಲಿ ನಾಲ್ಕನೆಯ ತಾರೀಖಿನ ದಿವಸ ಹಿಂದೂ ಮಹಾಸಭೆಯ ಸದಸ್ಯರಾದ ಶ್ರೀ. ಆರ್. ಎಸ್. ಮಂಡಲೀಕರು ನಿಲುವಳಿ ಸೂಚನೆಯೊಂದನ್ನು ಮಂಡಿಸಿ ಈ ರೀತಿ ಹೇಳಿದರು. ಹಿಂದುಮಹಾಸಭೆ ಅಕ್ರಮ ಸಂಸ್ಥೆಯೆಂದು ಸಾರಲ್ಪಟ್ಟಿರದಿದ್ದರೂ ಮಹಾಸಭೆಯ ಅನೇಕ ಕಾರ್ಯಕರ್ತರನ್ನು ವಿಚಾರಣೆಯಿಲ್ಲದೆ ಸ್ಥಾನಬದ್ಧತೆಯಲ್ಲಿಡಲಾಗಿದೆಂಬುದೆ ಅವರ ನಿಲುವಳಿ ಸೂಚನೆಯ ವಾದವಾಗಿತ್ತು. ಚರ್ಚೆಯ ನಂತರ ನಿಲುವಳಿ ಸೂಚನೆ ನಿರಾಕೃತವಾಯಿತು. ಮಂಡಲೀಕರು ಸಭಾತ್ಯಾಗ ಮಾಡಿದರು. ಶ್ರೀ. ಬಖಲೆಯವರ ಸ್ಥಳಕ್ಕೆ ನಾಮಕರಣ ಹೊಂದಿದ ಶ್ರೀ. ಅಬೀದಅಲ್ಲಿ ಜಾಫರಭಾಯಿಯವರ ಪ್ರತಿಜ್ಞಾವಿಧಿ ಇಂದು ಜರುಗಿತು. ಅನಂತರ ಮುಖ್ಯಮಂತ್ರಿ ಬಿ. ಜಿ. ಖೇರರು ಪುಣೆ ವಿಶ್ವವಿದ್ಯಾಲಯ ಮಸೂದೆಯನ್ನು ಮಂಡಿಸಿದರು. ಈ ಸಂಬಂಧದಲ್ಲಿ ಮಾತಾಡುತ್ತ ಅವರು ರಾಷ್ಟ್ರದ ಪ್ರಗತಿಯನ್ನು ಸಾಧಿಸಲು ಸುಶಿಕ್ಷಿತ ಯುವಕರನ್ನು ತಯಾರಿಸುವದೆ ಇಂದಿನ ಶಿಕ್ಷಣದ ಉದ್ದೇಶವಾಗಿದೆಯೆಂದರು. ಡಾ. ಜಿ. ಎಸ್. ಮಹಾಜನಿಯವರು ತಿದ್ದುಪಡಿಯೊಂದನ್ನು ಮಂಡಿಸಿದ್ದರು. ಆದರೆ ಅದು ನಿರಾಕೃತವಾಯಿತು. ಪುಣೆ ಮುಂಬಯಿಗೆ ಅಧಿಕ ಸಿವಿಲ್‌ಕೋರ್ಟು ಬೇಕೆನ್ನುವ ಮೊದಲಾದ ಮಸೂದೆ ಸ್ವೀಕೃತವಾದವು.

ಮದ್ರಾಸ ಲೀಗಪಕ್ಷದ ವಿಸರ್ಜನೆ

ಮುಸ್ಲಿಂಲೀಗ ಪಕ್ಷವು ತನ್ನ ವಿರೋಧಿ ಪಕ್ಷದ ಸ್ಥಾನವನ್ನು ಬೇಗನೆ ಬಿಟ್ಟುಕೊಟ್ಟು ಸಂಯುಕ್ತ ಪ್ರಜಾಪ್ರಭುತ್ವವಾದಿಗಳೆಂಬ ಹೊಸ ಪಕ್ಷವಾಗಿ ಕೆಲಸ ಮಾಡಲಿರುವದು. ಈ ಹೊಸ ಪಕ್ಷದ ಧುರೀಣರಾದ ಡಾ. ವಿ. ಕೆ. ಜಾನರು ಮುಸ್ಲಿಂಲೀಗದವರನ್ನೊಳಗೊಂಡು ೯ ಜನರ ಯಾದಿಯನ್ನು ತಮ್ಮ ಕಡೆಗೆ ಕೊಟ್ಟಿರುವದಾಗಿ ಮದ್ರಾಸ ವಿಧಿಮಂಡಳದ ಅಧ್ಯಕ್ಷರಾದ ಶ್ರೀ. ರಾಮಕೃಷ್ಣ ರಾಜುರವರು ಹೇಳಿದರು. ಸದ್ಯಕ್ಕೆ ವಿರೋಧಿಪಕ್ಷದ ಧುರೀಣರಾದ ಶ್ರೀ. ಕೆ. ಉಪ್ಪೀಸಾಹೇಬರ ಪ್ರತಿಕ್ರಿಯೆಯ ಬಗ್ಗೆ ತಾವು ಇನ್ನು ಒಂದೆರಡು ದಿನ ಕಳೆದು ನಂತರ ಡಾ. ಜಾನರಿಗೆ ಆ ಸ್ಥಾನ ಕೊಡಲಿರುವದಾಗಿಯೂ ಅವರು ಹೇಳಿದರು. ಈ ಹೊಸ ಪಕ್ಷ ಖಾತ್ರೀತವಾಗಿದ್ದು ಧುರೀಣರಾದ ಡಾ. ಜಾನರು ಇಂದಿನ ವರೆಗೆ ಸ್ವತಂತ್ರ ಸದಸ್ಯರಾಗಿದ್ದರು.

ಪುದುಕೊಟ್ಟೆ ಸಂಸ್ಥಾನವು ವಿಲೀನವಾಯಿತು

ಮಾರ್ಚ ೩ನೇ ತಾರೀಖಿನಿಂದಲೇ ಮದ್ರಾಸ ಸರಕಾರವು ಪುದುಕೊಟ್ಟೆ ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡಿತು. ಭಾರತ ಸರಕಾರದ ಸಂಸ್ಥಾನ ಖಾತೆಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲ ಮತ್ತು ಪುದುಕೊಟ್ಟೆ ಸಂಸ್ಥಾನದ ಮಹಾರಾಜರ ನಡುವೆ ಮಾತುಕತೆಗಳು ನಡೆದು ಈ ತ್ವರಿತ ತೀರ್ಮಾನಕ್ಕೆ ಬಂದು ಒಪ್ಪಂದಕ್ಕೆ ಅಂಕಿತವನ್ನಿಡಲಾಯಿತು. ಈ ಬಗ್ಗೆ ಮದ್ರಾಸ ಸರಕಾರದವರು ಹೊರಡಿಸಿದ ಪ್ರಕಟನೆಯ ಸಾರ ಹೀಗಿದೆ:—

ಜನತೆಯ ಮತ್ತು ಮಹಾರಾಜರ ಹಿತದ ದೃಷ್ಟಿಯಿಂದ ಪುದುಕೊಟ್ಟೆವನ್ನು ಮದ್ರಾಸ ಪ್ರಾಂತದಲ್ಲಿ ವಿಲೀನಗೊಳಿಸುವದು ಯೋಗ್ಯವೆಂದು ಕೇಂದ್ರ ಸರಕಾರದ ಸಂಸ್ಥಾನ ಖಾತಾ ಮಂತ್ರಿ ಸರದಾರ ಪಟೇಲರು ಮಹಾರಾಜರಿಗೆ ಸಲಹೆ ಕೊಟ್ಟರು. ಮಹಾರಾಜರಿಗೂ ಇದು ಸರಿದೋರಿ ವಿಲೀನೀಕರಣಕ್ಕೆ ಒಪ್ಪಿ ಅಂಕಿತವಿಟ್ಟರು. ಆ ಪ್ರಕಾರ ಇದೇ ಮಾರ್ಚ ೩ನೇ ತಾ. ನಿಂದ ಮದ್ರಾಸ ಸರಕಾರವು ಪುದುಕೊಟ್ಟೆ ಸಂಸ್ಥಾನದ ಆಡಳಿತವನ್ನು ವಹಿಸುವದು.

ಪುದುಕೊಟ್ಟೆವು ಮದ್ರಾಸ ಪ್ರಾಂತದಲ್ಲಿಯ ತ್ರಿಚನಾಪಳ್ಳಿ, ತಂಜಾವರ, ರಾಮನಾಥ, ಜಿಲ್ಲೆಗಳ ನಡುವಿನ ಸಂಸ್ಥಾನವು. ಇದರ ಕ್ಷೇತ್ರ ೧೧೭೯ ಚೌರಸ ಮೈಲು ಇದೆ. ಜನಸಂಖ್ಯೆ ೪ಲಕ್ಷ ೩೮ ಸಾವಿರವಿರುತ್ತದೆ. ಇದರ ಆದಾಯವು ೨೦ ಲಕ್ಷ ರೂಪಾಯಿ

ನಾಲ್ಕು ವರ್ಷಗಳಲ್ಲಿ ಪೂರ್ಣ ಮದ್ಯಪಾನ ಪ್ರತಿಬಂಧ

ಮುಂಬಯಿ ಸರಕಾರದ ನಿರ್ಧಾರ

ಮುಂಬಯಿಯ ಕೂಲಿಕಾರರ ವಸತಿ ಸ್ಥಳವಾದ ಪರೆಲ ಭಾಗದಲ್ಲಿ ಮದ್ಯಪಾನ ಪ್ರತಿಬಂಧ ಯೋಜನೆಯನ್ನು ಪ್ರಾರಂಭಿಸುತ್ತ ಗವರ್ನರರಾದ ಶ್ರೀ ಮಹಾರಾಜಸಿಂಗರವರು ಬರುವ ನಾಲ್ಕು ವರುಷಗಳಲ್ಲಿ ಇಡೀ ಪ್ರಾಂತದಲ್ಲಿ ಸಂಪೂರ್ಣ ಮದ್ಯಪಾನ ಪ್ರತಿಬಂಧ ಮಾಡಲಾಗುವದೆಂದು ಸಾರಿದರು. ಮದ್ಯ ಕುಡಿಯುವದರಿಂದ ಮಾನವನ ಜೀವಿತ ಹಾಳಾಗುವದಿಷ್ಟೇ ಅಲ್ಲ ಹಣವೂ ಸೋರಿಯಾಗಿ ಅವನ ಕುಟುಂಬವೆಲ್ಲ ಬಳಲಬೇಕಾಗುವದೆಂದು ಅವರು ಹೇಳಿದರು. ಅಬಕಾರಿ ಮಂತ್ರಿಗಳಾದ ಶ್ರೀ ಪಾಟೀಲರು ಸ್ಥಾನಿಕ ಸಂಸ್ಥೆಗಳ ಮಂತ್ರಿಗಳಾದ ಶ್ರೀ ವರ್ತಕರು ಕೂಡ ಸರಕಾರದ ಯೋಜನೆಯನ್ನು ವಿವರಿಸಿದ್ದಲ್ಲದೆ ಅದನ್ನು ಕಾರ್ಯಕಾರಿ ಮಾಡುವಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೇಳಿಕೊಂಡರು ಜನವರಿಗೆ ಇದೊಳ್ಳೇ ಸಂತೋಷದ ಸಂಗತಿಯೆಂದು ಅವರು ಹೇಳಿದರು.

ಮುಂಬಯಿ ಸರಕಾರದ ಪಂಚವಾರ್ಷಿಕ ವಸತಿ ಯೋಜನೆ

ನಾಲ್ಕು ಕೋಟಿ ರೂಪಾಯಿ ವೆಚ್ಚ

ಮುಂಬಯಿ ಸರಕಾರದವರು ಬರುವ ಐದು ವರುಷಗಳಲ್ಲಿ ೪ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ೧೨೫೦೦ ವಸತಿಗಳನ್ನು ಕಟ್ಟಿಸುವ ಯೋಜನೆಯೊಂದನ್ನು ನಿರ್ಧರಿಸಿ ಅದನ್ನು ಕಾರ್ಯಗತಕ್ಕೆ ತರಲು ಪ್ರಾರಂಭಿಸಿದ್ದಾರೆ. ಕೂಲಿಕಾರ ಮಂತ್ರಿಗಳಾದ ಗುಲಜಾರಿಲಾಲ ನಂದಾ ಇವರು ಪಾಲ್ಘರದ ತಾರೀಖಿನ ದಿನ ಈ ಯೋಜನೆಯನ್ನು ಬಹಿರಂಗ ಪಡಿಸಿದರು. ಈ ೧೨೫ ಸಾವಿರ ವಸತಿಗಳಲ್ಲಿ ಸರಕಾರದವರು ೧೫ ಸಾವಿರ ವಸತಿಗಳನ್ನು ಸ್ವತಃ ಕಟ್ಟಿಸುವರು. ಉಳಿದವುಗಳನ್ನು ಬೇರೆ ಬೇರೆ ಸಹಕಾರ ಸಂಸ್ಥೆಗಳು, ಸ್ಥಾನಿಕ ಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳು ಮೊದಲಾದವರಿಂದ ಯೋಗ್ಯ ಸಹಾಯ ಸೌಕರ್ಯಗಳನ್ನು ಕೊಟ್ಟು ಕಟ್ಟಿಸಿಕೊಳ್ಳಲಾಗುವದು. ಈಗಾಗಲೆ ಮುಂಬಯಿ ಅಹಮದಾಬಾದ ಸೊಲ್ಲಾಪುರಗಳಲ್ಲಿ ಈ ಕಾರ್ಯ ಪ್ರಾರಂಭವಾಗಿದೆ. ಬರುವ ಮಳೆಗಾಲದೊಳಗಾಗಿ ೬೪ ಲಕ್ಷ ರೂಪಾಯಿ ವೆಚ್ಚದ ವಸತಿಗಳು ನಿರ್ಮಿತವಾಗುವವೆಂದು ಅಂದಾಜಿದೆ.

ಐದು ವರ್ಷಗಳಲ್ಲಿ ಸರಕಾರದವರು ಗೊತ್ತುಪಡಿಸಿದಷ್ಟು ವಸತಿಗಳನ್ನು ಮುಗಿಸಿಬಿಡಬೇಕೆಂದು ನಿರ್ಧರಿಸಿದೆಯೆಂದು ನಂದಾರವರು ಹೇಳಿದರು. ಕೇಂದ್ರ ಸರಕಾರದವರು ಬಿಡಿ ಸುರ ಮೇಲೆ ಕರವನ್ನು ಹೇರಿ ವಸತಿಗಳಿಗಾಗಿ ಭಾರೀ ಹಣವನ್ನು ಪ್ರಾಂತೀಯ ಸರಕಾರಗಳಿಗೆ ಒದಗಿಸಿ ಕೊಡುವವರೆಗೆ ವಸತಿಗಳ ಕೊರತೆ ಪೂರ್ಣವಾಗಿ ನಿವಾರಣೆಯಾಗಲಾರದೆಂದು ಮಂತ್ರಿಗಳು ಅಭಿಪ್ರಾಯಪಟ್ಟರು. ಅಲ್ಲಿಯ ವರೆಗೆ ಮರ್ಯಾದಿತ ಕ್ಷೇತ್ರದಲ್ಲಿಯೇ ಈ ಕಾರ್ಯ ನಡೆಯತಕ್ಕದ್ದೆಂದೂ ಅವರು ಹೇಳಿದರು.

ಮುಂಬಯಿ ಶಾಸನ ಸಭೆ

ಮುಂಬಯಿ ಶಾಸನ ಸಭೆಯಲ್ಲಿ ಮುಂಗಡ ಪತ್ರಿಕೆಯ ಮೇಲೆ ಚರ್ಚೆ ನಡೆದಿದೆ. ನಾಲ್ಕನೇ ತಾರೀಖಿನ ಸಭೆಯಲ್ಲಿ ಒಕ್ಕಲತನ ಮತ್ತು ಉದ್ಯೋಗಗಳ ಅಭಿವೃದ್ಧಿಗಾಗಿ ತೀವ್ರ ಉಪಾಯಗಳನ್ನು ಯೋಜಿಸಲಿಲ್ಲೆಂದು ಶಮಸುದ್ದೀನರು ಅಭಿಪ್ರಾಯಪಟ್ಟರು. ಅಬಕಾರಿ ಕರವನ್ನು ಶಿಕ್ಷಣದ ಅಭಿವೃದ್ಧಿಗಾಗಿ ಉಪಯೋಗಿಸಬಹುದಾಗಿದೆ. ಅದುದರಿಂದ ಸರಕಾರಕ್ಕೆ ಉತ್ಪನ್ನ ಹೆಚ್ಚಾಗಲಿರುವ ಮದ್ಯಪಾನ ನಿರೋಧವನ್ನು ಕೈಕೊಳ್ಳಬಾರದು. ಅದರಿಂದ ಸರಕಾರದ ಉತ್ಪನ್ನ ಕಡಿಮೆಯಾಗುವದು ಎಂದು ಸಿ ಆರ್ ಶಾಸ್ತ್ರಿಗಳು ಹೇಳಿದರು.

ಅಬಕಾರಿ ಮಂತ್ರಿಗಳಾದ ಎಲ್ ಎಂ ಪಾಟೀಲರು ಉತ್ತರ ಕೊಡುತ್ತ ಸರಕಾರಿ ಸಮಾರಂಭಗಳಲ್ಲಿ ಕೇಂದ್ರ ಸರಕಾರ ಇಟ್ಟುಕೊಂಡ ನಿಯಮಗಳನ್ನನುಸರಿಸುವದು. ಮದ್ಯಪಾನ ನಿರೋಧ ಧೋರಣವನ್ನು ಅನುಸರಿಸಲು ಸರಕಾರ ಬಹಳ ಕೊಂಡರೆ ಅಡಚಣೆಗಳನ್ನನುಭವಿಸಬೇಕಾಯಿತೆಂದು ಮುಂತಾಗಿಯೂ ಹೇಳಿದರು.

ಈ ವರ್ಷ ತಮ್ಮ ಮುಂಗಡ ಪಟ್ಟಿ ನಿಜಕ್ಕೂ ಉಳಿತಾಯದ್ದಾಗಿದೆ. ಅದುದರಿಂದ ಸರಕಾರ ಹೆಚ್ಚು ಕರಗಳನ್ನು ಹೇರದೆ ಕರಭಾರ ಕಡಿಮೆ ಮಾಡಬೇಕಾಗಿತ್ತು. ದೇಶದ ಉತ್ಪಾದನೆ ಹೆಚ್ಚಬೇಕಾಗಿದೆ. ಹೊಸ ಉದ್ಯೋಗಗಳಲ್ಲಿ ಹಣ ತೊಡಗಿಸಲು ಅನುಕೂಲ ವಾತಾವರಣ ನಿರ್ಮಿಸಬೇಕು ಎಂದು ರಾಮನಾಥ ಪೊದ್ದಾರರು ಹೇಳಿ ಸರಕಾರ ತನ್ನ ರಾಷ್ಟ್ರೀಕರಣದ ಧೋರಣವನ್ನು ಐದು ವರ್ಷ ಮುಂದೆ ತಳ್ಳಿದ್ದಕ್ಕಾಗಿ ಅದನ್ನು ಅಭಿನಂದಿಸಿ ಸ್ವಾಗತಿಸಿದರು.

ಮುಸಲ್ಮಾನರು ಮುಸ್ಲಿಂ ಲೀಗ ಪಕ್ಷವನ್ನು ವಿಸರ್ಜಿಸಿಬಿಡಬೇಕು. ಅಂದರೆ ಹೆಚ್ಚು ಉತ್ತಮರೀತಿಯಲ್ಲಿ ದೇಶ ಕಾರ್ಯ ಮಾಡಲು ಅವರಿಗೆ ಸಾಧ್ಯವಾಗುವದು ಎಂದು ಸೊಲ್ಲಾಪುರದ ಜಿ. ಡಬ್ಲ್ಯೂ. ಜೋಶಿಯವರು ತಮ್ಮ ಭಾಷಣದಲ್ಲಿ ಹೇಳಿದರು.

ಕೊಲ್ಹಾಪುರವೂ ಹಿಂದೀ ಒಕ್ಕೂಟದಲ್ಲಿ ಲೀನವಾಗಬೇಕು

ಕೊಲ್ಹಾಪುರ ಪ್ರಜಾಪರಿಷತ್ತಿನ ಎಲ್ಲ ೧೫ ತಾಲೂಕ ಕಮಿಟಿಗಳ ೧೦೦ಕ್ಕಿಂತ ಹೆಚ್ಚು ಸಭಾಸದರು ತಾ. ೧ಕ್ಕೆ ಕೊಲ್ಹಾಪುರದಲ್ಲಿ ದಕ್ಷಿಣ ಸಂಸ್ಥಾನ ಪ್ರಾದೇಶಿಕ ಸಮಿತಿಯ ಅಧ್ಯಕ್ಷರಾದ ರತ್ನಪ್ಪ ಕುಂಭಾರರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಕೊಲ್ಹಾಪುರ ಸಂಸ್ಥಾನವು ಸಹ ಹಿಂದೀ ಒಕ್ಕೂಟದಲ್ಲಿ ಲೀನವಾಗಬೇಕೆಂಬುದಾಗಿ ತೀರ್ಮಾನಿಸಲಾಯಿತು. ಅಲ್ಲದೆ ಎಲ್ಲ ತಾಲೂಕ ಕಮಿಟಿಗಳಿಗೆ ಕೂಡಲೇ ಈ ತರದ ನಿರ್ಣಯವನ್ನು ಕಳಿಸಲು ತಿಳಿಸಲಾಯಿತು.

ಸವಣೂರ ಪ್ರಜಾಪರಿಷತ್ತಿನ ಅಧಿವೇಶನ

ಲೀನೀಕರಣದಿಂದ ಪ್ರಜೆಗಳಿಗೆ ಆನಂದ

ಸವಣೂರು ಸಂಸ್ಥಾನದ ಪ್ರಜಾಪರಿಷತ್ತಿನ ಪ್ರಾರಂಭದ ಸಭೆ ... ಪ್ರಾರಂಭವಾಯಿತು. ನಿಯೋಜಿತ ಅಧ್ಯಕ್ಷರಾದ ಶ್ರೀ. ಅಂಬಾಶೆಟ್ಟಿ ದೊಡ್ಡಮೇಟಿಯವರು ... ಮುಂಬಯಿಗೆ ಹೋದ ಪ್ರಯುಕ್ತ ... ಶ್ರೀ. ಜಿ. ಜಿ. ಗೋಖಲೆ ಅವರ ಅಧ್ಯಕ್ಷತೆಯಲ್ಲಿ ನೆರೆಯಿತು. ... ಪ್ರಜಾಹಿತ ಸಂಘದ ಕಾರ್ಯದರ್ಶಿಗಳಾದ ಶ್ರೀ. ವಿ. ಎಸ್. ... ಸ್ವಾಗತಿಸಿದರು ... ಲೀನೀಕರಣಕ್ಕೆ ಸವಣೂರ ಪ್ರಜೆಗಳ ... ಲೀನೀಕರಣಕ್ಕೆ ಸಕಾಲದಲ್ಲಿ ಅಂಕಿತವಿಟ್ಟ ನವಾಬರನ್ನು ಅಭಿನಂದಿಸುವ, ಸಂಸ್ಥಾನ ಸಮಸ್ಯೆಯನ್ನು ... ಭಾರತ ಸರಕಾರದವರನ್ನು ... ಗೊತ್ತುವಳಿಗಳು ಸ್ವೀಕೃತವಾದವು.

ಲೀನೀಕರಣದಿಂದ ಉಂಟಾಗುವ ಸಮಸ್ಯೆಗಳನ್ನು ಸಮಾಲೋಚಿಸಲು ಒಂದು ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ. ಜಿ. ಜಿ. ಗೋಖಲೆ (ಅಧ್ಯಕ್ಷ) ಶ್ರೀ. ಆರ್. ಜಿ. ದೇಶಪಾಂಡೆ, ಶ್ರೀ. ಬಾಬಾಚಾರ್ಯ ರಾಯಚೂರ, ಶ್ರೀ. ಚನಬಸಪ್ಪ ಕುಲಕರ್ಣಿ, ಶ್ರೀ. ತಮ್ಮಣ್ಣ ... ಶ್ರೀ. ವಿ. ಎಸ್. ... ಇವರುಗಳು ಇರುವರಲ್ಲದೆ ಅವಶ್ಯಕಂಡರೆ ಹೆಚ್ಚು ಜನರನ್ನು ಸಮಿತಿಯಲ್ಲಿ ಸೇರಿಸಿಕೊಳ್ಳಲು ಈ ಸಮಿತಿಗೆ ಅಧಿಕಾರ ಕೊಡಲಾಗಿದೆ.

ಹದಿನಾರು ದಕ್ಷಿಣ ಸಂಸ್ಥಾನ ಮುಂಬಯಿಯಲ್ಲಿ ವಿಲೀನ

ಇಂದಿನಿಂದ ಅಧಿಕಾರ ಗ್ರಹಣ

ಕೇಂದ್ರ ಸರಕಾರದ ಅಪ್ಪಣೆಯ ಮೇರೆಗೆ ಮುಂಬಯಿ ಸರಕಾರದವರು ಇಂದು ಮಾರ್ಚ ೮ ನೇ ತಾರೀಖಿನ ದಿವಸ ಕೆಳಗಿನ ೧೬ ದಕ್ಷಿಣ ಸಂಸ್ಥಾನಗಳ ಆಡಳಿತವನ್ನು ವಹಿಸಿಕೊಳ್ಳುವರು. ಆ ಸಂಸ್ಥಾನಗಳೆಂದರೆ— ೧) ಸಾಂಗಲಿ ೨) ಮಿರಜ (ಹಿರಿ) ೩) ಮಿರಜ (ಕಿರಿ) ೪ ಜತ್ತ ೫) ಸವಣೂರ ೬) ಮುಧೋಳ ೭) ಜಮಖಂಡಿ ೮) ರಾಮದುರ್ಗ ೯) ಕುರುಂದವಾಡ (ಹಿರಿ) ೧೦) ಕುರುಂದವಾಡ (ಕಿರಿ) ೧೧) ಔಂಧ ೧೨) ಫಲ್ಟಣ ೧೩) ಭೋರ ೧೪) ಸಾವಂತವಾಡಿ ೧೫) ಅಕ್ಕಲಕೋಟ ೧೬) ವಾಡಿ ಜಾಗೀರು.

ಇವುಗಳಲ್ಲಿ ಸಾಂಗಲಿ ಎಲ್ಲಕ್ಕಿಂತ ದೊಡ್ಡ ಸಂಸ್ಥಾನವಾಗಿದ್ದು ವಾಡಿ ಎಲ್ಲಕ್ಕಿಂತ ಸಣ್ಣದಾಗಿದೆ. ಸಾಂಗಲಿ ಮಿರಜ ಕುರುಂದವಾಡ ಸಂಸ್ಥಾನಗಳ ಕಾಯದೆ ಸುವ್ಯವಸ್ಥೆಯನ್ನು ಈಗಾಗಲೆ ನೋಡಿಕೊಳ್ಳುತ್ತಿರುವ ಶ್ರೀ ... ರವರೆ ಈ ಮುಂದೆಯೂ ಆಡಳಿತವನ್ನು ವಹಿಸಿಕೊಳ್ಳುವರು. ಉಳಿದ ಸಂಸ್ಥಾನಗಳ ಆಡಳಿತಾಧಿಕಾರವನ್ನು ಆಯಾ ಭಾಗದ ಕಲೆಕ್ಟರರು ವಹಿಸಿಕೊಳ್ಳುವರು. ಇಂದು ಎಲ್ಲ ಸಾರ್ವಜನಿಕ ಕಟ್ಟಡಗಳ ಮೇಲೆ ರಾಷ್ಟ್ರಧ್ವಜಗಳನ್ನು ಹಚ್ಚಲಾಗುವದು ಮತ್ತು ಸಾರ್ವಜನಿಕ ಸಭೆಗಳೂ ಸೇರಿಸಲ್ಪಡುವವು. ಪೋಲೀಸರ ಕವಾಯತು ನಡೆಯುವದು.

(ಒನೆಯ ಪುಟದಿಂದ)

ಹಾಳಾಗುತ್ತಿದೆ. ಎರಡನೆಯ ಮಹತ್ವದ ಕೆಲಸವೆಂದರೆ ದೇಶದ ಉದ್ದಿಮೆಗಳಲ್ಲಿ ತಮ್ಮದೂ ಪಾಲಿದೆಯೆಂದು ಕೂಲಿಕಾರರಿಗೆ ಅನಿಸುವಂತಾಗಿ ಉತ್ಪಾದನೆ ಹೆಚ್ಚಾಗಬೇಕು.

ಮುಖ್ಯವಾದುದೆಂದರೆ ಉದ್ದಿಮೆಗಳಿಗೆ ಅವಶ್ಯವಾದ ಯಂತ್ರ ಸಾಮಗ್ರಿಯನ್ನು ನಾವು ಸಿದ್ಧಗೊಳಿಸಬೇಕು. ಸಂರಕ್ಷಣ ಖಾತೆಯ ವೆಚ್ಚ ಹೆಚ್ಚಾಗುತ್ತಿದೆ. ಅದ್ದರಿಂದ ಪೂರ್ಣ ಸೈನ್ಯದಾಗಬಹುದಾದಂತ ರಾಷ್ಟ್ರೀಯ ಸೈನ್ಯ ಪಡೆಯ ವಿಚಾರವನ್ನು ಸರಕಾರವು ಮಾಡಬೇಕು. ೨೫೦೦ ರೂ. ಗಳ ಬದಲು ೩೫೦೦ ರೂ. ಗಳ ಕಾಕ್ಷೇತ್ರ ... ಕರಭಾರದ ಸಂಖ್ಯೆ ... ಗಬೇಕು.

ಪರಿಗಣಿಸಿದ ರೀತಿ ಮಧ್ಯಮ ವರ್ಗದವರು ಜೀವನ ಸಾಗಿಸುವದು ಬಹಳ ತೊಂದರೆಯಾಗಿದೆ, ಅವರಿಗೆ ಪರಿಹಾರ ಕಲ್ಪಿಸಬೇಕು. ಹೀಗೆ ಅನೇಕ ರೀತಿಯ ಮಾತನಾಡಿದರು.

ನಮ್ಮ ನಾಡೂ ಮಹಿಳೆಯರೂ

(ಶಾರದಗೋಷ್ಠಿನ ಮಹಿಳಾ ಗೋಷ್ಠಿಗಾಗಿ ಸಿದ್ಧಪಡಿಸಿದ ಭಾಷಣ)

(ಶ್ರೀಮತಿ ಲೀಲಾಬಾಯಿ ಕಾಮತ್ ಉಡುಪಿ)

ಹೆಣ್ಣು ನಾಡಿನ ಅಡಿಗಲ್ಲು

ಅಡಿಗೆಯಮನೆಯ ಕತ್ತಲೆಯಲ್ಲಿರುವ ಸ್ತ್ರೀಯರು ಸುಖವನ್ನು ಮೂಲದಲ್ಲಿ ಹಿಡಿದ ಕಾರ್ಯವನ್ನು ಧೈರ್ಯಶಾಲಿಗಳಿಂದ ನೋಡಿ ಪೂರೈಸುವರೆಂಬುದನ್ನು ಹೇಳಿದ ಸ್ವಾತಂತ್ರ್ಯದ ಹೋರಾಟದಲ್ಲಿ ರಾಷ್ಟ್ರದ ಮನವರಿಕೆಗೆ ಬಂದಿದೆ. ಅನಾದಿ ಕಾಲದಿಂದಲೂ ಹೆಣ್ಣು ಒಂದಿಲ್ಲೊಂದು ವಿಧಾನದಿಂದ ಪುರುಷನಿಗೆ ಅವನ ಪ್ರತಿಯೊಂದು ಕೆಲಸದಲ್ಲಿ ನೆರವನ್ನು ನೀಡುತ್ತ ಬಂದಿದ್ದಾಳೆ. ತಾಯಿಯಾಗಿ ಒಂಬತ್ತು ತಿಂಗಳು ಹೊತ್ತು ಹೆತ್ತು ಅವನ ಅಂಗಾಂಗಗಳನ್ನು ತಿದ್ದಿದ್ದಾಳೆ. ತಂಗಿಯಾಗಿ ಅಕ್ಕನಾಗಿ, ಹಿತನಾಗಿ ಅವನಲ್ಲಿರುವ ಕಪ್ರರಶನ ದ್ವೇಷ ಅಸೂಯೆಗಳನ್ನು ತಡೆದಿದ್ದಾಳೆ. ಅರ್ಧಾಂಗಿಯಾಗಿ ಅವನ ಸುಖ ದುಃಖಗಳಲ್ಲಿ ಸಹಭಾಗಿಯಾಗಿ ಅವನ ಜೀವನವನ್ನು ಸುಖಮಯವನ್ನಾಗಿ ಮಾಡಿದ್ದಾಳೆ. ಮಗಳಾಗಿ ಅವನಲ್ಲಿದ್ದ ಕೋಮಲಭಾವಗಳನ್ನು ಜಾಗ್ರತಗೊಳಿಸಿದ್ದಾಳೆ. ಹೀಗೆ ಪ್ರತ್ಯಕ್ಷ ಪರೋಕ್ಷವಾಗಿ ಅವಳು ದೇಶದ ಉನ್ನತಿಗಾಗಿ ತನ್ನ ಪಾಲಿನ ಕಾರ್ಯವನ್ನು ಮೌನವಾಗಿ ಸಲ್ಲಿಸಿದ್ದಾಳೆ. ಗಗನ ಚುಂಬಿತ ಕಟ್ಟಡದ ಅಡಿಗಲ್ಲು ಹೊರನೋಟಕ್ಕೆ ಕಾಣದಿದ್ದರೂ ಕಟ್ಟಡದ ನಿರ್ಮಾಪಕರು ಅದರೊಳಗಿನ ಮಹತ್ವ ಬಲ್ಲವರಾಗಿದ್ದಾರೆ.

ಅವಳಲ್ಲಿ ಕರ್ತೃತ್ವ ಶಕ್ತಿಯುಂಟು

ಜನಸಾಮಾನ್ಯರು ಸ್ತ್ರೀ ಅಂದರೆ ಒಂದು ಹೆರಿಗೆಯ ಯಂತ್ರ, ಮಕ್ಕಳು ಮರಿಗಳಿಗೆ ಅನ್ನ ಬೇಯಿಸಿ ಹಾಕುವ ಸಂಬಳವಿಲ್ಲದ ಒಂದು ಆಳೆಂದು ತಿಳಿದರೆ ಅದು ತಪ್ಪು ತಪ್ಪು.

ಪುರಾಣಕಾಲದಲ್ಲಿ ಗಾರ್ಗಿ ಮೈತ್ರೇಯಿ ಇತ್ಯಾದಿ ಋಷಿ ಪತ್ನಿಯರು ವೇದಗಳನ್ನು ಬಲ್ಲವರಾಗಿದ್ದರು. ಹಾಗೆಯೇ ಸೀತಾ ಸಾವಿತ್ರಿ ದಮಯಂತಿ ದ್ರೌಪದಿ, ಮಂಡೋದರಿ ಕೈಕೇಯಿ ಅನುಸೂಯೆ ಲೋಪಾಮುದ್ರಾ, ಮೊದಲಾದವರು, ತಮ್ಮ ಉಚ್ಚ ತ್ಯಾಗ, ಚಾತುರ್ಯ, ಕಷ್ಟಸಹಿಷ್ಣುತೆ, ಶೀಲ ಧೈರ್ಯ, ಸಾಹಸ, ಪಾತಿವ್ರತ್ಯ ಮೊದಲಾದ ಅಮೂಲ್ಯ ಗುಣಗಳಿಂದಾಗಿ ಆಚಂದ್ರಾರ್ಕ ಪೂಜನೀಯರಾಗಿದ್ದಾರೆ.

ಆಕೆ ಶೂರಳೂ ಅಹುದು

ಚರಿತ್ರೆಯ ಕಾಲದಲ್ಲಿಯು ಸಹೋದರಿಯರೂ ತಿಗಳೂ ನಮಗೆ ಮಾರ್ಗದರ್ಶಕರೆನ್ನಬಹುದು. ಯುದ್ಧರಂಗದಲ್ಲಿ ಹೋರಾಡಿದ ವೀರೆಯರಾದ ರಾಣಿ ದುರ್ಗಾವತಿ, ಝಾನ್ಸಿ ಲಕ್ಷ್ಮೀಬಾಯಿ, ಚಾಂದಬೀಬಿ, ತಾರಾಬಾಯಿ ಮೊದಲಾದವರು ನಮ್ಮಲ್ಲಿ ವೀರರಸವನ್ನು ತುಂಬುವಂತಹರಾಗಿದ್ದಾರೆ. ಮಕ್ಕಳನ್ನು ಯಾವ ತರಹದಲ್ಲಿ ರಾಷ್ಟ್ರಭಕ್ತರನ್ನಾಗಿ ಮಾಡಬೇಕೆಂಬುದನ್ನು ನಾವು ಛತ್ರಪತಿ ಮಹಾರಾಜರ ತಾಯಿಯಾದ ಜೀಜಾಬಾಯಿಯವರ ಉದಾಹರಣೆಯಿಂದ ಕಲಿಸಬಹುದು. ಪಾತಿವ್ರತ್ಯ ನಷ್ಟಪಡಿಸಲು ಹವಣಿಸುವ ನರಾಧಮನನ್ನು ಯಾವ ತರದಿಂದ ಸದೆಬಡೆಯಬೇಕೆಂಬುದನ್ನು ಪದ್ಮಿನಿಯು ಚಾತುರ್ಯದಿಂದಲೂ, ಉಚ್ಚತರದ ಅಸಾಧಾರಣ ದೇಶಪ್ರೇಮವನ್ನು ತನ್ನ ಮುದ್ದುಮಗನನ್ನು ದೇಶಕ್ಕಾಗಿ ಬಲಿಗೊಟ್ಟ ಅಸಾಮಾನ್ಯ ತ್ಯಾಗವನ್ನು ಪನ್ನೆಯಿಂದಲೂ ಕಲಿಯಬಹುದು.

ಸ್ವರಾಜ್ಯದ ಹೋರಾಟದಲ್ಲಿಯೂ ಆಕೆ ಮುಂದಿದ್ದಾಳೆ

ಅದು ಚರಿತ್ರೆಯ ಮಾತಾಯಿತು. ಇಂದೂ ಸ್ತ್ರೀ ಸಾಕಷ್ಟು ಸಮಾಜ ಸೇವೆ ಮಾಡಿದ್ದಾಳೆ. ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ, ಕರನಿರಾಕರಣದ ಆಂದೋಲನ, ಪರದೇಶ ವಸ್ತ್ರಗಳ ಬಹಿಷ್ಕಾರ, ಇತ್ಯಾದಿ ಭಾರತ ಸ್ವಾತಂತ್ರ್ಯ ಅನುಸರಿಸಿಕೊಟ್ಟ ಎಲ್ಲಾ ಚಳವಳಿಗಳಲ್ಲಿ ಮಹಿಳೆಯರು ಪುರುಷರಷ್ಟೇ ಬಲಿದಾನ ಮಾಡಿದ್ದಾರೆ. ೧೯೪೨ ರ ಚಳವಳಿಯಲ್ಲಿಯೂ ಹೊಸ್ದಿ ತಿಂಗಳ ಮೈಸೂರಲ್ಲಿ ನಡೆದ ಸ್ವಾತಂತ್ರ್ಯ ಸಮರದಲ್ಲಿಯೂ ಸ್ತ್ರೀಯರು ತಮ್ಮ ಶಕ್ತಿಮೀರಿ ಸೇವೆ ಸಲ್ಲಿಸಿದ್ದಾರೆ.

ಶ್ರೀಮತಿ ವಿಜಯಲಕ್ಷ್ಮಿ

ದಕ್ಷಿಣ ಆಫ್ರಿಕಾದಲ್ಲಿ ಹಿಂದೀಯರ ಮೇಲಿದ್ದ ವರ್ಣದ್ವೇಷವನ್ನು ತೊಡೆದುಹಾಕಲು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ನಿಯೋಗ ಮಂಡಳದ ಪರಿಯಿಂದ ತನ್ನ ಮುದ್ದೆಗಳನ್ನು ಜಗತ್ತಿನ ಇತರ ರಾಷ್ಟ್ರ ಪ್ರತಿನಿಧಿಗಳ ಸಮ್ಮುಖದಲ್ಲಿ ಮಂಡಿಸಲು ಅವರು ಹಿಡಿದಂತೆ ಮಾಡಿದ ಕೀರ್ತಿಯು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ಸಲ್ಲುತ್ತದೆ. ಅಂತೆಯೆ ಅವರು ಪ್ರಸ್ತುತ ರಶಿಯಾದಲ್ಲಿ ಭಾರತ ರಾಯಭಾರಿಗಳಾಗಿ ನೇಮಕಹೊಂದಿರುವರು. ಅವರ ರಾಯಭಾರತ್ವವು ಭಾರತಕ್ಕೂ ಸ್ತ್ರೀ ಸಮಾಜಕ್ಕೂ ಒಂದು ಅಭಿಮಾನದ ಸಂಗತಿಯಾಗಿದೆ.

ಶ್ರೀಮತಿ ಸರೋಜಿನಿ ದೇವಿ

ಭಾರತದ ಕೋಗಿಲೆ ಎಂದು ಪ್ರಪಂಚದ ಹಿರಿಯ ಕವಿಗಳಿಂದ ಹೊಗಳ್ಪಡುವ ಶ್ರೀಮತಿ ಸರೋಜಿನಿ ನಾಯುಡುರವರು ಇಂದು ಸಂಯುಕ್ತ ಪ್ರಾಂತದ ಗವರ್ನರ ಪದವಿಯಲ್ಲಿ ವಿರಾಜಮಾನರಾಗಿದ್ದಾರೆ. ವನದಲ್ಲಿ ಸ್ವತಂತ್ರವಾಗಿ ಹಾರಿ ಪ್ರಕೃತಿಯ ಸೊಬಗನ್ನು ಮನದಣಿಯ ನೋಡಿ ತನ್ನ ಕೋಗಿಲೆಯ ಕಂಠದಿಂದ ಜಗತ್ತನ್ನು ಮುಗ್ಧಗೊಳಿಸಿದ ಕೋಗಿಲೆಗೆ ಈ ರಾಜಕಾರಣವು ಬಂಧನಕಾರಿಯೆಂದು ತೋರಿರಲೂಬಹುದು. ಆದರೆ ಅವರಲ್ಲಿ ಆ ಕರ್ತವ್ಯಪಟುತ್ವವಿಲ್ಲದಿದ್ದಲ್ಲಿ ಅವರು ಆ ಕೆಲಸ ಕೈಕೊಳ್ಳುತ್ತಿರಲಿಲ್ಲವೆಂಬುದು ನಿರ್ವಿವಾದ.

ಶ್ರೀಮತಿ ಅರುಣಾ, ಅಮೃತಕೌರ ಕಮಲಾದೇವಿ, ಕ್ಯಾಪ್ಟನ್ ಲಕ್ಷ್ಮಿ

೧೯೪೨ ರ ಚಳವಳದ ಭೂಗತಚಟುವಟಿಕೆಗಳ ಸಂಚಾಲನ ಮಾಡಿದ ಅಸಾಮಾನ್ಯ ಅರುಣಾ ರಾಜಕಾರಣಗಳಲ್ಲಿ ಪಳಗಿದ ರಾಜಕುಮಾರಿ ಅಮೃತಕುವರ, ಕಮಲಾದೇವಿ ಇತ್ಯಾದಿ ಅನೇಕಾನೇಕ ಭಾರತೀಯ ಮಹಿಳೆಯರು ತಮ್ಮಿಂದ ಏನು ಮಾಡಲು ಸಾಧ್ಯವಿದೆಯೆಂಬುದನ್ನು ಸಮಗ್ರ ಜಗತ್ತಿಗೇ ತೋರಿಸುತ್ತಲಿದ್ದಾರೆ.

ಭಾರತದಿಂದ ಅತಿದೂರದಲ್ಲಿ ಇತಿಹಾಸ ಪ್ರಸಿದ್ಧಳಾದ ವೀರ ಝಾನ್ಸಿ ಲಕ್ಷ್ಮೀಬಾಯಿಯ ಹೆಸರಲ್ಲಿ ಭಾರತವನ್ನು ಸ್ವತಂತ್ರಗೊಳಿಸಲು ಸ್ತ್ರೀ ಸೈನ್ಯವನ್ನು ಸ್ಥಾಪಿಸಿದ ಕ್ಯಾಪ್ಟನ್ ಲಕ್ಷ್ಮಿ ಮಹಿಳೆಯರು ಯುದ್ಧ ಕಾರ್ಯದಲ್ಲಿಯೂ ನೆರವು ನೀಡಬಲ್ಲರೆಂದು ತೋರಿಸಿಕೊಟ್ಟಿದ್ದಾರೆ. ಸುಂದರ ಹಾವಳಿಗೀಡಾದ ಕಾಶ್ಮೀರದಲ್ಲಿ ಸ್ತ್ರೀಯರು ಸಂರಕ್ಷಣೆ ಹಾಗೂ ವೈರಿಗಳನ್ನು ಸದೆದಿಕ್ಕಲು ಸೇನಾಯುತ ಶಿಕ್ಷಣಪಡೆಯುತ್ತಿರುವ ವಾರ್ತೆಯು ಪ್ರತಿಯೊರ್ವ ಮಹಿಳೆಯಲ್ಲಿ ಸ್ಫೂರ್ತಿಯನ್ನು ತರುವಂತಹದಾಗಿದೆ.

ಶ್ರೀಮತಿ ಸುಚೇತಾ ಕೃಪಲಾನಿ

ಜಾತೀಯ ದಂಗೆಗಳಲ್ಲಿ ಹಾನಿಗೀಡಾದವರ ಹಾಗೂ ಪಂಜಾಬ ಬಂಗಾಲ ನವಖಾಲಿ ಇತ್ಯಾದಿ ಕಡೆಗಳಲ್ಲಿಯ ನಿರಾಶ್ರಿತರಿಗಾಗಿ ಪರಿಶ್ರಮಪಡುತ್ತಿರುವ ಸುಚೇತಾ ಕೃಪಲಾನಿಯವರು ಮಹಿಳೆಯರಿಗೆ ಸಮಾಜ ಉನ್ನತಿಯ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ.

ಆದರೆ ಬೆರಳೆಣಿಕೆಯಷ್ಟು ಮಹಿಳೆಯರು ಭಾರತದ ಉನ್ನತಿಗೆ ಸಾಕಾಗಲಾರದು. ಸಾಮೂಹಿಕವಾಗಿ ಪ್ರಜೆಗಳಲ್ಲಿ ಚೇತನ ಜಾಗೃತಿ ತುಂಬಬೇಕಾದರೆ ಪ್ರತಿಯೊಂದು ಮನೆಯಲ್ಲಿಯೂ ಈ ಕೆಲಸ ಪ್ರಾರಂಭವಾಗಬೇಕಾಗಿದೆ. ಮನೆಯಿಂದ ತೊಡಗಿ ಸಮಾಜ ಹಳ್ಳಿ ಪಟ್ಟಣಗಳ ಮೂಲಕ ಇಡೀ ದೇಶವು ನವಚೇತನಭರಿತವಾಗಬೇಕಾಗಿದೆ.

ಸಮಾಜದಲ್ಲಿಯ ಹಸಿವು ನಿರಕ್ಷರತೆ, ಬೇನೆ ಬೇಸರಿಕೆ, ಅಸ್ವಚ್ಛತೆ ಆಲಸ್ಯ, ಮಾಲಿನ್ಯ ಇತ್ಯಾದಿ ಬೆಳವಣಿಗೆಗೆ ಕಂಟಕಪ್ರಾಯವಾಗಿರುವವು. ಈ ಕೊರತೆಗಳನ್ನು ತೊಡೆದುಹಾಕದೆ ಸಮಾಜವು ಜಾಗ್ರತಾವಸ್ಥೆಗೆ ಬರಲಾರದು. ಸಮಾಜ ಸುಧಾರಣೆಯ ಕೆಲಸವು ಸಂಘ ಸಂಸ್ಥೆಗಳಿಂದ ಜರುಗುವದಕ್ಕಿಂತಲೂ ಮೇಲಾಗಿ ಪ್ರತಿಯೊರ್ವ ಸ್ತ್ರೀಯು ತನ್ನ ಮನೆಯ ಹಾಗೂ ಆಸುಪಾಸಿನ ವಠಾರದಲ್ಲಿ ಈ ಕೆಲಸ ಕೈಕೊಂಡರೆ ನಿದಾನವಾಗಿಯಾದರೂ ಖಂಡಿತ ಆಗುವದು.

ಜಾತೀಯತೆಯನ್ನು ಸ್ತ್ರೀಯೇ ತೊಡೆಯಲಿ

ಸಮಾಜದಲ್ಲಿಯ ಕುಂದುಕೊರತೆಗಳನ್ನು ನಿವಾರಿಸಿದಂತೆ ರಾಷ್ಟ್ರಘಾತಕವಾದ ನಮ್ಮಲ್ಲಿಯ ಕೆಲವು ದೋಷಗಳನ್ನೂ ನಿವಾರಿಸಬೇಕು. ಮಹಾತ್ಮಾ ಗಾಂಧಿಯವರ ಅಸಾಮಾನ್ಯ ಶಕ್ತಿಯಿಂದ ಭಾರತವಿಂದು ಎಚ್ಚತ್ತು ಅಹಿಂಸೆಯಿಂದ ಸ್ವಾತಂತ್ರ್ಯವನ್ನು ಪಡೆದಿದೆ. ಈ ಸ್ವಾತಂತ್ರ್ಯವನ್ನು ಕಾಪಾಡಿ ವೃದ್ಧಿಗೊಳಿಸಬೇಕಾದರೆ ಮುಂದಿನ ಪೀಳಿಗೆಯಲ್ಲಿ ಕೆಲವೊಂದು ಗುಣಗಳಿರಬೇಕು. ಜಾತೀಯತೆಯಿಂದ ದೇಶದಲ್ಲೆಲ್ಲ ಹಾಹಾಕಾರವೆದ್ದಿದೆ. ಇವಕ್ಕೆ ಬಲಿಯಾದವರು, ಇದರಲ್ಲಿ ಅಪಾರ ನಷ್ಟಕ್ಕೆ ಗುರಿಯಾದವರು ಎಂದರೆ ಸ್ತ್ರೀಯರು ಜನತೆಯ ಮನಸ್ಸಿನಲ್ಲಿಯ ಜಾತೀಯ ಭೇದವನ್ನು ತೊಡೆದುಹಾಕಲು ಸ್ತ್ರೀಯರೇ ಮುಂದೆ ಬರಬೇಕಾಗಿದೆ.

ತೊಟ್ಟಿಲ ತೂಗುವ ಕೈ ರಾಜ್ಯವನ್ನಾಳಬಲ್ಲದು ಎಂಬಂತೆ ಮುಂದಿನ ಜನಾಂಗದ ಭವಿಷ್ಯ ಇಂದಿನ ಮಾತೆಯರ ಕೈಯಲ್ಲಿದೆ. ಸತ್ಯ ಅಹಿಂಸೆ, ದೇಶಪ್ರೇಮ ಪರಮತಸಹಿಷ್ಣುತೆ ನಿಸ್ವಾರ್ಥ ತ್ಯಾಗ ಮುಂತಾದ ಸದ್ಗುಣಗಳನ್ನು ಮಕ್ಕಳಲ್ಲಿ ಬೆಳೆಯಿಸಬಲ್ಲವಳು ಸ್ತ್ರೀಯೇ ಸರಿ.

ಹಕ್ಕುಬಾಧ್ಯತೆಯೇಕೆ ? ಆಕೆ ಮನೆ ಆಳಲಿ

ನಮ್ಮ ಹಲವು ಭಗಿನಿಯರು ರಾಜಕಾರಣದಲ್ಲಿ ಮುಂದಿರುವ ಸ್ತ್ರೀಯರಿಗಾಗಿ ಹಕ್ಕುಬಾಧ್ಯತೆಗಳನ್ನು ಸಾಧಿಸುತ್ತಲಿದ್ದಾರೆ. ಆ ಹಕ್ಕುಗಳಿಗಾಗಿ ನಾವು ಯಾವ ಪ್ರಯೋಜನ ಹೊಂದಬಹುದು ಅವುಗಳನ್ನು ಯಾವ ರೀತಿಯಿಂದ ಉಪಯೋಗಿಸಬೇಕು. ಇತ್ಯಾದಿ ವಿಷಯಗಳನ್ನು ಸಾಮಾನ್ಯ ಭಗಿನಿಯರು ತಿಳಿದಂತೆ ಕಾಣಲಿಲ್ಲ. ಆ ಹಕ್ಕುಬಾಧ್ಯತೆಗಳಿಂದ ನಾವು ನಿಜವಾಗಿಯೂ ಪ್ರಯೋಜನಹೊಂದುವಂತಿಲ್ಲ. ಸಾಮಾನ್ಯ ಸ್ತ್ರೀಯರಲ್ಲಿಯೂ ಜಾಗ್ರತಿಯಾಗುವಂತೆ ಸ್ತ್ರೀಯರಿಗೆ ಸರಕಾರದಿಂದ ಉಚಿತವಾಗಿ ಕಡ್ಡಾಯ ಶಿಕ್ಷಣ ಸಿಗುವಂತಾಗಬೇಕು. ಈಗ ನಡೆಯುತ್ತಿರುವಂತೆ ಸ್ತ್ರೀಯ ಸಂಸ್ಥೆಗಳು ಎಲಿಮೆಂಟರಿ ಶಿಕ್ಷಣವನ್ನು ಕಡ್ಡಾಯನಾಗಿ ಉಚಿತವಾಗಿ ಕಲಿಯುವದು ಸ್ತ್ರೀಯರ ಉನ್ನತಿಗೆ ಸಾಕಾಗದು. ಸ್ತ್ರೀಯರು ಸಮಾಜ ಸೇವೆಗೆ ಅಣಿಗೊಳ್ಳುವಂತೆ ಅವರಿಗೂ ಈ ದಿಸೆಯಲ್ಲಿ ವಿಶೇಷ ಶಿಕ್ಷಣದ ಅವಶ್ಯಕತೆಯೂ ಉಂಟು. ಭವ್ಯ ಮಹಿಳೆಯರಿಗೆ ಮನೆಯ ಆಡಳಿತವನ್ನು ಸೊಗಸಾಗಿ ಹಿರಣವಾಗಿ ಸಾಗಿಸಿಕೊಂಡು ಹೋಗುವ ಕಲೆಯೇ ಗೊತ್ತಿಲ್ಲ. ಇದನ್ನೂ ಶಾಲೆಗಳಲ್ಲಿ ಮುಖ್ಯವಾಗಿ ಕಲಿಸಬೇಕು.

ಸಮಾಜದ ಉನ್ನತಿಯಾಗದೆ ರಾಷ್ಟ್ರದ ಉನ್ನತಿಯಾಗದು. ಸಮಾಜದ ಉನ್ನತಿಯು ಸಾಮೂಹಿಕವಾಗಿ ಆಗಬೇಕಾದರೆ ಸ್ತ್ರೀ ಶಿಕ್ಷಣವೇ ಅದರ ಮೂಲ. ಸುಶಿಕ್ಷಿತ ಸ್ತ್ರೀಯರು ತಮ್ಮ ಮನೆಯಲ್ಲಿ ಅಷ್ಟೇ ಅಲ್ಲ. ತಮ್ಮ ಸುತ್ತಲಿನ ಜನತೆಯನ್ನು ಕೂಡ ಸುಶಿಕ್ಷಿತರನ್ನಾಗಿ ಮಾಡಬಲ್ಲರು. ಇಂತಹ ಕಾರ್ಯ ಮಾಡಬೇಕಾದರೆ ಉಚ್ಚ ಶಿಕ್ಷಣದ ಅವಶ್ಯಕತೆಯಿಲ್ಲ. ಮನೆಯಲ್ಲಿದ್ದು ರಾಷ್ಟ್ರೋದ್ಧಾರ ಮಾಡಬಹುದು.

ಕಾಯದೆಯಿಂದಾಗದ್ದು ಸ್ತ್ರೀಯರಿಂದ ಸಾಧ್ಯ

ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತಾ ನಿವಾರಣೆಗೋಸ್ಕರ ಪ್ರತಿಯೊರ್ವ ವ್ಯಕ್ತಿಗೆ ಒಬ್ಬ ಜೀವನಕ್ಕೆ ಅವಶ್ಯಕವಾದ ನೀರಿನ ಕೊರತೆಯನ್ನು ಹೋಗಲಾಡಿಸಲು ಪ್ರತಿಯೊರ್ವ ಸವರ್ಣ ಹಿಂದುವನ್ನು ಅವರ್ಣರಿಗೆ ನೀರಿನ ಪೂರೈಕೆ ಮಾಡಲು ಬಿನ್ನವಿಸಿದ್ದಾರೆ. ಪಟ್ಟಣಗಳಲ್ಲಿ ಜನತೆಯ ಬೆಂಬಲ ಸಾಕಷ್ಟು ದೊರೆತರೂ ಹಳ್ಳಿಗಳಲ್ಲಿ ಈ ಕೆಲಸ ಸಾಕಷ್ಟು ತೃಪ್ತಿಕವಾಗಿಲ್ಲೆಂದು ಕಂಡ ಜನಪ್ರಿಯ ಸರಕಾರವು ಅಸ್ಪೃಶ್ಯತಾ ನಿವಾರಣ ಕಾಯದೆಯನ್ನು ಜಾರಿಗೆ ತಂದು ಜನರ ಸಮಾಜೋದ್ಧಾರ ಕಾರ್ಯದಲ್ಲಿ ತುಂಬಾ ಸಹಾಯಕರಾಗಿದ್ದಾರೆ. ಕಾನೂನು ಕಾಯದೆಗಳೊಂದರಿಂದಲೇ ಯಾವ ಕೆಲಸಗಳೂ ತೃಪ್ತಿಕರವಾಗಿ ಸಾಗಲಾರವು. ಸ್ತ್ರೀಯರು ಈ ಕಾರ್ಯದಲ್ಲಿ ನೆರವು ನೀಡುವ ಅವಶ್ಯಕತೆಯಿದೆ.

ಸಾವಿನ ಸಂಖ್ಯೆಯೂ ಸ್ತ್ರೀಯರೂ

ಇತರ ಎಲ್ಲಾ ದೇಶಗಳಿಗಿಂತ ಭಾರತದಲ್ಲಿ ಒಂದು ವರ್ಷ ಪ್ರಾಯದ ಕೆಳಗಿನ ಶಿಶುಗಳ ಮರಣದ ಸಂಖ್ಯೆ ಹೆಚ್ಚಾಗಿದೆ. ಹೀಗೆ ಮುತ್ತು ಕ್ಷಯರೋಗದಿಂದಾಗಿ ಸಾಯುವವರ ಸಂಖ್ಯೆಗಳು ದಿನೇ ದಿನೇ ಹೆಚ್ಚಾಗುತ್ತಲಿವೆ. ಇದಕ್ಕೆ ಕಾರಣ ಮಹಿಳೆಯರು. ತಾವು ಗರ್ಭಿಣಿಯರಾಗಿರುವ ಕಾಲದಲ್ಲಿ ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನಿಸದಿರುತ್ತಿಲ್ಲ. ಆ ಕಾರಣದಿಂದಲೇ ಹೆರಿಗೆಯ ಕಾಲದಲ್ಲಿ ಮರಣ ಸಂಭವಿಸುವುದೂ ಹೆಚ್ಚು. ಗರ್ಭಿಣಿಯರಿಗೆ ಉಚಿತ ಸಲಹೆ ನೀಡುವ ಮತ್ತು ಶಿಶು ಸಂರಕ್ಷಣೆಯ ಕೇಂದ್ರಗಳು ಗ್ರಾಮ ಗ್ರಾಮಗಳಲ್ಲಿ ಸ್ಥಾಪಿಸಲ್ಪಡಬೇಕು.

ಸುಶಿಕ್ಷಿತ ಸ್ತ್ರೀಯರು ಅಶಿಕ್ಷಿತ ಸ್ತ್ರೀಯರಲ್ಲಿ ಸಾಕ್ಷರತಾ ಪ್ರಸಾರ ಮಾಡಿ ಅವರಿಗೆ ದೇಶ ವಿದೇಶಗಳ ಮಹಿಳೆಯರ ಜೀವನದ ರೀತಿ ನೀತಿ ನಡತೆ ಮೊದಲಾದವುಗಳ ಪರಿಚಯ ಮಾಡಿಕೊಟ್ಟು ತಮ್ಮ ಮನೆ ಮಕ್ಕಳ ಮಾತ್ರವಲ್ಲ ರಾಷ್ಟ್ರಕ್ಕೋಸ್ಕರ ನಾವು ಏನಾದರೂ ತಮ್ಮಿಂದಾದಷ್ಟು ಅಲ್ಪ ಸೇವೆ ಸಲ್ಲಿಸುವ ಅವಶ್ಯಕತೆ ಇದೆ ಎಂಬುದನ್ನು ಅವರಿಗೆ ನೆನಪಾಗುವಂತೆ ಮಾಡಿಕೊಡಬೇಕು. ಅಲ್ಲದೆ ಅವರು ನಾವು ಸುಶಿಕ್ಷಿತರಾದ ಬಗ್ಗೆ ಸಮಾಜಕ್ಕೆ ಸಲ್ಲಿಸುವ ಅಪಾರವಾದ ಸೇವೆಯೊಂದಿದೆ, ಅದನ್ನು ಅವರು ಎಂದಿಗೂ ಮರೆಯತಕ್ಕ ವಿಷಯವಲ್ಲ. ಈ ಕುರಿತು ಅವರು ಹೆಚ್ಚಿನ ಗಮನ ಕೊಡಬೇಕಾಗಿದೆ, ಎಂದು ನಾನು ಅವರೊಡನೆ ಬಿನ್ನವಿಸಿಕೊಳ್ಳುತ್ತೇನೆ. ಇದು ಸುಶಿಕ್ಷಿತ ಮಹಿಳೆಯರ ತಪ್ಪಿಲ್ಲದಿದ್ದರೂ ಅವರು ಬರಿಗಾಗಿ ಅದನ್ನು ತಿದ್ದಿಕೊಳ್ಳಬೇಕಾಗಿದೆ

ಇಲ್ಲದ ಬಿಂಕ ಬೇಡ

ಎಷ್ಟೋ ಸಲ ಸಮಾಜ ಸೇವೆ ಮದುವೆ ಭಾಷಣಗಳಿಗೆ ಹೋದಾಗ ಅಲ್ಲೊಂದು ಕೌತುಕದ ಸಂಗತಿ ಕಣ್ಣಿಗೆ ಬೀಳುವ ಸಂದರ್ಭಗಳೇ ಹೆಚ್ಚು. ಅಲ್ಲಿ ಎಲ್ಲ ತರದ ಮಹಿಳೆಯರು ಕೂಡುತ್ತಾರಾದರೂ ಅಲ್ಲಿ ಪರಸ್ಪರ ಒಡನಾಡಿಕೆ ತೋರುವದು ಕಡಿಮೆ. ಇವರಲ್ಲಿ ತಪ್ಪು ಯಾರದೆ ಇರಲಿ ಅಶಿಕ್ಷಿತ ಭಗಿನಿಯರು ಸುಶಿಕ್ಷಿತ ಭಗಿನಿಯರನ್ನು ದೂರವಿರಿಸಿದರೂ ಸುಶಿಕ್ಷಿತ ಭಗಿನಿಯರು, ನಾವು ಕಲಿತ ವಿದ್ಯೆಯಿಂದ ನಾವು ಬದಲಾಗಲಿಲ್ಲ. ನಿಮ್ಮಂತೆ ರೀತಿ ನೀತಿ ನಡತೆ ವ್ಯವಹಾರಗಳಲ್ಲಿ ಹೆಂಗಸರಾಗಿಯೇ ಇದ್ದೇವೆ.” ಎಂದು ಅವರಿಗೆ ಖಚಿತ ಮಾಡಿಕೊಡಬೇಕು. ಇತರ ಭಗಿನಿಯರು ಮಾಡಿಕೊಳ್ಳುವ ದಿನ ನಿತ್ಯದ ಮನೆಕೆಲಸಗಳಲ್ಲಿಯ ಪ್ರತಿಯೊಂದು ಕೆಲಸವನ್ನು ನಾವು ಮಾಡಿ ತೋರಿಸಿ ಅವರೊಡನೆ ಕಲೆತು ಹಾಸ್ಯವಿನೋದದಿಂದ ಅವರ ಮನಸ್ಸಿನಲ್ಲಿ ಸುಶಿಕ್ಷಿತ ಭಗಿನಿಯರಲ್ಲಿದ್ದ ತಾತ್ಸಾರ ಅಸೂಯೆಗಳನ್ನು ದೂರಪಡಿಸಬೇಕು ಇದಾದ ಹೊರತು ಮಹಿಳಾ ಸಮಾಜದ ಏಳಿಗೆಯಾಗದು ಇದನ್ನು ತಿಳಿಸಿಕೊಡುವದು ಸುಶಿಕ್ಷಿತ ಕರ್ತವ್ಯವೆಂದು ನಾನು ಮತ್ತೊಮ್ಮೆ ಒತ್ತಿ ಹೇಳುತ್ತೇನೆ.

ಅಂತೂ ಸ್ತ್ರೀಯು ಸಮಾಜದ ಉಪಯುಕ್ತ ಘಟಕವಾಗಲಿ

ಮನೆಕೆಲಸಮಾಡಿ ಉಳಿದ ಸಮಯದಲ್ಲಿ ಆಲಸ್ಯದಿಂದ ಇರದೆ ಕೈಗಾರಿಕೆಗಳನ್ನೋ ಇತರ ಭಾಷೆಗಳ ಅಭ್ಯಾಸವನ್ನೋ ಮಾಡುವ ಕ್ರಮವಿಟ್ಟುಕೊಳ್ಳುವಂತೆ ಕಲಿತ ಮಹಿಳೆಯರು ಇತರ ಮಹಿಳೆಯರಿಗೆ ಸಹಾಯ ನೀಡಬೇಕು. ಮಹಾತ್ಮಾಜಿಯವರು ಉಪದೇಶಿಸಿದಂತೆ ಬಿಡುವಿನ ಸಮಯದಲ್ಲಿ ಚರಕದಲ್ಲಿ ನೂಲನ್ನು ನೂತು ವರ್ಷಕ್ಕೆ ತನಗೆ ಬೇಕಾಗುವ ೧೦ ಗಜ ಒಂದಂತೆ ಬಟ್ಟೆಗೆ ಬೇಕಾದಷ್ಟು ನೂಲನ್ನು ಮನೆಯಲ್ಲೇ ತಯಾರಿಸಬಹುದು. ಹೀಗೆ ಮಹಿಳೆಯರು ತಾವೂ ಸಮಾಜದ ಒಂದು ಉಪಯುಕ್ತ ಅಂಗವೆಂಬುದನ್ನು ದಿನದಿನದ ತಮ್ಮ ಇರವಿನಿಂದ ಅಭ್ಯಾಸದಿಂದ ಲೋಕೋಪಯುಕ್ತ ಕಾರ್ಯಕಲಾಪಗಳಿಂದ ಸಂಘಟನೆಯಿಂದ ಮನಗಾಣಿಸಬೇಕೆಂದು ನಾನು ನನ್ನ ಸಹೋದರಿಯರಲ್ಲಿ ಬೇಡಿಕೊಳ್ಳುತ್ತೇನೆ.

ಗಡಿ ಪ್ರದೇಶದಲ್ಲಿ ನಿಜಾಮು ಸೈನಿಕರ ಅತ್ಯಾಚಾರ

ಹಿಂದೀ ಒಕ್ಕೂಟ ಮತ್ತು ಹೈದರಾಬಾದ ಸಂಸ್ಥಾನಗಳ ಗಡಿಯಲ್ಲಿರುವ ಧಾರವಾಡ ಜಿಲ್ಲೆಯ ಹಾಳಕೇರಿ ಎಂಬ ಹಳ್ಳಿಯ ಮೇಲೆ ನಿಜಾಮು ಸರಕಾರದ ಸುಮಾರು ೫೦-೬೦ ಪೋಲೀಸರು ಏರಿ ಬಂದು ದಾಳಿ ಮಾಡಿದರು. ಹಿಂದೀ ಒಕ್ಕೂಟದ ಪೋಲೀಸರಿಗೂ ನಿಜಾಮು ಸೈನಿಕರಿಗೂ ಕೈಗೆ ಕೈ ಹತ್ತಿ ಹಿಂದೀ ಒಕ್ಕೂಟದ ಮೂವರು ಪೋಲೀಸರು ತೀವ್ರ ಗಾಯಗೊಂಡಿರುವರಲ್ಲದೆ ಒಬ್ಬನು ಕಾಣೆಯಾಗಿದ್ದಾನೆ. ಅನೇಕ ನಾಗರಿಕರ ಮೇಲೆ ಕೂಡ ನಿಜಾಮು ಸೈನಿಕರು ಕೈಮಾಡಿದ್ದು ಭರ್ಮಪ್ಪ ಮಾದರ ಎಂಬವನಿಗೆ ಗುಂಡು ತಗಲಿದೆ. ಗಾಯಾಳುಗಳನ್ನು ರೋಣದ ಆಸ್ಪತ್ರೆಗೆ ಸಾಗಿಸಲಾಗಿದೆ. ನಿಜಾಮು ಸೈನಿಕರು ಮಶಿನ್‌ಗನ್ ಸಹಿತ ಲಾರಿಯಲ್ಲಿ ಬಂದು ಹಳ್ಳಿಯನ್ನು ಹೊಕ್ಕರು, ಊರಲ್ಲೆಲ್ಲ ಹಾಹಾಕಾರವೆದ್ದಿತು. ಈ ಸುದ್ದಿ ತಿಳಿಯುತ್ತಲೇ ಡಿ. ಎಸ್. ಪಿ. ಯವರೂ ಜಿಲ್ಲಾ ಮ್ಯಾಜಿಸ್ಟ್ರೇಟರೂ ವಿಶೇಷ ಪಡೆಯೊಡನೆ ಹಾಳಕೇರಿಗೆ ಧಾವಿಸಿದರು. ರೋಣ ಮತ್ತು ಗಜೇಂದ್ರಗಡಗಳ ಸಬ್ ಇನ್‌ಸ್ಪೆಕ್ಟರರೂ ಅಲ್ಲಿಗೆ ಹೋಗಿದ್ದರು. ಗಡಿಗಿನಿಂದ ಹೋಗುವ ಮೋಟರ ಸರ್ವಿಸಗಳು ತಾ. ೨ರಿಂದ ಬಂದಾಗಿದ್ದವು.

ಗೌಡ ಕುಲಕರ್ಣಿಯವರ ಸ್ಥಳಕ್ಕೆ ಇತ್ತೇಹಾದುಲ್ಲರು

ಗುಂಜಹಳ್ಳಿ (ರಾಯಚೂರ) ಎಂಬ ಊರಿಗೆ ಇಬ್ಬರು ಕುಲಕರ್ಣಿ ಮತ್ತು ಒಬ್ಬ ಗೌಡರಿದ್ದು ಇವರಲ್ಲಿ ಇಬ್ಬರು ರಾಜೀನಾಮೆ ಕೊಟ್ಟಿದ್ದಾರೆ. ಇನ್ನೊಬ್ಬರನ್ನು ಒತ್ತಾಯದಿಂದ ಹಿಡಿಸಲಾಗಿದೆ. ಈ ಮೂವರ ಸ್ಥಳಕ್ಕೂ ಇತ್ತೇಹಾದದವರನ್ನು ನೇಮಿಸಿದ್ದಾರೆ. ಈಗ ಗೌಡ ಕುಲಕರ್ಣಿಗಳಾಗಿ ಬಂದ ಈ ಜಾತ್ಯಂಧರು ಊರಲ್ಲಿ ಪುಂಡರ ಗುಂಪು ಕಟ್ಟಿಕೊಂಡು ಜನರನ್ನು ಗಾಬರಿಗೊಳಿಸುತ್ತಿದ್ದಾರೆ. ಜನರು ಊರು ಬಿಡಹತ್ತಿದ್ದಾರೆ.

ಹಾಳಾಪುರ (ಗುಲ್ಬರ್ಗ) ಎಂಬಲ್ಲಿ ೪೦ ಖಂಡಗ ಕೇಂಗಾಥ ರಾಶಿಗೆ ಇತ್ತೇಹಾದದ ಪುಂಡರು ಬೆಂಕಿ ಹಚ್ಚಿ ಸಂಪೂರ್ಣ ಸುಟ್ಟಿದ್ದಾರೆ. ಇದೇ ಬಗೆಯಾಗಿ ಸುತ್ತಲಿನ ಹಳ್ಳಿಗಳಲ್ಲಿಯೂ ಸುಡುವದಾಗಿ ಹೆದರಿಸುತ್ತಿದ್ದಾರೆ. ಜನರು ಮುಂಗಾಣದೆ ಊರುಗಳನ್ನು ಬಿಟ್ಟು ಒಕ್ಕೂಟದ ಹಳ್ಳಿಗಳನ್ನು ಸೇರುತ್ತಿರುವರು.

ಕೂರ ತಿಪ್ಪಲಿ (ರಾಯಚೂರ) ಎಂಬಲ್ಲಿಯ ಸಾಹುಕಾರರ ಶ್ರೀ. ಚನ್ನಪ್ಪ ಇತ್ತೇಹಾದುಲ ಮುಲ್ಲಿಸಿಗೆ ಚಂದಾ ಕೊಡಲು ನಿರಾಕರಿಸಿದ್ದರು. ಈಗ ಇವರನ್ನು ವಿನಾಕಾರಣ ಬಂಧಿಸಿದ್ದಾರೆ.

ರೇವೂರ (ಗುಲಬರ್ಗ) ಎಂಬಲ್ಲಿಯ ವಿರಕ್ತ ಮಠದ ಸ್ವಾಮಿಗಳನ್ನು ಕಾಂಗ್ರೆಸಿನ ಸಭೆಗೆ ಸಹಾಯ ಮಾಡುವರೆಂಬ ಆರೋಪದ ಮೇಲೆ ಪೋಲೀಸರು ಬಂಧಿಸಲು ಪ್ರಯತ್ನ ಮಾಡಿದರು. ಅವರು ಸಿಗದಿದ್ದುದಕ್ಕೆ ಅವರ ೨ ಸಾವಿರ ಬೆಲೆ ಬಾಳುವ ಮಾಲನ್ನು ಧ್ವಂಸಗೊಳಿಸಿರುವರು.

ನಿಂಬಾಳ (ಗುಲಬುರ್ಗ) ಎಂಬಲ್ಲಿ ನಿಂಬಣ್ಣಾ ಎಂಬವನು ಕಾಂಗ್ರೆಸ್ಸನ್ನು ಸೇರಿರುವನೆಂದು ಆತನ ತಂದೆ ಮತ್ತು ಅಣ್ಣನನ್ನು ಪೋಲೀಸರು ಚನ್ನಾಗಿ ಥಳಿಸಿದ್ದಾರೆ. ತಂದೆಯ ಟೊಂಕವೇ ಮುರಿದಿದೆ. ಇದೇ ಕಾರಣಕ್ಕಾಗಿ ಪುರಾಣಪ್ಪ ಎಂಬ ಹುಡುಗನನ್ನು ಹೊಡಿದಿದ್ದಾರೆ.

ನಿಜಾಮು ಸರಹದ್ದಿನಲ್ಲಿ ಸೈನಿಕರನ್ನು ಕಾವಲ್ಕಾಗಿಟ್ಟಿದ್ದು ಅವರು ಹೋಗಬರುವ ಜನರಿಂದ ತಲೆಗೆ ೨ರೂ ಜಿಜಿಯಾ ಪಟ್ಟಿಯನ್ನು ಸುಲಿಯುತ್ತಿರುವರು. ಶ್ರೀ. ಬಸವನಗೌಡ ಕಲಾರಿ ಎಂಬವರನ್ನು ವರನೇರಿಯ ಪೋಲೀಸರು ಬಂಧಿಸಿ ೨೦೦ರೂ ಲಂಚ ತೆಗೆದುಕೊಂಡು ಬಿಟ್ಟಿದ್ದಾರೆ. ಗುಂಜಳ್ಳಿಯ ಕುಲಕರ್ಣಿ ಭೀಮರಾವ ಹಾಗು ಗೌಡ ಈರಾರೆಡ್ಡಿ ಇವರು ರಾಜೀನಾಮೆ ಕೊಟ್ಟಿದ್ದಕ್ಕೆ ಅವರ ಮನೆಯವರಿಗೆ ಪೋಲೀಸರು ಬೆದರಿಕೆ ಹಾಕುತ್ತಿರುವರು.

ವರಂಗಲ ಕಾಲೇಜದ ವಿದ್ಯಾರ್ಥಿಯಾದ ಯಾದವರೆಡ್ಡಿಯವರನ್ನು ಪೋಲೀಸರು ಅಮಾನುಷ ಅತ್ಯಾಚಾರದಿಂದ ಕೊಂದಿರುವರು. ಇದರ ನಿಷೇಧಾರ್ಥವಾಗಿ ಹೈದರಾಬಾದ ವಿದ್ಯಾರ್ಥಿ ಸಂಘದವರು ಯಾದವರೆಡ್ಡಿ ದಿನಾಚರಣೆಯನ್ನು ಮಾಡಿದರು. ಸಿಕಂದರಾಬಾದ ಮಹಬೂಬ ಕಾಲೇಜದಿಂದ ೩ ಸಾವಿರ ವಿದ್ಯಾರ್ಥಿಗಳ ಪ್ರಚಂಡ ಮೆರವಣಿಗೆಯನ್ನು ಕೋರ್ಟಿನ ಕಡೆಗೆ ತೆಗೆಯಲಾಗಿತ್ತು. ಮೆರವಣಿಗೆಯ ಮೇಲೆ ಲಾಠಿಪ್ರಹಾರ ಮಾಡಲಾಯಿತು. ಈ ಸಂದರ್ಭದಲ್ಲಿ ಶಿವರಾಮ ಜಗನ್ಮೋಹನದಾಸ ಮತ್ತು ಇನ್ನುಳಿದ ೩೦ ವಿದ್ಯಾರ್ಥಿಗಳನ್ನು ಬಂಧಿಸಿದ್ದಾರೆ.

ಚಳ್ಳಿಕೊಡ್ಲೂರ ಎಂಬಲ್ಲಿ ಸುಮಾರು ೬೦ ಸೈನಿಕರು ಒಮ್ಮಿಂದೊಮ್ಮೆ ನುಗ್ಗಿ ಗುಂಡು ಹಾರಿಸಿ ೯ ಜನರನ್ನು ಗಾಯಗೊಳಿಸಿದ್ದಾರೆ. ಅವರ ಸ್ಥಿತಿಯು ಚಿಂತಾಜನಕವಿದ್ದು ಬದುಕುವ ಭರವಸೆ ಇಲ್ಲವೆಂದು ತಿಳಿದು ಬಂದಿದೆ.

[illegible]

ಅವನನ್ನು ಹಿಡಿದು ೫೦೦ ರೂ. ಲಂಚ ತೆಗೆದುಕೊಂಡಿದ್ದಾರೆ. ವೆಂಕಪ್ಪ ಎಲಕಟ್ಟಿ ಎಂಬವನನ್ನು ಹಿಡಿದು ೫೦ ರೂ. ಉಚ್ಚ ದಾಸ್ತಿ ... ಓಲೆಕಾರ ... ಭೈರಪ್ಪ ಎಂಬವನನ್ನು ಹಿಡಿದು ತರಲು ಕಳಿಸಲು ಅವನು ಹುಡುಕಿ ಭೈರಪ್ಪ ಸಿಕ್ಕದ್ದಕ್ಕೆ ಸಿಟ್ಟಾಗಿ ಮರಳಿ ಬರಲು ಸಿದ್ದಪ್ಪನನ್ನು ಹೊಡೆದು ಹಣ್ಣು ಮಾಡಿದರು. ದೇಸಾಯಿಯ ಬಳಿಯ ಸಿದ್ದಪ್ಪ ನೌಕರಿಗೆ ಹೋಗದ್ದಕ್ಕೆ ಅವನ ಕಾವೆಯ ಹೆಣ್ಣುಮಕ್ಕಳ ಮಾನಭಂಗ ಮಾಡುವ ಬೆದರಿಕೆ ಹಾಕಲಾಯ್ತು. ಮುದ್ದಿಯಪ್ಪ ಪರಿಜನ ಇವನು ದೀಪಾವಳಿಯ ಕಾಲಕ್ಕೆ ಮಹಾತ್ಮಾಜಿಯವರ ಫೋಟೋಕ್ಕೆ ಕಾಯಿ ಒಡೆದದ್ದರಿಂದ ಈಗ ಅವನನ್ನು ಹೊಡೆದು ೧೦ ರೂ. ಲಂಚ ತೆಗೆದು ಕೊಂಡು ಅವನ ಸೇಡು ತೀರಿಸಿಕೊಳ್ಳಲಾಗಿದೆ.

ಗುಂಜಳ್ಳಿ (ರಾಯಚೂರ) ಎಂಬಲ್ಲಿ ಇತ್ತೇಹಾದದ ಜನರು ಮಾನವಂತರ ಮನೆ ಹೊಕ್ಕು ಅಮಾನುಷ ಅತ್ಯಾಚಾರಗಳನ್ನು ಮಾಡುತ್ತಿದ್ದಾರೆ. ಹಾದಿಕಾರರನ್ನು ಹೊಡೆಯುವದು ಊಟ ಮಾಡುವದು ನಿತ್ಯಕ್ರಮವಾಗಿದೆ.

ಬ್ಯಾಗವಟ (ಮಾನವಿ) ಎಂಬಲ್ಲಿ ಲೇವಿ ವಸೂಲಿಗೆ ಬಂದ ಗಿರ್ದಾವರನು ಲಂಚ ಕೇಳಲು ಜನರು ೨೫ ರೂ. ತಂದು ಕೊಟ್ಟರು. ಇಷ್ಟು ಸಾಲದೆಂದು ಸಿಟ್ಟಿಗೆದ್ದು ಲಂಚಗುಳಿ ಗಿರ್ದಾವರನು ಆ ನೋಟುಗಳನ್ನು ಹರಿದು ಚೂರು ಚೂರು ಮಾಡಿದನು. ಮೇಲಧಿಕಾರಿಗಳಿಗೆ ದೂರಿಕೊಂಡರೂ ಅವನು ಲಕ್ಷಿಸದೆ ಮನೆ ಹೊಕ್ಕು ಮನಬಂದಂತೆ ಊಟ ಮಾಡುತ್ತಿರುವನು.

ಇತ್ತೇಹಾದರಿಗೆ ಸೈನ್ಯ ಶಿಕ್ಷಣ

ಯಲಬುರ್ಗಿಯಲ್ಲಿ (ಕೊಪ್ಪಳ) ಪಂಜಾಬದಿಂದ ಇಬ್ಬರು ಬಂದಿದ್ದು ಅಲ್ಲಿಯ ಮುಸಲ್ಮಾನರಿಗೆ ಸೈನಿಕ ಶಿಕ್ಷಣ ಕೊಡುತ್ತಿದ್ದಾರೆ. ಅಲ್ಲಿ ಸುಮಾರು ೧೫ ಸಾವಿರ ರೂ. ಗಳನ್ನು ಕೂಡಿಸಿ ರೈಫಲ್ಲುಗಳನ್ನು ತರಲಾಗಿದೆ.

ಪಾಲವೂಂಚಾ (ನಲಗೊಂಡಾ) ಎಂಬಲ್ಲಿಯ ಜನರು ಇತ್ತೇಹಾದರ ದಬ್ಬಾಳಿಕೆಯನ್ನೂ ಅತ್ಯಾಚಾರಗಳನ್ನೂ ಪ್ರಚಂಡ ಧೈರ್ಯದಿಂದ ತಡೆಗಟ್ಟುತ್ತಿದ್ದಾರೆ. ಹೋದ ತಿಂಗಳ ೧೨ ನೇ ತಾ. ಸೈನಿಕರೊಡನೆ ಒಂದು ಗಂಟೆಯ ವರೆಗೆ ಕಾದಾಡಿ ೬ ಸೈನಿಕರನ್ನು ಹಿಡಿದು ೪ ಲಾರಿಗಳನ್ನು ನಾಶಮಾಡಿ ೯ ರಾಯಫಲ್ಲುಗಳನ್ನು ವಶಪಡಿಸಿಕೊಂಡರು.

ನಾಲ್ಕು ಹಳ್ಳಿಗಳು ಸ್ವಾತಂತ್ರ್ಯ ಸಾರಿದವು !

ಮೊದಲೇ ಸ್ವಾತಂತ್ರ್ಯ ಸಾರಿದ ಹಳ್ಳಿಗಳನ್ನು ಬಿಟ್ಟು ಸಾಲಿ, ಗೌರಾಪರಮ್, ಉತುಕೂರು, ಪರಿಲಾಲಗುಡ ಎಂಬ ನಾಲ್ಕು ಹಳ್ಳಿಗಳು ಸ್ವಾತಂತ್ರ್ಯ ಸಾರಿವೆ. ಪಂಚಾಯತ ರಾಜ್ಯಪದ್ಧತಿಯ ಸ್ಥಾಪನೆಯಾಗಿದೆ. ಶಾಂತತೆಯನ್ನು ಕಾಪಾಡಿಕೊಳ್ಳಲು ಸ್ವಯಂಸೇವಕ ದಲವನ್ನು ಕಟ್ಟಲಾಗಿದೆ.

ನಿಜಾಮ ಪೋಲೀಸರ ಮೇಲೆ ಕಮ್ಯುನಿಸ್ಟರ ದಾಳಿ !

ನಲಗೊಂಡಾ ಜಿಲ್ಲೆಯ ಕೊಟ್ಟಾಪಹಾಡ ಎಂಬ ಹಳ್ಳಿಯ ನಿಜಾಮು ಪೋಲೀಸರ ಮೇಲೆ ಕಮ್ಯುನಿಸ್ಟರು ದಾಳಿಮಾಡಿದ್ದರಿಂದ ೫ ಪೋಲೀಸ ಅಧಿಕಾರಿಗಳು ಗುಂಡಿನೇಟಿನಿಂದ ಮರಣ ಹೊಂದಿದರಲ್ಲದೆ ಇಬ್ಬರಿಗೆ ತೀಕ್ಷ್ಣ ಗಾಯಗಳಾದವು.

ಕೊಟ್ಟಾಪಹಾಡ ಹಳ್ಳಿಗೆ ಗಸ್ತಿ ತಿರುಗುತ್ತ ಪೋಲೀಸ ಅಧಿಕಾರಿಗಳಿಂದ ಕೂಡಿದ ಒಂದು ಪೋಲೀಸ ಪಡೆಯು ಹೊರಟಾಗ ಸುಮಾರು ೩೦೦ ಕಮ್ಯುನಿಸ್ಟರು ಅವರ ಮೇಲೆ ದಾಳಿಮಾಡಿದರು. ಪೋಲೀಸರು ಓಡಿಹೋಗಿ ಕೊಟ್ಟಾಪಹಾಡ ಹಳ್ಳಿಯ ಒಂದು ಆಟದ ಮನೆಯಲ್ಲಿ [illegible]ಕೊಂಡರು. ಕಮ್ಯುನಿಸ್ಟ ಜನರು ಬೆನ್ನು [illegible] ಮೇಲೆ ಗುಂಡು ಹಾರಿಸಿದರು. [illegible]ತಿಯಾಗಿ ಗುಂಡು ಹಾರಿಸಿದರು. [illegible] ಸುಮಾರು ೬ ತಾಸುಗಳ ವರೆಗೆ ನಡೆದು ಪೋಲೀಸರ ಹತ್ತರಿಂದ ಮದ್ದು ಗುಂಡು [illegible] ತೀರಿಹೋದವು. ದಾಳಿಗಾರರು ಆ ಮನೆಗೆ [illegible] ಹಚ್ಚಿ ಪೋಲೀಸರ ಕೆಲವು ಬಂದೂಕುಗಳನ್ನು ವಶಪಡಿಸಿಕೊಂಡು ಹೋದರು. ಹೆಚ್ಚಿನ [illegible] ಪಡೆಯು ಆ ಸ್ಥಳಕ್ಕೆ ಹೋಗಿ ಸತ್ತ ಪೋಲೀಸ ಅಧಿಕಾರಿಗಳ ಹೆಣಗಳನ್ನು ತರಬೇಕಾಯಿತು.

ಕಾಂಗ್ರೆಸ ಆರ್ಥಿಕ ಕಾರ್ಯಕ್ರಮ ಸಮಿತಿಯ ಸೂಚನೆ

[illegible]

... ಪ್ರಗತಿಗೆ ಅನುಕೂಲವಾಗುವ ಯೋಜನೆಯೊಂದನ್ನು ಸಿದ್ಧಗೊಳಿಸಲು ಆರ್ಥಿಕ ಕಾರ್ಯಕ್ರಮ ಸಮಿತಿಯನ್ನು ಅಖಿಲ ಭಾರತ ಕಾಂಗ್ರೆಸ ಕಮಿಟಿಯವರು ನೇಮಿಸಿದ್ದರು. ಆದರಂತೆ ಆ ಸಮಿತಿಯವರು ಪರ್ಯಾಲೋಚಿಸಿ ತಮ್ಮ ಯೋಜನೆಯ ವರದಿಯನ್ನು ಒಪ್ಪಿಸಿರುವರು. ಇವರು ಹಾಕಿಕೊಟ್ಟ ದಾರಿಯಲ್ಲಿಯೇ ಇನ್ನು ಮುಂದೆ ರಚಿತವಾಗಲಿರುವ ಕೇಂದ್ರ ಯೋಜನಾ ಸಮಿತಿಯವರು ಹೆಜ್ಜೆ ಹಾಕಬೇಕಾಗಿದೆ. ಈ ಆರ್ಥಿಕ ಯೋಜನೆಯು ರೂಪಿಸಿರುವುದು ಅನುಸರಿಸಿದ ತನ್ನದೇ ಆದ ಒಂದು ವೈಶಿಷ್ಟ್ಯದಿಂದ ಕೂಡಿದೆ.

ಹೊಲಸಾಗುವಳಿ

ಕಾಂಗ್ರೆಸ ಆರ್ಥಿಕ ಯೋಜನೆಯ ಪ್ರಕಾರ ಪ್ರತಿಯೊಬ್ಬ ರೈತನೂ ಸ್ವಂತ ಸಾಗುವಳಿ ಮಾಡಬಹುದಾದ ಹೊಲವನ್ನಷ್ಟು ಮಾತ್ರ ಇಟ್ಟುಕೊಂಡು ಉಳಿದ ಹೊಲವನ್ನು ಸಹಕಾರಿ ಪದ್ಧತಿಯಿಂದ ಸಾಗಿಸಲು [illegible]. ಹೀಗೆ ತೆಗೆದಿಟ್ಟ ಹೊಲಗಳನ್ನು ಸರಕಾರವೇ ಯಂತ್ರಗಳನ್ನಿಟ್ಟು ಹೊಲ ಸಾಗುಮಾಡುವದು.

ಔದ್ಯೋಗಿಕ ಪ್ರಗತಿ

ಅತಿ ಮುಖ್ಯವಾದ ಕೆಲವು ಉದ್ಯೋಗಗಳನ್ನು ಸರಕಾರವೇ ಕೈಯಲ್ಲಿ ತೆಗೆದುಕೊಂಡು ನಡೆಸುವದು. ಉಳಿದ ಉದ್ಯೋಗ ಖಾಸಗಿ ಬಂಡವಲದಾರರಿಗೆ ಬಿಟ್ಟು ಕೊಡಲಾಗುವದು. ಆದರೆ ಈ ಬಂಡವಾಲಗಾರರ ಲಾಭದ ಹಂಚುವಿಕೆಯ ಮೇಲೆ ಮಾತ್ರ ಸರಕಾರವು ತನ್ನ ನಿಯಂತ್ರಣವಿಡುತ್ತದೆ.

ರೈತನ ಬೆಳೆಯ ಬೆಲೆ

ರೈತನ ಧಾನ್ಯಕ್ಕೆ ಬೆಲೆ ಗೊತ್ತು ಮಾಡುವದು, ರೈತರಿಗೂ ಸರಕಾರಕ್ಕೂ ನಡುವೆ ಇರುವ ದಲ್ಲಾಲಿಗಳನ್ನು ತೆಗೆದುಹಾಕಿ ಮಾರಾಟಕ್ಕೆ ಮತ್ತು ಕೊಳ್ಳುವದಕ್ಕೆ ಸಹಕಾರಿ ಸಂಘ ಸ್ಥಾಪಿಸುವದು, ರೈತನ ಸಾಲದ ಭಾರ ನಿವಾರಿಸುವದು ಇವೇ ಮೊದಲಾದ ಯೋಜನೆಗಳು ತುಂಬ ಪ್ರಯೋಜಕವಾಗಿವೆ.

ಭೂಕಂದಾಯ ಪದ್ಧತಿ

ಈಗಿರುವ ಭೂಕಂದಾಯ ಪದ್ಧತಿಯನ್ನು ತೆಗೆದುಹಾಕಿ ಅದಕ್ಕೆ ಬದಲಾಗಿ ಏರಿಕೆಗೆ ತಕ್ಕಂತೆ ಭೂಮಿಯ ಉತ್ಪನ್ನಕ್ಕನುಸರಿಸಿ ತೆರಿಗೆ ಹಾಕಬೇಕೆಂದು ಈ ಸಮಿತಿ ಸೂಚಿಸುತ್ತದೆ.

ಕೈಗಾರಿಕಾ ಯೋಜನೆ

ಆರ್ಥಿಕ ಕಾರ್ಯಕ್ರಮ ಸಮಿತಿಯವರು ಕೈಗಾರಿಕೆಯನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ.

(೧) ಸಂರಕ್ಷಕ ಕೈಗಾರಿಕೆ, ಕಬ್ಬಿಣ, ಉಕ್ಕು ಮೊದಲಾದ ದೊಡ್ಡ ಕೈಗಾರಿಕೆ ಮತ್ತು ಜನೋಪಯೋಗಿ ವಾಹನಗಳು.

(೨) ಸಣ್ಣ ಕೈಗಾರಿಕೆಗಳು.

(೩) ಗ್ರಾಮೋದ್ಯೋಗಗಳು.

ಇವುಗಳಲ್ಲಿ ಮೊದಲನೆಯದನ್ನು ಸರಕಾರವೇ ನಡೆಸುವದು. ೨ ನೇ ಮತ್ತು ೩ ನೇ ಪ್ರಕಾರದ ಕೈಗಾರಿಕೆಗಳನ್ನು ಖಾಸಗಿ ಬಂಡವಾಲದಾರರಿಗೆ ಬಿಡಲಾಗಿದೆ. ಇಲ್ಲಿಯೂ ಸ್ಥಳ, ಬಂಡವಾಳ ಇತ್ಯಾದಿಗಳ ಮೇಲೆ ಹತೋಟಿ ಇಡಲಾಗಿದೆ. ಅಲ್ಲದೆ ಲಾಭರಹಿತ ತಳಹದಿಯ ಮೇಲೆ ಗ್ರಾಮೋದ್ಯೋಗಗಳನ್ನು ಸ್ಥಾಪಿಸುವ ಯೋಜನೆಯೂ ಉಂಟು.

ಮಹಾತ್ಮಾ ಗಾಂಧಿಯವರನ್ನು ಕೊಂದ ಗೋಡಸೆ [illegible]

[illegible]

ಭೀಮಜ್ಜನವರ ಬಿಡುಗಡೆ

ನಿಜಾಮ ಸರ್ಕಾರದ [illegible] ಶ್ರೀ. [illegible] ರಾಬಾದ ಕರ್ನಾಟಕ [illegible] ರಿಂದ ತಂತಿ ಬಂದಿದೆ.


(ಕೊಡಲುಬಂದ ಸುದ್ದಿ)

ಹೈದರಾಬಾದ ಸಂಸ್ಥಾನ ಕಾಂಗ್ರೆಸ [illegible] ಕರ್ತರಾದ ಶ್ರೀ ಭೀಮಜ್ಜನವರು [illegible] ಆಮರಣ ಉಪವಾಸ ಕೈಕೊಂಡು [illegible] ದಿನಗಳಾಗಿದ್ದು ಅವರ ಪ್ರಕೃತಿಯು [illegible] ಚಿಂತಾಜನಕವಾಗಿದೆ. ಶ್ರೀಯುತರನ್ನು [illegible] ಬಿಡುಗಡೆ ಮಾಡಬೇಕೆಂದು [illegible] ಕರ್ನಾಟಕ ಕಾಂಗ್ರೆಸ ಸಮಿತಿಯವರು [illegible] ರಾಬಾದ ಸರಕಾರಕ್ಕೆ ತಂತಿ [illegible] ಮಿಸಿರುವರು.

[illegible] ಆರ್ಥಿಕ ಕಾರ್ಯಕ್ರಮ [illegible] ವರ ಯೋಜನೆಯು [illegible] ಗಳ್ಲಿನಂತೆ ಇದೆ. ಈ ಯೋಜನೆಯು [illegible] ಮುಂದಿಡುತ್ತ [illegible] ರನ್ನು ಬಡವರಾಗಿ ಮಾಡುವದಕ್ಕಿಂತ [illegible] ಶ್ರೀಮಂತರಾಗುವ ಹಾಗೆ [illegible] ಈ ಆರ್ಥಿಕ ಯೋಜನೆಯ ಉದ್ದೇಶ [illegible] ಮೊದಲಾಗಿ ಹೇಳಿದರು.

ಸ್ವಯಂಪೂರ್ಣ ಪ್ರಾಂತ


ಪ್ರತಿಪ್ರಾಂತವೂ ಆಹಾರ [illegible] ವಸ್ತುಗಳ ಸಾಮಾನುಗಳ [illegible] ವಿಷಯದಲ್ಲಿ ಸ್ವಯಂಪೂರ್ಣ [illegible] ಆರ್ಥಿಕ ಕಾರ್ಯ ಸಮಿತಿಯವರ [illegible] ಅಲ್ಲದೆ ೫೦ ಲಕ್ಷ ಜನಸಂಖ್ಯೆ ಉಳ್ಳ [illegible] ಯೂ ಹೀಗೆ ಸ್ವಯಂಪೂರ್ಣ [illegible] ಅವರು ಬಯಸಿದ್ದಾರೆ.



ಕಾಮನ್‌ವೆಲ್ಥ ರಾಷ್ಟ್ರಗಳ ಉಪಮಂತ್ರಿಗಳಾದ ಶ್ರೀ. ಪೆಟ್ರಿಕ್ ಗಾರ್ಡನ್-ವಾಕರ ಇವರು ದಿಲ್ಲಿಗೆ ಬಂದಿಳಿದಿರುತ್ತರು ಇವರು ಭಾರತ ಪಾಕಿಸ್ತಾನ ಮತ್ತು ಸಿಂಹಳದ ಸಂದರ್ಶನಕ್ಕಾಗಿ ಬಂದಿರುವರು.



ಆಯ: ಸಿ. ಸಿ. ಯಜ್ಞಿ ಮುಹಾತ್ಮರ ಬಗ್ಗೆ ದುಃಖಸೂಚಕ ಗೊತ್ತುವಳಿ ಮಂಡಿಸಲ್ಪಟ್ಟಾಗ



ವಿಶೇಷ ಆಮಂತ್ರಣದ ಮೇರೆಗೆ ಅ. ಭಾ. ಕಾಂ ಸಮಿತಿಗೆ ಆಗಮಿಸಿದ ಶೇಖ ಅಬ್ದುಲ್ಲಾರವರು.

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. ೪

ಟೆಕ್ಸಟಾಯಿಲ್ಸ

ಅಹಮದಾಬಾದ ಅಡ್ವಾನ್ಸ	೫೬೬-೪-೦
ಮುಂಬಯಿ ಡಾಯಿಂಗ	೧೦೫೨-೮-೦
ಸೆಂಟ್ರಲ ಇಂಡಿಯಾ	೩೩೬—೦—೦
ಸೆ:ಚುರಿ	೪೯೫—೦—೦
ಕುಲಾಬಾ ಲ್ಯಾಂಡ	೩೨೦-೦-೦
ಗೋಕಾಕ	೩೨೭—೦—೦
ಇಂಡಿಯನ್ ಬ್ಲೀಚಿಂಗ	೧೫೬-೦-೦
ಕೋಹಿನೂರು	೫೮೨-೦-೦
ಕೊಲ್ಹಾಪುರ	೬೨೪೫-೦-೦
ಸಿಂಪ್ಲೆಕ್ಸ	೨೨೪—೮—೦
ಸ್ವದೇಶಿ	೬೩೮-೦-೦
ವಿಷ್ಣು	೬೧೨—೮—೦
ಟಾಟಾ ಪವರ	೧೫೫೭—೮—೦
ಟಾಟಾ ಹೈಡ್ರೊ	೧೫೬—೦—೦
ಟಾಟಾ ಸ್ಟೀಲ ಡೆಫರ್ಡ್ಸ	೧೬೪೦-೦-೦
ಟಾಟಾ ಸ್ಟೀಲ ಆರ್ಡಿನರಿ	೩೪೯-೦-೦
ಪ್ರಿಮಿಯರ ಕನ್‌ಸ್ಟ್ರಕ್ಶನ	೧೯೯—೦—೦
ಇಂಡಿಯನ ಆಯರ್ನ	೩೨—೩—೦
ಬರ್ಮಾ ಕಾರ್ಪೊರೇಶನ	೩-೬-೦
ಇಂಡಿಯನ್ ಕಾಪರ	೨-೧೩-೦

ಸಿಮೆಂಟ

ಅಸೋಸಿಯೇಟೆಡ ಸಿಮೆಂಟ್ಸ	೧೭೩-೦-೦

ಇನ್ಶುರನ್ಸ

ನ್ಯೂ ಇಂಡಿಯಾ ಇನ್‌ಶುರನ್ಸ	೭೪-೧೨-೦

ಪ್ರಿಫರನ್ಸ

ಟಾಟಾ ಸ್ಟೀಲ ೧ ನೇ ಪ್ರಿಫರನ್ಸ	೧೯೮-೧೨-೦
,, ೨ ನೇ ,,	೧೪೮-೦-೦

ಬ್ಯಾಂಕುಗಳು

ಸೆಂಟ್ರಲ	೮೯—೦—೦
ಇಂಪಿರಿಯಲ (ಅಂಶತಃ)	೫೦೦—೦—೦
ಇಂಪೀರಿಯಲ (ಪೂರ್ಣ)	೨೦೩೫-೦-೦
ಇಂಡಿಯಾ	೨೫೧—೦—೦
ರಿಜರ್ವ	೧೧೨-೦-೦

ಬಂಗಾರ

ತಯಾರಿ	೧೦೯—೨—೦
ತಯಾರಿ	೧೦೮-೧೦-೦

ಬೆಳ್ಳಿ

ತಯಾರಿ	೧೫೯—೦—೦
ಚೇಂಬರ	೧೬೦—೦—೦
ಸಾವರಿನ	೭೦—೪—೦

ಅರಳೆ

ಮಾರ್ಚ		೫೮೫—೦—೦
ಮೇ		೫೭೫—೮—೦
ಜುಲೈ		೫೮೨—೦—೦
ಸಪ್ಟಂಬರ		೫೮೬—೦—೦
ಹೆಚ್ಚು	೫೯೮-೦-೦	— ೫೯೯-೦-೦
ಕಡಿಮೆ	೫೮೦-೦-೦	— ೫೮೧-೦-೦

ಎಣ್ಣೆ ಕಾಳುಗಳು

ತಾ. ೪

ಶೇಂಗಾ	೧೫೬—೦—೦
ಹೊಸ ಬೆಳೆ	೧೫೯-೮-೦
ಅಗಸೆ	೨೫—೮—೦
ಅಗಸೆ ಎಣ್ಣೆ	೧೭—೧೪—೦

ಕೊಲ್ಹಾಪುರ ಪೇಟೆ

ತಾ. ೩

ಒಕ್ಕಲತನದ ಫಸಲನ್ನು ಮಾರುವ ಸಮಿತಿಯಿಂದ—

	ಬಂದದ್ದು	ಮಾರಾದದ್ದು
ಬೆಲ್ಲದ ಗಾಡಿಗಳು	೧೦೦೦	೧೪೩೨
ಶೇಂಗಾ ಗಾಡಿಗಳು	೪	೬

ದರ

	ಗುಜರಾತ ಮಾಲು	ಕರ್ನಾಟಕ ಮಾಲು
ಬೆಲ್ಲ	೫೩—೮—೦	೨೬—೦—೦
	ಯಿಂದ	ಯಿಂದ
	೩೦—೧—೦	೩೬—೪—೦

ಶೇಂಗಾ ಧಾರಣೆಯಾಗಿಲ್ಲ.

ಮದ್ರಾಸು ಪೇಟೆ

ಮಾರ್ಚ ೪

ಸ್ಟಾಕ್ ಪೇಟೆ

ಸಕ್ಕರೆ ಮತ್ತು ಮಾದಕ ಪೇಯಗಳು: ಡೆಕ್ಕನ್ ೨೨/೪, ಮೈಸೂರು ೫೫/೮, ತಿರುವಾಂಕೂರು ೧೪/೧೨, ತಿರುವಾಂಕೂರಿನ ಹೊಸದು ೧೦.

ಬಟ್ಟೆ: ಬಾಲಸುಬ್ರಹ್ಮಣ್ಯ ೩೯/೮, ಬಾಲಸುಬ್ರಹ್ಮಣ್ಯ ಬಿ. ೬೯/೮, ಬಕಿಂಗ್‌ಹ್ಯಾಂ ೩೪೨ ಕ್ಯಾಂಬೋಡಿಯಾ ೧೨, ಕೊಯಮುತ್ತೂರು ಪಯನಿಯರ್ ೧೯, ಕೊಯಮುತ್ತೂರು SPC. ೪೮, ಜನಾರ್ದನ ೫೩, ಲಕ್ಷ್ಮೀ ೯೫/೮, ಮಧುರೆ ೪೫/೮-, ಮಟ್ಟೂರು ೨೯೩, ಮೈಸೂರು ೧೨/೮, ರಂಗವಿಲಾಸ ೫೪/೮-, ಸೀತಾರಾಂ SPG. ೧೨೪, ತಿರುಚಿನಾಪಳ್ಳಿ ೧೩/೧೦, ವಸಂತ ೧೦೫/೮.

ಮಿಶ್ರ: ಆಂಧ್ರ ಸಿಮೆಂಟು ೭/೮, ಆಂಧ್ರ ಸಿಮೆಂಟು ಬಿ. ೭/೮, ಇಂಡಿಯಾ ಸಿಮೆಂಟ್ ೧೩/೧೪ ಇಂಡಿಯ ಸೆಂಟ್ ರೋಲಿಂಗ್ಸ ೧೦, ಮೆಟ್ಟೂರು ೧೫/೧೨, ಸ್ಪೆನ್ಸರ್ಸ್ ೧೧/೬/-

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	೪೨೦-೪೪೦
ಹಳೇ ಜಯವಂತ ಹತ್ತಿ	೩೭೦-೪೦೦
ಜಿನ ಹಳೆದು	೨೪೫-೨೫೫
ಜಿನ ಹೊಸದು	೨೫೫-೨೮೦
ಡಬಲರೋಲ	೨೫೫-೨೬೫
ಅಪಲಂಡ ಹತ್ತಿ	೪೨೦-೪೪೦
ಹತ್ತಿ ಕಾಳು	೮೧೦-೦-೦

ಕರ್ನಾಟಕ

ಧಾರವಾಡ

ಬೆಳಗಾವಿಯಿಂದ ಧಾರವಾಡಕ್ಕೆ ಬಂದ ಹಾಲಿನ ಶುದ್ಧಿಯು ಗುಡಾಪಿನಲ್ಲಿಯು ಧಾರಣಿಯು ೫ ಪೌಂಡುಗಳ ೧ ಡಬ್ಬಿಗೆ ೧೦—೯—೬ ಎಂದು ಧಾರವಾಡ ಕಲೆಕ್ಟರರು ಒಂದು ಪ್ರಕಟನೆಯನ್ನು ತಾ. ೧ ರಂದು ತೆಗೆದಿದ್ದಾರೆ.

ಗುರುದೇವ ಸಾಹಿತ್ಯ ಸಮಿತಿಯು ಪರವಾಗಿ ತಾ. ೨ ರಂದು ಶ್ರೀ ಗಂಗಪ್ಪಾ ವಾಲಿ ಇವರು ಬರೆದ ಕಲ್ಯಾಣ ಕ್ರಾಂತಿ ಎಂಬ ಕವನ ಸಂಗ್ರಹದ ಪ್ರಕಾಶನ ಸಮಾರಂಭವು ಶ್ರೀ ಉರವಕೊಂಡದ ಮಹಾಸ್ವಾಮಿಗಳ ಹಸ್ತದಿಂದ ಹುಬ್ಬಳ್ಳಿ ನಗರ ಭವನದಲ್ಲಿ ಜರಗಿತು. ಗುರುದೇವ ಸಾಹಿತ್ಯ ಸಮಿತಿಯವರು ಶ್ರೀಗಳಿಗೆ ಮಾನಪತ್ರ ಅರ್ಪಿಸಿದರು. ಅನೇಕರ ಭಾಷಣಗಳಾದವು. ಶ್ರೀಗಳು ತಮ್ಮ ಭಾಷಣದಲ್ಲಿ ಕರ್ನಾಟಕದ ಜನರ ದ್ವೇಷಾಸೂಯ ಭಾವವನ್ನು ಖಂಡಿಸಿ ಇದರಿಂದ ತಮಗೆ ಖೇದವಾಗಿದೆಯೆಂದು ಮಾರ್ಮಿಕವಾಗಿ ೧॥ ತಾಸು ಪರಿಣಾಮಕಾರಕ ಭಾಷಣ ಮಾಡಿದರು.

ಬೆಳಗಾವಿ

ಬೆಳಗಾವಿ ಲಿಂಗರಾಜ ಕಾಲೇಜದಲ್ಲಿ ದಿನಾಂಕ ೨೮ ಕ್ಕೆ ಪಾರಿತೋಷಕ ಸಮಾರಂಭವನ್ನೇರ್ಪಡಿಸಿ ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಉಪಾಧ್ಯಕ್ಷರಾದ ಬ್ಯಾರಿಸ್ಟರ ನೂರಿ ಅವರ ಹಸ್ತದಿಂದ ವಿವಿಧ ಸ್ಪರ್ಧೆಗಳಲ್ಲಿ ವಿಜಯ ಪಡೆದ ವಿದ್ಯಾರ್ಥಿಗಳಿಗೆ ಪಾರಿತೋಷಿಕಗಳನ್ನು ಕೊಡಿಸಲಾಯಿತು.

ತಾ. ೨೭ ಕ್ಕೆ ಲಿಂಗರಾಜ ಕಾಲೇಜದ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಶ್ರೀಮತಿ ಪದ್ಮಾವತಿಬಾಯಿ ಅಂಗಡ್ಡಿಯವರ ನೇತೃತ್ವದಲ್ಲಿ ನೆರವೇರಿತು. ಗಾಂಧೀಜಿಯವರ ಕೊಲೆಯ ನಂತರ ಬೆಳಗಾವ ಜಿಲ್ಲೆಯಲ್ಲಿ ನಡೆದ ಜಾತೀಯತೆಯ ಅಕಾಂಡ ತಾಂಡವದ ಕೆಲ ದೃಶ್ಯಗಳನ್ನು ಮುಂದಿಟ್ಟು ಮಹಾತ್ಮರು ಮಹಾ ಪಾಪವೆಂದು ತಿಳಿದ ಇಂತಹ ಹೀನ ಕೃತ್ಯಗಳಲ್ಲಿ ಜನರು ಇನ್ನಾದರೂ ತೊಡಗದಿರಲಿ ಎಂದು ಎಚ್ಚರಿಕೆ ಹೇಳಿದರು.

ವಿಜಾಪೂರ

ಮುದ್ದೇಬಿಹಾಳದ ಸಿರಸ್ತೇದಾರರಾದ ಶ್ರೀ. ಜಿ. ಎ. ಜೋಶಿ ಮತ್ತು ಅವರ ಕಾರಕೂನ ಶ್ರೀ ಕುಲಕರ್ಣಿ ಇವರ ಮೇಲೆ ನಡೆದ ಲಂಚ ಪ್ರಕರಣದ ಅಪೀಲ ವಿಚಾರಣೆ ಜಿಲ್ಲಾ ಸೆಶನ್ಸ ಕೋರ್ಟಿನಲ್ಲಿ ನಡೆದು ಇಬ್ಬರೂ ಪೂರ್ಣ ನಿರ್ದೋಷಿಗಳೆಂದು ಬಿಡಲ್ಪಟ್ಟರು. ಕೆಳಕೋರ್ಟಿನಲ್ಲಿ ಇಬ್ಬರಿಗೂ ಶಿಕ್ಷೆಯಾಗಿತ್ತು. ಫಿರ್ಯಾದಿ ಬಸಲಿಂಗಪ್ಪನು, ತನ್ನ ಮೇಲೆ ಹಾಕಲಾದ ಪೋಲೀಸ ಅಳ್ಳಬಟ್ಟಿಯಿಂದ ತಾನು ಪಾರಾಗುವದಿಲ್ಲವೆಂದು ಈ ಅಧಿಕಾರಿಗಳನ್ನು ಪೇಚಿನಲ್ಲಿ ತರಲು ಈ ಕುಯುಕ್ತಿಯನ್ನು ಹೂಡಿದ್ದನೆಂದು ನ್ಯಾಯಾಧೀಶರು ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಬಳ್ಳಾರಿ

ಧಾರವಾಡಕ್ಕೆ ಕರ್ನಾಟಕ ಪ್ರಾದೇಶಿಕ ಗ್ರಂಥಾಲಯದ ಪ್ರಾರಂಭೋತ್ಸವಕ್ಕೆ ಹೊರಟ ಉರವಕೊಂಡ ಉರಗಾದ್ರಿ ಮಠದ ಜಗದ್ಗುರು ಶ್ರೀ; ಕರಿಬಸವರಾಜೇಂದ್ರ ಸ್ವಾಮಿಗಳನ್ನು ಶ್ರೀ. ತಿರುಮಲರಾವ, ಮೊದಲಾದ ಹೊಸಪೇಟೆಯ ಸಭ್ಯ ಗ್ರಹಸ್ಥರು ನಿಲ್ದಾಣದಲ್ಲಿ ಸ್ವಾಗತಿಸಿ ಹಾರತುರಾಯಿಗಳನ್ನು ಅರ್ಪಿಸಿದರು.

ಅದವಾನಿ ತಾಲೂಕಿನ ನದಿ ಬ್ಯಾಗಿ ಗ್ರಾಮಕ್ಕೆ ೨೬ ನೇ ತಾರೀಖು ಮುಂಜಾನೆ ೭-೩೦ ಕ್ಕೆ ಮೊಗಲಾಯಿಯ ಸಶಸ್ತ್ರ ಗುಂಡ ಜನರು ಪೋಲೀಸರು ಕೊಲೆಗಡಕರ ವೇಷ ಹಾಕಿಕೊಂಡು ಬಂದೂಕು ರಿವಾಲ್ವರು ಹಾರಿಸುತ್ತ ೫ ಮನೆ ಲೂಟಿ ಮಾಡಿದರೆಂದು ಸುದ್ದಿ ಬಂದಿದೆ. ಉಪ್ಪಣ್ಣ ಎಂಬವನು ಕೂಡಲೆ ಸತ್ತನು. ಇನ್ನು ೧೨ ಜನರಿಗೆ ಗಾಯಗಳಾಗಿವೆ. ೫ ಜನರ ಪ್ರಕೃತಿ ಚಿಂತಾಜನಕವಾಗಿದೆ. ೭೫ ಸಾವಿರ ರೂಪಾಯಿಗಳ ಲೂಟಿಯಾಗಿದೆ. ವೆಂಕಮ್ಮನೆಂಬ ವೀರ ವನಿತೆ ಪುಂಡರೊಡನೆ ಹೋರಾಡಿ ಗಾಯಗೊಂಡು ಆಸ್ಪತ್ರೆಯಲ್ಲಿರುವಳು. ೨೭ ಕ್ಕೆ ಪೋಲೀಸ ಪಡೆ ಅಲ್ಲಿಗೆ ಹೋಗಿ ಕಾವಲು ಮಾಡಹತ್ತಿದೆ. ಜಿಲ್ಲಾಧಿಕಾರಿಗಳು ಸ್ಥಳವನ್ನು ಸಂದರ್ಶಿಸಿ ಬಂದರು. ಗಡ ರಕ್ಷಣೆಗಾಗಿ ಮದರಾಸ ಸರಕಾರ ಧಾವಿಸುವದು ಅಗತ್ಯವಾಗಿದೆ.

ಬೆಂಗಳೂರು

ನಮ್ಮ ಸುದ್ದಿಗಾರನು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಮೈಸೂರಿನ ಅಬಕಾರಿ ಮಂತ್ರಿಗಳಾದ ಶ್ರೀ ಮಹಮ್ಮದ ಶರೀಫರು ಉತ್ತರ ಕೊಡುತ್ತ, ಮದ್ರಾಸದ ಗಡಿಯಲ್ಲಿರುವ ಪ್ರದೇಶದಲ್ಲಿ ಎಪ್ರಿಲ ೧ರಿಂದ ೧೪೦ ಮದ್ಯದ ಅಂಗಡಿಗಳು ಮುಚ್ಚಲ್ಪಡುವವೆಂದೂ ಇದರಿಂದ ಸರಕಾರಕ್ಕೆ ೧೦ ಲಕ್ಷ ರೂ. ಹಾನಿಯಾಗುವದೆಂದೂ ತಿಳಿಸಿದರು.

ಹಿಂದುಸ್ತಾನದಲ್ಲಿ ಮೊದಲನೆಯವಾದದ ವೈಜ್ಞಾನಿಕ ಚಲಚ್ಚಿತ್ರ ಸಂಸ್ಥೆಯ ಉದ್ಘಾಟನೆಯನ್ನು ಮೈಸೂರಿನ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಮಾಡಿದರು. ಮತ್ತು ಮೈಸೂರು ಸರಕಾರವು ಈ ಸಂಸ್ಥೆಗೆ ಸರ್ವ ವಿಧ ಸಹಕಾರ ಕೊಡುವದಾಗಿ ಹೇಳಿದರು. ಚಲಚಿತ್ರಗಳ ಮುಂಖಾಂತರ ಸುಲಭವಾಗಿ ಜನಸಾಮಾನ್ಯರಿಗೆ ವಿಜ್ಞಾನದ ಪರಿಚಯ ಮಾಡಿಕೊಡುವದೇ ಈ ಸಂಸ್ಥೆಯ ಉದ್ದೇಶ.

ಮೈಸೂರು ಸರಕಾರದವರು ಬ್ರಿಟಿಶ ಮತದಾನ ಪದ್ಧತಿಯನ್ವಯ ಮತದಾರರ ಯಾದಿಯನ್ನು ರಚಿಸಲು ಆಗಲೇ ಪ್ರಾರಂಭಿಸಿರುವರು. ಸಂಸ್ಥಾನದಲ್ಲಿ ಸುಮಾರು ೩೭ ಲಕ್ಷ ಪ್ರೌಢರಿದ್ದಾರೆ. ಘಟನಾ ಸಮಿತಿಯ ಆಯ್ಕೆ ಮಾರ್ಚ ೨೦ ಕ್ಕೆ ನಡೆಯದೆ ರಾಜ್ಯ ಘಟನೆಯು ೫೬ನ ತಿಂಗಳೊಳಗಾಗಿ ರಚಿತವಾಗಬಹುದೆಂದು ನಿರೀಕ್ಷಿಸಲಾಗಿದೆ.

ಕಂತಿ ಪಾಪೆಯಿಂದ ತಾಮ್ರದ ಕಂತಿಗಳನ್ನು ಅಪಹರಿಸುತ್ತಿದ್ದ ಆರು ಜನರನ್ನು ಬೆಂಗಳೂರಿನಲ್ಲಿ ಫೆಬ್ರುವರಿ ತಾ. ೨೮ ಕ್ಕೆ ಸೆರೆಹಿಡಿಯಲಾಗಿದೆ ೨೫ ಮಣ ತಾಮ್ರದ ಕಂತಿಯನ್ನು ಪೋಲೀಸರು ಸೆರೆಯಾಳುಗಳಿಂದ ವಶಪಡಿಸಿಕೊಂಡಿದ್ದಾರೆ.

ಬೆಂಗಳೂರಿನ ಪೋಲೀಸರು ಲಾಯಸೆನ್ಸ ಇಲ್ಲದ ಶಸ್ತ್ರಾಸ್ತ್ರಗಳನ್ನೂ, ಹೇರಳ ಮದ್ದು ಗುಂಡುಗಳ ಸಂಗ್ರಹವನ್ನೂ ಪತ್ತೆಹಚ್ಚಿದ್ದಾರಲ್ಲದೆ ನಾಲ್ಕು ಪಿಸ್ತೂಲುಗಳನ್ನೂ ವಶಪಡಿಸಿಕೊಂಡಿದ್ದಾರೆ. ಮದ್ದು ಗುಂಡುಗಳಲ್ಲಿ ಸ್ಟೆನ್ ಗನ್ನುಗಳಿಗೆ ಸರಿಹೋಗುವ ಕಾಡತೂಸುಗಳೂ ಇವೆ.

ಮೈಸೂರ ಘಟನಾ ಸಮಿತಿಯ ದಲಿತ ವರ್ಗದ ಒಂದು ಸ್ಥಳಕ್ಕೆ ಸ್ವತಂತ್ರವಾಗಿ ನಿಂತಿದ್ದ ಶ್ರೀ ಪರಸಾ ಬೋಯಿ ಎಂಬವರು ತಮ್ಮ ಉಮೇದವಾರಿಕೆಯನ್ನು ಹಿಂತೆಗೆದುಕೊಂಡದ್ದರಿಂದ ಶಿವಮೊಗ್ಗೆಯಿಂದ ಕಾಂಗ್ರೆಸ ಪಕ್ಷದ ಶ್ರೀ ಗಂಗಾನಾಯಕ ಇವರು ಅವಿರೋಧವಾಗಿ ಆರಿಸಿ ಬರುವ ಸಂಭವವಿದೆ. ಇದುವರೆಗೆ ೭೫ ಸ್ಥಳಗಳಲ್ಲಿ ೧೯ ಅವಿರೋಧವಾಗಿ ಕಾಂಗ್ರೆಸಿಗೆ ದೊರೆತಿವೆ.

ಮೈಸೂರ ಪೌರಸಭೆಯಲ್ಲಿ ಹರಿಜನ ಸದಸ್ಯರಾದ ಶ್ರೀ ಕೆ ಸಿದ್ಧಯ್ಯನವರು, ಮೈಸೂರು ನಗರದಲ್ಲಿ ಸಂಪೂರ್ಣವಾಗಿ ಗೋವಧೆ ನಿಲ್ಲಬೇಕೆಂಬ ಗೊತ್ತುವಳಿ ಮಂಡಿಸಿ, ಈಗ ಮೈಸೂರಲ್ಲಿ ತಿಂಗಳಿಗೆ ಸುಮಾರು ಮುನ್ನೂರು ಗೋಗಳು ವಧಿಸಲ್ಪಡುವವೆಂದು ಹೇಳಿ ಈ ವಧೆಯನ್ನು ನಿಲ್ಲಿಸದಿದ್ದರೆ ಮಹಾತ್ಮರ ಆತ್ಮಕ್ಕೆ ಶಾಂತಿ ಸಿಗದೆಂದು ನುಡಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಕನ್ನಡ ಸಂಸ್ಥಾನ

ಸವಣೂರಿನ ಲೋಕ ಸೇವಾ ಸಂಘದ ಪರಿಯಿಂದ ತಾ. ೨೯ ಕ್ಕೆ ಸರದಾರ ಅಬ್ದುಲ ಮಜೀದಖಾನರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತ್ತು. ಹುಬ್ಬಳ್ಳಿಯ ಶ್ರೀ ಗೊಡವಾಲಾರು ಮಹಾತ್ಮಾ ಗಾಂಧೀಯವರ ತತ್ವಗಳನ್ನು ಆಚರಣೆಯಲ್ಲಿ ತರಬೇಕೆಂದು ಹೇಳಿದರು. ಸವಣೂರ ಸಂಸ್ಥಾನದ ಲೀನೀಕರಣದಿಂದ ಉಂಟಾಗುವ ಸಮಸ್ಯೆಗಳನ್ನು ಚರ್ಚಿಸಲು ಲೋಕ ಸೇವಾ ಸಮಿತಿಯನ್ನು ಬಲಪಡಿಸಿಕೊಳ್ಳಬೇಕೆಂಬ, ಇಲ್ಲಿ ಸೇವಾದಲ ಪ್ರಾರಂಭಿಸಲು ಸಹಾಯ ನೀಡಬೇಕೆಂದು ಕೆ. ಪಿ. ಸಿ. ಸಿ. ಯನ್ನು ಬಿನ್ನವಿಸುವ ಸವಣೂರನ್ನು ತಾಲೂಕಾ ಸ್ಥಳವಾಗಿ ಮಾಡಬೇಕೆಂಬ ಬಗ್ಗೆ ಮುಂಬಯಿ ಸರಕಾರಕ್ಕೆ ಶಿಷ್ಟಮಂಡಳ ಕಳುಹಿಸುವ, ಕರ್ನಾಟಕ ಏಕೀಕರಣಕ್ಕೆ ಸಂಪೂರ್ಣ ಬೆಂಬಲಕೊಡುವ ಗೊತ್ತುವಳಿಗಳು ಸ್ವೀಕೃತವಾದವು.

ಹರಿಜನರು ಪ್ರಚಂಡ ಮೆರವಣಿಗೆ ಹೊರಟು ಸವಣೂರಿನ ಶ್ರೀ ಮಾರುತಿ ಮತ್ತು ಶ್ರೀ ಬಸವೇಶ್ವರ ದೇವರ ಗುಡಿಗಳಲ್ಲಿ ತಾ. ೧ ರಂದು ಪ್ರವೇಶಮಾಡಿದರು.

ಚಿಲ್ಲರ ಇಲ್ಲವೆಂದು ಹೇಳಿದ್ದಕ್ಕಾಗಿ ಮುದಗಲ್ಲಲ್ಲಿ (ರಾಯಚೂರ) ಇತ್ತೆಹಾದುಲ್ಲದವರು ಶ್ರೀ ವೆಂಕಣ್ಣ ಕಟಗೇರಿ ಎಂಬವರನ್ನು ಬೆದರಿಸಿ ಅವರ ಚಿಕ್ಕ ಮಗು ರಾಮು ಎಂಬ ಹುಡುಗನ ಕುತ್ತಿಗೆ ಹಿಚುಕಿ ಬಾವಿಯಲ್ಲಿ ಹಾಕಿ ತಾವೇ ಈ ಸುದ್ದಿಯನ್ನು ಮುಟ್ಟಿಸುವ ನಾಟಕ ಮಾಡಿದರು. ಪಾಪ, ತಂದೆಯು ರಾಯಚೂರಿಗೆ ಫಿರ್ಯಾದೆ ನೀಡಲು ಹೋಗಿದ್ದಾರೆ.

ದಕ್ಷಿಣ ಕನ್ನಡ

ಆರ್ ಎಸ್ ಎಸ್ ಜಿಲ್ಲಾ ಸಂಚಾಲಕರಾದ ಕಾರ್ಕಳ ಸದಾಶಿವರಾಯರನ್ನು ಮಂಗಳೂರಲ್ಲಿ ತಾ. ೨೮ ರಂದು ಬಂಧಿಸಿ ವೆಲ್ಲೂರ ಜೇಲಿಗೆ ಸಾಗಿಸಲಾಗಿದೆ.

ಬಿಲ್ಲವ ಯೂನಿಯನ್ನಿನ ಆಶ್ರಯದಲ್ಲಿ ನಡೆಯತಕ್ಕ ಶಿವರಾತ್ರಿಯ ಉತ್ಸವವು ಈ ವರ್ಷ ಕೂಡ ಕುದ್ರೋಳಿಯ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ತಾ. ೪ ರಿಂದ ೧೦ ರ ವರೆಗೆ ಜರಗುವದು.

ಉಡುಪಿಯ ಸರಕಾರೀ ಆಸ್ಪತ್ರೆಗೆ ಹೊಸ ಕಟ್ಟಡದ ಬಗ್ಗೆ ವಿಚಾರವಿನಿಮಯ ಮಾಡಲು ಮದ್ರಾಸಿನ ಸರ್ಜನ್ ಜನರಲ್ ಭಾಟಿಯಾ ಅವರು ಬಂದಿದ್ದರು. ಅಜ್ಜರ ಕಾಡಿನಲ್ಲಿ ಕಟ್ಟಲನುಕೂಲವಾದ ಸ್ಥಳ ನೋಡಿದರು.

ಶಿವಾಜಿ ಹತ್ಯಡ್ಕ (ಪುತ್ತೂರು) ಗ್ರಾಮಗಳಲ್ಲಿ ಅಕ್ಕಿಯ ಅಭಾವ ಬಹಳವಾಗಿದೆ. ಬಡ ಜನರಿಗೆ ಊಟಕ್ಕೆ ಸಿಗುವದಿಲ್ಲ. ಹತ್ಯಡ್ಕ ಡಿಪೋದಲ್ಲಿರುವ ಅಕ್ಕಿಯನ್ನು ಸರಕಾರವು ಬೇಗ ಕೊಡಿಸುವ ವ್ಯವಸ್ಥೆ ಮಾಡದಿದ್ದರೆ ಪರಿಸ್ಥಿತಿ ಕಠಿಣವಾಗಬಹುದೆಂದು ತಿಳಿದು ಬರುತ್ತದೆ.

ನಾಪಾಸಾದವನ ಕೈಫಿಯತ್ತು

[೩ನೆಯ ಪುಟದಿಂದ]

ಗಳಲ್ಲಿ ನಮ್ಮಲ್ಲಿ ಸಂಘಟನೆಯ ಅಭಾವವೇ ಮುಖ್ಯ. ಈಗಿನ ಜಗತ್ತಿನಲ್ಲಿ ಸಂಘಟನೆ ಅಗತ್ಯವಾದುದು. ಅನುತ್ತೀರ್ಣರು ಸಂಘಟಿತರಾದರೆ ಅವರ ಶಕ್ತಿ ತೀರ ಪ್ರಚಂಡವಾಗುವದರಲ್ಲಿ ಸಂಶಯವಿಲ್ಲ. ನಾವು ಅನುತ್ತೀರ್ಣರ ಮಹಾಸಭೆ ಕೂಡಿಸಿ ಒಂದು ಕ್ರಿಯಾಸಮಿತಿ ನೇಮಿಸಬೇಕು. ಕ್ರಿಯಾ ಸಮಿತಿಯವರು ಹಿಂದುಸ್ತಾನದಲ್ಲಿರುವ ೪ ಕೋಟಿ ಅನುತ್ತೀರ್ಣರ ಅಂಕಿತದ ಒಂದು ಮನವಿಯನ್ನು ಘಟನಾ ಸಮಿತಿಗೆ ಕಳಿಸಿದರೆ ಈ ಪ್ರಚಂಡ ಮನವಿ ಕಂಡು ಘಟನಾ ಸಮಿತಿಯವರು ಹೊಸ ಘಟನೆಯಲ್ಲಿ ಅನುತ್ತೀರ್ಣರ ಬೇಡಿಕೆ ಮನ್ನಿಸಿ ಅಗತ್ಯವಿದ್ದ ಬದಲಾವಣೆಮಾಡಬೇಕಾಗುವದು. ಒಮ್ಮೆ ಹಿಂದುಸ್ತಾನದಲ್ಲಿ ನಾವು ವಿಜಯ ಸಂಪಾದಿಸಿ ಅಧಿಕಾರ ಸಂಪಾದಿಸಿದೆವೆಂದರೆ ಅಂತರ್‌ರಾಷ್ಟ್ರೀಯ ಅನುತ್ತೀರ್ಣರ ಸಂಘ ನಿರ್ಮಾಣಮಾಡಬಹುದು. ಈ ಸಂಸ್ಥೆಯು ಸಂಯುಕ್ತ ರಾಷ್ಟ್ರಸಂಘಕ್ಕಿಂತಲೂ ಪ್ರಭಾವಶಾಲಿ ಸಂಘವಾಗುವದರಲ್ಲಿ ಸಂಶಯವಿಲ್ಲ. ಹಿಂದುಸ್ತಾನ—ಪಾಕಿಸ್ತಾನಗಳ ೦ತದ ದೂರು, ದ. ಆಫ್ರಿಕೆಯ ವರ್ಣ ದ್ವೇಷ ಚೀನದ ಯಾದವಿ, ಇಂಡೋನೇಶಿಯಾದಲ್ಲಿ ಡಚ್ಚರ ಅತ್ಯಾಚಾರ ಮೊದಲಾದ ಪ್ರಶ್ನೆ ನಮ್ಮ ಅನುತ್ತೀರ್ಣರ ಅಂತರ್‌ರಾಷ್ಟ್ರೀಯ ಸಂಘದಲ್ಲಿ ತತ್‌ಕ್ಷಣ ಬಿಡಬಲ್ಲವು. ನಮ್ಮ ಸಂಘವು ಎಲ್ಲ ರಾಷ್ಟ್ರಗಳಲ್ಲಿ ಉತ್ತೀರ್ಣ ವರ್ಗದ ಶೋಷಣೆಯಿಂದ ಜರ್ಜರಿತರಾದ ಅನುತ್ತೀರ್ಣರ ಪ್ರತಿನಿಧಿಗಳಿಂದ ಕೂಡಿದ್ದಿರುವದರಿಂದ ಯಾವದೇ ಬಗೆಯ ಶೋಷಣೆಯ ವಿರೋಧ ಧೋರಣಕ್ಕೆ ಅಲ್ಲಿ ಮರ್ಯಾದೆ ಇದೆ. ಇದು ಜಾಗತಿಕ ಕಮ್ಯುನಿಷ್ಟ ಸಂಸ್ಥೆಗಿಂತ ಪ್ರಭಾವಿಯಾಗುವದರಲ್ಲಿ ಸಂದೇಹವೇ ಇಲ್ಲ. ಇದೆಲ್ಲ ಸಾಧಿಸಿ ಜಗತ್ತಿಗೇ ನಾವು ಮಾರ್ಗದರ್ಶಕರಾಗಬೇಕಿದ್ದರೆ ಇಂದು ಹಿಂದುಸ್ತಾನದ ರಾಜಕೀಯ ಸೂತ್ರವನ್ನು ನಾವು ವಹಿಸಿಕೊಳ್ಳುವಂತೆ ಅನುಕೂಲಪರಿಸ್ಥಿತಿಯು ಬುನಾದಿ ಶಿಕ್ಷಣಯೋಜನೆಯಿಂದ ಒದಗಲಿದೆ. ಆಗ ಹಿಂದುಸ್ತಾನದಲ್ಲಿ ಅನುತ್ತೀರ್ಣರ ಸಂಖ್ಯೆ ನೂರಕ್ಕೆ ೮೦ ರಷ್ಟಾಗುವದರಲ್ಲಿ ಸಂದೇಹವಿಲ್ಲ. ಈಗ ನಾವು ಮುಂದಾಲೋಚನೆಯಿಂದ ಹೊಸ ಘಟನೆಯಲ್ಲಿ ನಮ್ಮ ಸ್ಥಾನಮಾನ ಭದ್ರವಾಗುವಂತೆ ಆಂದೋಲನವನ್ನು ನಮ್ಮ ಕ್ರಿಯಾಸಮಿತಿಯ ಮೂಲಕ ನಡೆಸಲೇಬೇಕು.

ಅನುತ್ತೀರ್ಣ ಸಂಘಕೀ ಜೈ!


ಉತ್ತರ ಕನ್ನಡ

ಸಿದ್ದಾಪುರ ತಾಲೂಕಿನ ಭುವನೇಶ್ವರಿ ಕ್ಷೇತ್ರದ ಭುವನೇಶ್ವರಿ ದೇವಾಲಯವು ತಾ ೨೪ ಕ್ಕೆ ಹರಿಜನರಿಗೆ ಮುಕ್ತದ್ವಾರವಾಯಿತು. ಹರಿಜನರನ್ನು ಮೋಕ್ತೇಸರರು ಗುಡಿಗೆ ಬರಮಾಡಿಕೊಂಡರು.

ಸಿದ್ದಾಪುರದಲ್ಲಿ ತಾ. ೨೫ ಕ್ಕೆ ಕಾಂಗ್ರೆಸ ಕಾರ್ಯಕರ್ತರು ಹರಿಜನರೊಡನೆ ಶ್ರೀ ವೆಂಕಟರಮಣ, ಶ್ರೀ ಬಸವೇಶ್ವರ, ಶ್ರೀ ಗಣಪತಿ ಮೊದಲಾದ ದೇವಾಲಯಗಳಲ್ಲಿ ಪ್ರವೇಶ ಮಾಡಿದರು. ತಾ. ೨೬ಕ್ಕೆ ಇದೇ ಪ್ರಕಾರ ಶ್ರೀ ರಾಮಚಂದ್ರ, ಶ್ರೀ ನಾರಾಯಣ, ಶ್ರೀ ಅಂಬಿಕಾ ದೇವಾಲಯಗಳು ಹರಿಜನರಿಗೆ ಮುಕ್ತದ್ವಾರಗಳಾದವು.

ಕಾರವಾರ ಜಿಲ್ಲಾ ಬಟ್ಟೆ ಹಾಗು ಸಲಹೆ ಸಮಿತಿಯು ತಾ. ೨೮ ರ ಸಭೆಯಲ್ಲಿ ಈ ಜಿಲ್ಲೆಯೊಳಗಿಂದ ಪರ ಜಿಲ್ಲೆಗೆ ಬಹಳ ಅಕ್ಕಿ ಸಾಗಾಟವಾಗುತ್ತಿದ್ದು ಸತತ ಬೆಲೆಯು ಏರುತ್ತಿದೆ. ಆದ ಕಾರಣ ಸರಕಾರದವರು ನಿರ್ಯಾತ ನಿಯಂತ್ರಣ ಕ್ರಮ ಕೈಕೊಳ್ಳಬೇಕೆಂದೂ, ಈಗ ಗೋದಾಮುಗಳಲ್ಲಿದ್ದ ಗೋದಿ ಹಿಟ್ಟನ್ನು ಲಿಲಾವ ಮಾಡಬೇಕೆಂದೂ ಸಲಹೆ ಕೊಡುವ ನಿರ್ಣಯ ಕೈಕೊಳ್ಳಲಾಯಿತು.

ಅಕ್ಕಲಕೋಟ ಇಂಪೀರಿಯಲ್ ಬ್ಯಾಂಕಿನಲ್ಲಿಯ ೨೨೦೦ ರೂ. ಗಳ ಕಳವು ಮಾಡಿದ ಆರೋಪದ ಮೇಲೆ ಇಬ್ಬರು ಅರಬರನ್ನು ಸಶಸ್ತ್ರ ಪೋಲೀಸರು ಜೋರೋಟಗಿ ಸ್ಟೇಶನದ ಮೇಲೆ ಬಂಧಿಸಿದ್ದಾರೆಂದು ತಿಳಿಯುತ್ತದೆ.



ಮುಂಬಯಿ

ಕಟ್ಟಾ ಕಮ್ಯೂನಿಷ್ಟವಾದಿಗಳೂ ಹಿಂದಿನ ಕಾಂಗ್ರೆಸ ಕಾರ್ಯಕರ್ತರೂ ಆದ ಶ್ರೀ. ಜಮುನಾದಾಸ ಮೆಹತಾರವರನ್ನು ಫೆಬ್ರುವರಿ ತಾ. ೨೯ಕ್ಕೆ ಮುಂಬಯಿ ಸರಕಾರದ ಆಜ್ಞೆಯ ಮೇರೆಗೆ ಬಂಧಿಸಲಾಗಿದೆ. ಆರ್. ಎಸ್. ಎಸ್. ದ ಮೇಲೆ ನಿರ್ಬಂಧ ಹೇರಿದ ಕೂಡಲೆ ಫೆಬ್ರುವರಿ ತಾ. ೫ಕ್ಕೆ ಇವರನ್ನು ಬಂಧಿಸಿ ಅದೇ ಸಂಜೆಗೆ ಬಿಡಲಾಗಿತ್ತು.

ದಾದರದಲ್ಲಿ ಅಂಚೆ ಇನಸ್ಪೆಕ್ಟರರಾದ ಶ್ರೀ. ಫ್ರಾನ್ಸಿಸ ಪಿರೋಜ್ಜೀಯವರು ತಾ. ೧೮ರಂದು ಮುಂಜಾನೆ ಜನರಲ ಅಂಚೆ ಕಚೇರಿಯಿಂದ ೧೪ ಸಾವಿರ ರೂ. ನಗದನ್ನು ತೆಗೆದುಕೊಂಡು ಹೋಗುತ್ತಿರುವಾಗ ಅವರನ್ನು ತಿವಿದು ಮೂವರು ಆ ಹಣವನ್ನು ಕಸಿದುಕೊಳ್ಳಬೇಕೆಂದಿದ್ದರು. ಅಷ್ಟರಲ್ಲಿ ಜನರು ಓಡಿ ಬಂದು ಇಬ್ಬರು ಆರೋಪಿಗಳನ್ನು ಹಿಡಿದು ಪೋಲೀಸರ ವಶಕ್ಕೆ ಕೊಟ್ಟರು. ಇನ್ನೊಬ್ಬನು ತಪ್ಪಿಸಿಕೊಂಡು ಓಡಿದನು.

ಮುಂಬಯಿ ಮುಖ್ಯ ಮಂತ್ರಿ ಶ್ರೀ. ಖೇರರು ಗಣೇಶಖಿಂಡಿಯ ಸರಕಾರಿ ಭವನಕ್ಕೆ ಭೆಟ್ಟಿ ಕೊಟ್ಟರು. ಪುಣೆಯ ನಗರ ಸಭೆಯವರು ತಾ. ೨೯ಕ್ಕೆ ಶ್ರೀ. ಖೇರರಿಗೆ ಮಾನಪತ್ರ ಕೊಟ್ಟರು. ಮುಖ್ಯ ಮಂತ್ರಿಗಳು ಧೋಂಡದ ನಿರಾಶ್ರಿತರ ಶಿಬಿರವನ್ನೂ ಸಂದರ್ಶಿಸಿದರು. ಪುಣೆಯ ಸರಕಾರಿ ಭವನವಾದ ಗಣೇಶಖಿಂಡಿಯು ಪುಣೆ ವಿಶ್ವವಿದ್ಯಾಲಯಕ್ಕೆ ಕೊಡಲ್ಪಟ್ಟಿದೆ.

ತಾ. ೨೮ಕ್ಕೆ ಸೊಲ್ಲಾಪುರದ ಹತ್ತರ ಮುಂಜಾನೆ ಪುಣೆಯ ಕಡೆಗೆ ಹೋಗುವ ಪ್ಯಾಸೆಂಜರ ಗಾಡಿಗೆ ಅಕಸ್ಮಾತವಾಗಿ ಚೌದಾಕವೂಶಿನ ಬಳಿ ಓರ್ವ ಹುಡುಗಿಯು ಮರಣ ಹೊಂದಿದಳು.

ಸುರಕ್ಷಿತ ಉದ್ಯೋಗರಹಿತ ಜನರು ಉದ್ಯೋಗ ಧಂದೆಯಲ್ಲಿ ತೊಡಗಲೆಂದು ಧನ ಸಹಾಯ ನೀಡುವ ಯೋಜನೆಯನ್ನು ಮುಂಬಯಿ ಸರಕಾರದವರು ಏಪ್ರೀಲ ೧ನೇ ತಾರೀಖಿನಿಂದ ೧ ವರ್ಷದ ವರೆಗೆ ಬೆಳೆಸಿದ್ದಾರೆ. ಈ ಯೋಜನೆಯು ೧೯೪೭ರಲ್ಲಿ ಮಂಜೂರಾಗಿತ್ತು.

ತಾ.೧೯ರಂದು ಮುಂಬಯಿಯಲ್ಲಿ ಮಹಾತ್ಮಾ ಗಾಂಧಿಯವರ ಮಾಸಿಕ ಶ್ರಾದ್ಧವನ್ನು ಆಚರಿಸಲಾಯಿತು. ಪ್ರಾರ್ಥನೆ ಹಾಗು ಸೂತ್ರ ಯಜ್ಞವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಮುಂಬಯಿಯ ಅರ್ಥ ಸಚಿವರಾದ ಶ್ರೀ. ವೈಕುಂಠಲಾಲ ಮೆಹತಾರು, ಹಳ್ಳಿಗಳ ಏಳಿಗೆಯಾದರೆ ಮಾತ್ರ ರಾಷ್ಟ್ರದ ಏಳಿಗೆಯಾಗುವದೆಂದು ಮಹಾತ್ಮಾರು ಪದೇಪದೇ ಹೇಳುತ್ತಿದ್ದರು. ಅದ್ದರಿಂದ ಹಳ್ಳಿಗಳ ಏಳಿಗೆಗಾಗಿ ದುಡಿಯುವದು ಪ್ರತಿಯೊಬ್ಬನ ಕರ್ತವ್ಯ ಎಂದು ಹೇಳಿದರು.

ಮದ್ರಾಸ

ಇದೇ ಎಪ್ರಿಲ ೧ನೇ ತಾ. ನಿಂದ ಮದ್ರಾಸ ಕಾರ್ಪೋರೇಶನ ಅಧಿಕಾರ ಕ್ಷೇತ್ರವನ್ನು ವಿಸ್ತರಿಸಿ ಇಡೀ ಕೊಡಗು ಪ್ರಾಂತವನ್ನು ಮದ್ರಾಸ ಕಾರ್ಪೋರೇಶನ ಅಧಿಪತ್ಯಕ್ಕೆ ಸೇರಿಸಲಾಗುವದು.

ತ್ಯಾಗರಾಜ ನಗರದ ಠಕ್ಕರಬಾಪಾ ಹರಿಜನ ವಿದ್ಯಾಲಯದ ಬೈಲಿನಲ್ಲಿ ಮಹಾತ್ಮರ ಅಸ್ಥಿ ಅವಶೇಷಗಳನ್ನು ಮತ್ತು ರಕ್ತಸಿಂಚಿತ ಮಣ್ಣನ್ನು ಹೂಳಿಡಲಾಯಿತು. ಮದ್ರಾಸದ ಮಂತ್ರಿಗಳೇ ಸ್ವತಃ ಇವುಗಳನ್ನು ದಿಲ್ಲಿಯಿಂದ ತಂದಿದ್ದರು. ಆ ಸ್ಥಳದಲ್ಲಿ ವೃಂದಾವನ ಕಟ್ಟಲಾಗಿದೆ. ಈ ಕಾರ್ಯಕ್ರಮದಲ್ಲಿ ಮದ್ರಾಸದ ಮುಖ್ಯ ಮಂತ್ರಿಗಳು ಭಾಗವಹಿಸಿದ್ದರು.

ಮದ್ರಾಸ ನಗರದಲ್ಲಿಯ ಟ್ರಾಮವೇ ಕಂಪನಿಯನ್ನು ಕೊಂಡುಕೊಂಡು ಅದರ ಆಡಳಿತವನ್ನು ತಾವೇ ವಹಿಸಲು ಮದ್ರಾಸ ನಗರಸಭೆಗೆ ಮದ್ರಾಸ ಸರಕಾರವು ಒಪ್ಪಿಗೆ ಕೊಟ್ಟಿದೆ. ಅವಶ್ಯಬಿದ್ದರೆ ನಗರ ಸಭೆಗೆ ಸಾಲ ಕೊಡಲು ಸಹ ಸರಕಾರವು ಒಪ್ಪಿದೆ.

ಮದ್ರಾಸ ಶಾಸನ ಸಭೆಯಲ್ಲಿ ತಾ. ೨೬ಕ್ಕೆ ಮದ್ರಾಸ ಹೈದರಾಬಾದ ಗಡಿಯಲ್ಲಿಯ ಹಳ್ಳಿಗಳಲ್ಲಿಯ ಜನರ ಜೀವಿತವಿತ್ತಗಳ ಸುರಕ್ಷಿತತೆಯ ಬಗ್ಗೆ ಸರಕಾರವು ಕೈಕೊಂಡ ಉಪಾಯಗಳ ಸಂಬಂಧದಲ್ಲಿ ಪ್ರಶ್ನೋತ್ತರ ನಡೆದವು. ಇದಕ್ಕೆ ಉತ್ತರವಾಗಿ ಮಂತ್ರಿಗಳು ಇತ್ತೀಚೆಗೆ ಗಡಿಯಲ್ಲಿ ನಡೆದ ದುರ್ಘಟನೆಯ ವಿಷಯದಲ್ಲಿ ಹೈದರಾಬಾದ ಸರಕಾರದೊಡನೆ ಮದ್ರಾಸ ಸರಕಾರದ ನೇರವಾದ ಸಂಬಂಧವಿಲ್ಲವೆಂದೂ ಈ ವಿಷಯವನ್ನು ಹಿಂದುಸ್ಥಾನ ಸರಕಾರ ಹಾಗು ಹೈದರಾಬಾದದ ಶ್ರೀಯು ಅವರ ಏಜಂಟ ಜನರಲ್ಲರಿಗೆ ತಿಳಿಸಿದೆ ಎಂದೂ ಹೇಳಿದರು.

ಸಾವರಕರರು ಬರೆದ ಹಿಂದೀ ಸ್ವಾತಂತ್ರ್ಯ ಸಂಗ್ರಾಮ ಎಂಬ ಪುಸ್ತಕದ ಮೇಲೆ ಇದ್ದ ನಿರ್ಬಂಧವನ್ನು ಮದ್ರಾಸ ಸರಕಾರವು ತೆಗೆದಿರುವದಾಗಿ ಗೃಹಮಂತ್ರಿ ಡಾ. ಪಿ. ಸುಬ್ಬರಾಯನ್ನರು ಹೇಳಿದರು.

ಹೊಸದಿಲ್ಲಿ

ಹಿಂದೀ ವಿಮಾನ ಪಡೆಯು ರಾಡರದಂಥ ಅತ್ಯಧುನಿಕ ಯುದ್ಧ ಸಾಧನಗಳನ್ನು ಉಪಯೋಗಿಸುತ್ತಿದೆ. ಈ ಯಂತ್ರದ ಮೂಲಕ ದೂರದಿಂದ ದಾಳಿಮಾಡಲು ಬರುವ ವಿಮಾನಗಳ ಸಂಖ್ಯೆ, ಎತ್ತರ, ದಿಕ್ಕು ಮೊದಲಾದವು ತಿಳಿಯುತ್ತವೆ. ಅಲ್ಲದೆ ಬಾನುಲಿ ನಿಯಂತ್ರಿತ ವಿಮಾನಗಳಿಂದ ಅವುಗಳನ್ನು ಎದುರಿಸುವದು ಸಾಧ್ಯವಿದೆ. ಈ ಯಂತ್ರದ ಬಗ್ಗೆ ಹೆಚ್ಚಿನ ಶಿಕ್ಷಣ ಹೊಂದಲು ಹಿಂದುಸ್ಥಾನ ಸರಕಾರವು ಅಮೇರಿಕಾ ಮತ್ತು ಇಂಗ್ಲಂಡಗಳಿಗೆ ಕೆಲವು ಅಧಿಕಾರಿಗಳನ್ನು ಕಳುಹಿಸಿ ಕೊಟ್ಟಿದೆ.

ಅಪಹೃತ ಸ್ತ್ರೀಯರ ವಿಮೋಚನೆಯ ಕಾರ್ಯದ ಸಲುವಾಗಿ ಕರಾಚಿಗೆ ಹೋದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಕುಮಾರಿ ಮೃದುಲಾಬೇನ ಸಾರಾಭಾಯಿ ಇವರು ತಾ. ೨೮ಕ್ಕೆ ವಿಮಾನ ಮೂಲಕ ದಿಲ್ಲಿಗೆ ಬಂದರು.

ಮೋಟಾರುಗಳ ೧೫ನೇ ಬಿಡಿ ಭಾಗಗಳ ಬೆಲೆ ಹಾಗು ಹಂಚಿಕೆಗಳ ಮೇಲಿನ ನಿಯಂತ್ರಗಳನ್ನು ತಾ. ೧೮ರಿಂದ ತೆಗೆದೊಗೆಯಲಾಗಿದೆಯೆಂದು ಹಿಂದುಸ್ಥಾನ ಸರಕಾರವು ವಿಶೇಷ ಗ್ಯಾಝೆಟಿನ ಮೂಲಕ ಆಜ್ಞೆ ಹೊರಡಿಸಿದೆ.

ಏಪ್ರಿಲ ತಾ. ೧ರಿಂದ ಪಾಕಿಸ್ತಾನವು ಸ್ವತಂತ್ರ ನಾಣ್ಯ ಹೊರಡಿಸುವ ಸಿದ್ಧತೆಯಲ್ಲಿದ್ದುದರಿಂದ ಹಿಂದುಸ್ಥಾನ ಸರಕಾರವು ವಿವಂಚನೆಗೆ ಒಳಗಾಗಿದೆ. ಪಾಕಿಸ್ತಾನವು ತನ್ನ ತಿಜೋರಿಯಲ್ಲಿದ್ದ ಸುಮಾರು ೮೦ ಕೋಟಿ ರೂಪಾಯಿಯಷ್ಟು ಬೆಲೆಯ ನೋಟುಗಳನ್ನು ಸುಟ್ಟು ಹಾಕಬೇಕೆಂಬ ಕರಾರಕ್ಕೆ ಒಪ್ಪಿರುವದೆಂದು ತಿಳಿಯುತ್ತದೆ.

ಹಿಂದುಸ್ಥಾನದ ಘಟನಾ ಸಮಿತಿಯ ಅಧ್ಯಕ್ಷನಿಗೆ ಮತ್ತು ಕೇಂದ್ರ ಶಾಸನ ಸಭೆಯ ಅಧ್ಯಕ್ಷನಿಗೆ ತಿಂಗಳಿಗೆ ೩ ಸಾವಿರ ರೂ. ಗಳ ಸಂಬಳ ಮತ್ತು ೫೦೦ ರೂ. ಗಳ ಭತ್ತೆ ದೊರೆಯಬೇಕೆಂದು ಹಿಂದುಸ್ಥಾನ ಸರಕಾರದ ಆಜ್ಞೆ ಹೊರಟಿದೆ. ಘಟನಾ ಸಮಿತಿಯ ಅಧ್ಯಕ್ಷರಿಗೆ ೧೯೪೬ ಜನೆವರಿ ೧೪ನೇ ತಾ. ನಿಂದ ಮತ್ತು ಕೇಂದ್ರ ಶಾಸನ ಸಭೆಯ ಅಧ್ಯಕ್ಷರಿಗೆ ೧೯೪೮ ಜನೆವರಿ ೧ನೇ ತಾ. ನಿಂದಲೂ ಈ ಸಂಬಳ ದೊರೆಯುವದು.

ಘಟನಾ ಸಮಿತಿಯ ಮುಸ್ಲಿಂಲೀಗ ಪಕ್ಷದ ಸಭೆಯು ತಾ. ೨೯ಕ್ಕೆ ನವಾಬ ಇಸ್ಮಾಯಿಲಖಾನರ ಅಧ್ಯಕ್ಷತೆಯಲ್ಲಿ ಸೇರಿ ಲೀಗ ಪಕ್ಷವನ್ನು ವಿಸರ್ಜಿಸಲು ನಿರ್ಣಯಿಸಿತು. ಈ ಸಭೆಗೆ ೨೭ರಲ್ಲಿ ೧೪ ಸದಸ್ಯರು ಬಂದಿದ್ದರು.

ಪಾಕಿಸ್ತಾನ ಹಿಂದುಸ್ಥಾನಗಳ ಎರಡೂ ಪಕ್ಷಗಳ ನಡುವೆ ಇನ್ನೂ ನಿರ್ಣಯವಾಗದಿದ್ದ ಮುದ್ದೆಗಳನ್ನು ಅಧಿಕೃತವಾಗಿ ಚರ್ಚಿಸಲು ಎರಡೂ ಸರಕಾರಗಳ ಪ್ರತಿನಿಧಿಗಳ ಸಭೆಯು ಮಾರ್ಚ ೧೧ನೇ ತಾ. ಗೆ ಲಾಹೋರದಲ್ಲಿ ಸೇರಲಿದೆ. ನಿರಾಶ್ರಿತರ ಆಸ್ತಿಯ ಅವಲಂಬನದ ಪ್ರಶ್ನೆಯೂ ಚರ್ಚೆಗೆ ಬರಲಿದೆ.

ಹಿಂದುಸ್ಥಾನ ಸರಕಾರದವರು ತಾ. ೨೮ರಂದು ಒಂದು ವಿಶೇಷ ಗ್ಯಾಝೆಟ್ ಹೊರಡಿಸಿ ಮುಂಬಯಿ ಸರಕಾರಕ್ಕೆ ದಕ್ಷಿಣ ಸಂಸ್ಥಾನಗಳ ಆಡಳಿತ ವಹಿಸಿಕೊಳ್ಳಲು ಆವಶ್ಯವಿದ್ದ ಆಜ್ಞೆ ಹೊರಡಿಸುವ ಅಧಿಕಾರ ಕೊಟ್ಟಿದ್ದಾರೆ. ಇದೇ ಗ್ಯಾಝೆಟಿನಲ್ಲಿ ಬಂಗನಪಲ್ಲಿ ಸಂಸ್ಥಾನದ ಆಡಳಿತ ವಹಿಸಿಕೊಳ್ಳಲು ಮದ್ರಾಸ ಸರಕಾರಕ್ಕೂ ಲೋಹರು ಸಂಸ್ಥಾನದ ಆಡಳಿತ ವಹಿಸಿಕೊಳ್ಳಲು ಪೂರ್ವ ಪಂಜಾಬ ಸರಕಾರಕ್ಕೂ ಅಧಿಕಾರ ಕೊಡಲಾಗಿದೆ.

ಯುಕ್ತಪ್ರಾಂತ

ಮಾಧ್ಯಮಿಕ ಶಾಲೆಗಳಲ್ಲಿಯ ೯ ನೇ ವರ್ಗದಿಂದ ೧೨ ನೇ ವರ್ಗದ ವರೆಗಿನ ಹುಡುಗರಿಗೆಲ್ಲ ಕಡ್ಡಾಯದ ಸೈನ್ಯ ಶಿಕ್ಷಣ ಕೊಡುವದಕ್ಕಾಗಿ ಒಂದು ಯೋಜನೆ ಸಿದ್ಧಪಡಿಸಲು ಯುಕ್ತಪ್ರಾಂತ ಸರಕಾರದವರು ನಿರ್ಧರಿಸಿದ್ದಾರೆ.

ಅಖಿಲ ಭಾರತ ಮೋಮಿನ ಪರಿಷತ್ತಿನ ಕಾರ್ಯ ಸಮಿತಿಯ ಸಭೆಯು ಶ್ರೀ ಅಬ್ದುಲ ಕೈಯುಂ ಅನಸಾರಿಯವರ ಅಧ್ಯಕ್ಷತೆಯಲ್ಲಿ ಪಾಟಣಾದೊಳಗೆ ಸೇರಿ ಮೋಮಿನ ಮತ್ತು ಹಿಂದುಳಿದ ಮುಸಲ್ಮಾನರ ಸಾಮಾಜಿಕ ಆರ್ಥಿಕ ಉನ್ನತಿಗಾಗಿ ಹೆಣಗಬೇಕಲ್ಲದೆ ರಾಜಕಾರಣದಲ್ಲಿ ತಲೆ ಹಾಕಬಾರದೆಂದು ನಿರ್ಣಯಿಸಿತು.

ಕಲಕತ್ತಾ

ಪಾಕಿಸ್ತಾನ ಘಟನಾ ಸಮಿತಿಯಲ್ಲಿ ಉರ್ದು ಬಂಗಾಲಿ ಭಾಷೆಗಳ ಬಗ್ಗೆ ಆದ ಚರ್ಚೆಯ ಬಗ್ಗೆ ಶ್ರೀ ಎಚ್. ಎಸ್. ಸುಹ್ರವರ್ದಿಯವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ ಹೀಗೆ ನುಡಿದಿದ್ದಾರೆ. ಶಾಲೆಯಲ್ಲಿ ಉರ್ದು ಗೌಣ ಭಾಷೆಯೆಂದು ಶಿಕ್ಷಣ ಕೊಡಬೇಕು. ಆದರೆ ಬಂಗಾಲಿಯು ಪೂರ್ವ ಪಾಕಿಸ್ತಾನದ ದೇಶ ಭಾಷೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಪಾಕಿಸ್ತಾನದ ಇತರ ಪ್ರಾಂತಗಳೊಡನೆ ನಿಕಟ ಸಂಬಂಧ ಬೆಳೆಯಿಸಲು ಪಶ್ಚಿಮ ಪಾಕಿಸ್ತಾನದ ಶಾಲೆಗಳಲ್ಲಿಯೂ ಬಂಗಾಲಿಯ ಶಿಕ್ಷಣ ಕೊಟ್ಟರೆ ಒಳಿತಾಗುವದು.

ಹಿಂದುಸ್ಥಾನದಲ್ಲಿ ಸಂಚರಿಸುತ್ತಿದ್ದ ನೇಪಾಳದ ಮುಖ್ಯ ಮಂತ್ರಿಗಳಾದ ಶ್ರೀ ಪದ್ಮಶಾಮ ಶೇರ ಜಂಗ ಬಹದ್ದೂರ ರಾಣಾ ಅವರು ಒಂದು ಸಂದರ್ಶನದಲ್ಲಿ ಮಹಾತ್ಮರ ನಿಧನದ ಬಗ್ಗೆ ಅಪಾರ ದುಃಖವನ್ನು ವ್ಯಕ್ತಗೊಳಿಸಿ ಮಹಾತ್ಮರಿಗೆ ಗೌರವ ಸಲ್ಲಿಸಲು ಚಿತಾಭಸ್ಮ ವಿಸರ್ಜನೆಯ ದಿನ ನೇಪಾಳ ಸಂಸ್ಥಾನದಲ್ಲಿ ೧೪ ಸಾವಿರ ಬಡ ಜನರಿಗೆ ಊಟಕ್ಕೆ ಹಾಕಲಾಯಿತೆಂದು ಹೇಳಿದರು.

ಹಿಂದುಸ್ಥಾನದ ಕಮ್ಯುನಿಷ್ಟ ಪಕ್ಷದ ಸಭೆಯು ತಾ. ೨೮ಕ್ಕೆ ಕಲಕತ್ತೆಯಲ್ಲಿ ಪ್ರಾರಂಭವಾಯಿತು. ಹಿಂದುಸ್ಥಾನದ ಬೇರೆ ಬೇರೆ ಭಾಗಗಳಿಂದ ೮೦೦ ಪ್ರತಿನಿಧಿಗಳು ಈ ಸಭೆಗೆ ಬಂದಿದ್ದರು. ಯುಗೋಸ್ಲೋವಿಯಾ ಆಸ್ಟ್ರೇಲಿಯಾ, ಬ್ರಹ್ಮದೇಶಗಳಿಂದ ೧೫ ಜನ ಪ್ರತಿನಿಧಿಗಳು ಬಂದಿದ್ದರು. ಶ್ರೀ ಮುಜಫರ ಅಹಮ್ಮದ, ಶ್ರೀ ಎಸ್ ಎ ಡಾಂಗೆ, ಶ್ರೀ ಗುರುಮುಖಸಿಂಗ, ಶ್ರೀ ಮಹಮ್ಮದ ಇಸ್ಮಾಯಿಲ, ಶ್ರೀ ಎಸ್ ಎಸ್ ಮಿರಜಕರ ಮತ್ತು ಶ್ರೀ ಸುಂದರಂ ಇವರಿಂದ ಕೂಡಿದ ಅಧ್ಯಕ್ಷ ಮಂಡಲವಿರಬೇಕೆಂದು ನಿರ್ಣಯವಾಯಿತು.

ಬಂಗಾಲ ರಾಷ್ಟ್ರೀಯ ವಣಿಕ್ ಸಂಘದ ಅಧ್ಯಕ್ಷರಾದ ಶ್ರೀ. ಡಿ. ಎನ್. ಸೇನರು, ಹೊಸ ಮುಂಗಡ ಪತ್ರಿಕೆಯಿಂದ ಖಾಸಗಿ ಉದ್ದಿಮೆದಾರರಿಗೆ ಪ್ರೋತ್ಸಾಹ ಸಿಕ್ಕಿದೆಯೆಂದೂ ಇದರಿಂದ ಉತ್ಪಾದನೆ ಹೆಚ್ಚಿಸಲು ಅನುಕೂಲವಾಗಿದೆಯೆಂದೂ ಹೇಳಿ ಕೇಂದ್ರ ಸರಕಾರದ ಅರ್ಥ ಸಚಿವರನ್ನು ಅಭಿನಂದಿಸಿದ್ದಾರೆ.

ಹಿಂದುಸ್ಥಾನ ಕಮ್ಯುನಿಷ್ಟ ಪಕ್ಷದ ಕಾಂಗ್ರೆಸ್ಸು ಮಹಾತ್ಮರ ಪುಣ್ಯ ಸ್ಮರಣೆಗೆ ಗೌರವಸಲ್ಲಿಸುವ ಒಂದು ಗೊತ್ತುವಳಿ ಸ್ವೀಕರಿಸಿತು.

ಹಿಂದುಸ್ಥಾನ ವಣಿಕ್ ಸಂಘದ ಅಧ್ಯಕ್ಷರಾದ ಶ್ರೀ. ಕೆ. ಪಿ. ಗೋಯಂಕಾರವರು ಕೇಂದ್ರದ ಅರ್ಥಸಚಿವರಾದ ಶ್ರೀ. ಷಣ್ಮುಖಂ ಚೆಟ್ಟಿಯಾರರನ್ನು ಉತ್ತಮ ಮುಂಗಡ ಪತ್ರಿಕೆ ಸಿದ್ಧಪಡಿಸುವಲ್ಲಿ ತೋರಿದ ಮುತ್ಸದ್ದಿತನಕ್ಕೆ ಅಭಿನಂದಿಸಿದ್ದಾರೆ.

ಪಶ್ಚಿಮ ಬಂಗಾಲದ ಗವ್ಹರ್ನರರಾದ ಶ್ರೀ ರಾಜಗೋಪಾಲಾಚಾರ್ಯರು ವಂಗೀಯ ಆಯುರ್ವೇದ ಸಮ್ಮೇಲನವನ್ನು ಉದ್ಘಾಟಿಸುತ್ತ ಆಯುರ್ವೇದದ ಮಹತ್ವವನ್ನು ವೈದ್ಯರಿಂದಲೇ ಅರಿಯಬೇಕು ಎಂದು ಹೇಳಿದರಲ್ಲದೆ ಆಯುರ್ವೇದದ ವೈಜ್ಞಾನಿಕ ಸಂಶೋಧನೆಯಲ್ಲಿ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಎಲ್ಲ ಬಗೆಯ ಸಹಾಯವನ್ನೂ ಕೊಡುವವೆಂದು ಅಶ್ವಾಸನ ಕೊಟ್ಟರು.

ಸರಕಾರಿ ಪೂರೈಕೆ ಖಾತೆಯವರು ಯುದ್ಧ ಕಾಲದಲ್ಲಿ ತಮಗೆ ತುಪ್ಪ ಪೂರೈಸಲು ಏಜಂಟರೆಂದು ನಿಯಮಿಸಿದ್ದ ಒಂದು ಕಂಪನಿಯ ೪ ಡೈರೆಕ್ಟರರಿಗೆ ಸರಕಾರಕ್ಕೆ ಮೋಸ ಮಾಡಿದ ಆರೋಪದ ಬಗ್ಗೆ ೪ ವರ್ಷ ಸಕ್ತಮ ಶಿಕ್ಷೆ ಮತ್ತು ೧ ಲಕ್ಷ ೫೪ ಸಾವಿರ ರೂ. ಗಳ ದಂಡ ವಿಧಿಸಲಾಗಿದೆ. ಇದರಂತೆ ಇತರ ದಲಾಲನಿಗೂ ೪ ವರ್ಷ ಸಕ್ತಮ ಶಿಕ್ಷೆ ಮತ್ತು ೧ ಲಕ್ಷ ೨೫ ಸಾವಿರ ದಂಡ ವಿಧಿಸಲಾಗಿದೆ.

ಕಲಕತ್ತಾದಲ್ಲಿ ಕೂಡಿದ ಯುವಕ ಪರಿಷತ್ತಿನ ಲ್ಲಾದ ಸ್ಫೋಟದ ಸಂಬಂಧದಲ್ಲಿ ಅ. ಭಾ. ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಅರವಿಂದ ಬೋಸ ಮತ್ತು ಅವರ ತಮ್ಮ ರಣಜಿತ ಬೋಸ ಹಾಗೂ ಉಳಿದ ೧೦ ಜನರು ಬಂಧಿತರಾಗಿದ್ದಾರೆ. ತಮ್ಮನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತಿಲ್ಲವೆಂದು ಅರವಿಂದ ಬೋಸರು ತಕರಾರು ಮಾಡಿದರು.

ಮಧ್ಯಪ್ರಾಂತ

ಮಧ್ಯ ಪ್ರಾಂತ ಮತ್ತು ವರ್ಹಾಡದ ಟ್ರೇಡ ಯೂನಿಯನ್ ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಆರ್. ಎಸ್. ರುಯಿಕರರು ಒಂದು ಸಂದರ್ಶನದಲ್ಲಿ, ಪ್ರಾಂತಿಕ ಸರಕಾರವು ತಳೆದ ಕೂಲಿಕಾರ ಧೋರಣವನ್ನು ವಿರೋಧಿಸಲೆಂದು ಮಾರ್ಚ ೧೬ಕ್ಕೆ ಒಂದು ದಿನದ ಸಾಂಕೇತಿಕ ಸಂಪನ್ನು ಹೂಡಲು ಸಭೆಯು ನಿರ್ಧರಿಸಿರುವದಾಗಿ ಹೇಳಿದರು. ಪ್ರಾಂತದ ಕಣ ಮತ್ತು ಬಟ್ಟೆಯ ಉದ್ಯೋಗದ ೧ ಲಕ್ಷ ಕೂಲಿಕಾರರು ಸಂಪಿನಲ್ಲಿ ಭಾಗವಹಿಸಲಿರುವರೆಂದೂ ಶ್ರೀ ರುಯಿಕರರು ಅರುಹಿದರು.

ಪಾಕಿಸ್ತಾನ

ಸಿರಿವಂತರನ್ನು ಸಮಾಧಾನ ಪಡಿಸುವ ದೃಷ್ಟಿಯಿಂದ ಪಾಕಿಸ್ತಾನ ಸರಕಾರವು ಬಡವರನ್ನು ಸುಲಿಯುತ್ತಿದೆಯೆಂಬುದು ಪಾಕಿಸ್ತಾನದ ಅರ್ಥ ಸಚಿವರಾದ ಗುಲಾಮಮಹಮ್ಮದರ ಮುಂಗಡ ಪತ್ರಿಕೆಯಿಂದ ಸ್ಪಷ್ಟವಾಗುತ್ತದೆ ಎಂದು ಪಾಕಿಸ್ತಾನ ಇಸ್ಲಾಮಿಕ್ ಕೌನ್ಸಿಲ್ಲಿನ ಅಧ್ಯಕ್ಷರೂ ಮತ್ತು ಪಾಕಿಸ್ತಾನ ಸಮತಾವಾದಿ ಪರಿಷತ್ತಿನ ಆಮಂತ್ರಕರೂ ಹೇಳಿದ್ದಾರೆ.

ತರುಣಿಯರ ಆರೋಗ್ಯ

ಬರೆದವರು ಆಯುರ್ವೇದ ವಿದ್ವಾನ್ ವಿನಾಯಕರಾವ ಬಾಪಟ್ ಪ್ರಕಾಶಕರು ಸಾಧನ ಪ್ರಕಟನಾಲಯ, ಸಾಗರ, ಶಿವಮೊಗ್ಗ. ಪುಟ ೧೪೮, ಬೆಲೆ ರೂ. ೨।—


ಮುನ್ನುಡಿಯಲ್ಲಿ ಡಾ. ಮಿಸ್. ಎಂ. ಸಿ. ಅಲ್ಬುಕರ್ಕರು ಹೇಳಿದಂತೆ ಈ ಪುಸ್ತಕದಲ್ಲಿ ಸ್ತ್ರೀಯು ಯೌವನಾವಸ್ಥೆಯಲ್ಲಿ ಅವಳ ದೇಹ ಮತ್ತು ಮನಸ್ಸುಗಳಲ್ಲಿ ಆಗುವ, ಆಗಬಹುದಾದ ಮಾರ್ಪಾಟುಗಳನ್ನೂ ಆ ವೇಳೆಯಲ್ಲಿ ಅವಳು ಹೇಗೆ ನಡೆದುಕೊಳ್ಳಬೇಕೆಂಬುದನ್ನೂ ಸೂಕ್ಷ್ಮವಾಗಿಯೂ ಸುಲಭ ಪದಗಳಲ್ಲಿಯೂ ವಿವರಿಸಲಾಗಿದೆ. ಜೀವನದ ಅತಿ ಸಾಧಾರಣವಾದ ವಿಷಯಗಳಲ್ಲಿಯೂ ನಿಜಾಂಶವು ತಿಳಿಯದೆ ದುಃಖಕ್ಕೊಳಗಾಗುವ ಸ್ತ್ರೀಯರು ಎಷ್ಟೋ ಮಂದಿ ಇದ್ದಾರೆ. ಇಲ್ಲಿ ೧೪ ಅಧ್ಯಾಯಗಳಲ್ಲಿ ವಿಸ್ತರಿಸಲಾದ ಗರ್ಭ, ಮಾಸಿಕ ಸ್ರಾವ, ವಿವಾಹದ ಪರಿಣಾಮ, ರತಿಕ್ರಮ, ಹೆರಿಗೆ, ಶಿಶು ಸಂರಕ್ಷಣೆ, ಮಾನಸಿಕ ಆರೋಗ್ಯ, ಸ್ತ್ರೀರೋಗ, ಗರ್ಭ ನಿರೋಧ ಮುಂತಾದ ಆದರ್ಶ ಗೃಹಿಣೀತ್ವ ಸಾಧಕವಾದ ಅರಿವನ್ನು ಕಲಿತು ಮಾತೃತ್ವವನ್ನು ನಿರ್ವಹಿಸಿ ತರುಣಿಯರು ಸಂಸಾರವನ್ನು ಸುಗಮವಾಗಿ ಸಾಗುವಂತೆ ಮಾಡಬಹುದು. ಈ ಅರಿವಿಲ್ಲದೇ ಎಷ್ಟೋ ತರುಣಿಯರು ತಮ್ಮ ಮತ್ತು ತಮ್ಮ ಗಂಡಂದಿರ ಜೀವನವನ್ನು ನಿರಸಗೊಳಿಸುತ್ತಾರೆ. ಈ ಅರಿವು ಗಂಡಸಿಗೂ ಬೇಕು: ಆದರೆ ಹೆಂಗಸಿಗೆ ಅನಿವಾರ್ಯವಾಗಿ ಬೇಕು. ಏಕೆಂದರೆ ಆಕೆಯಿಂದು ಏನೂ ತಿಳಿಯದವಳೆಂಬ ವಾದವನ್ನು ಆಧರಿಸಿ ಸಂಸಾರದಲ್ಲಿ ತನಗಾಗುವ ದೈಹಿಕ ಮತ್ತು ಮಾನಸಿಕ ಹಿಂಸೆಗಳಿಗೆಲ್ಲ ಗಂಡಸೇ ಕಾರಣನೆಂದು ಅವನನ್ನು ದೂರಿಕೊಳ್ಳುವುದು ಹುಚ್ಚಿನಷ್ಟು ಹೆಚ್ಚಾಗಿ ಹರಡಿದೆ. ಇದು ಶುದ್ಧ ಮೂರ್ಖತನ, ಹುಡುಗಿಯರಿಗೆ ತಾಯ್ತಂದೆಗಳು ವಿವಾಹಕ್ಕೆ ಮುಂಚೆ ಸತೀತ್ವ ಮಾತೃತ್ವ ಧರ್ಮಗಳ ಪರಿಚಯವನ್ನು ತಾವಾಗಲಿ, ಆಪ್ತರಿಂದಾಗಲಿ, ಪುಸ್ತಕಾದಿಗಳ ಮುಖಾಂತರವಾಗಿಯಾಗಲಿ ಮಾಡಿಸಿಕೊಡದಿದ್ದರೆ ಅವರು ಸಮಾಜ ಘಾತಕರೆಂದೇ ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ ಪುಸ್ತಕ ಬಹಳ ಉಪಯೋಗಿಯಾಗಿದೆ. ಇದರಲ್ಲಿ ಶಾಸ್ತ್ರೀಯವಾಗಿ ಸ್ತ್ರೀಯರ ದೇಹಕ್ಕೆ ಸಂಬಂಧಿಸಿದ ಸಾಮಾನ್ಯ ಸಮಸ್ಯೆಗಳನ್ನು ಬಹಳ ಸರಳವಾಗಿ ವಿವರಿಸಲಾಗಿದೆ. ಕನ್ನಡ ತರುಣಿಯರಿಗಿದೊಂದು ಸ್ತ್ರೀ ಧರ್ಮದ ಕೈಪಿಡಿಯಾಗಬಹುದಾಗಿದೆ. ಆದುದರಿಂದ ಕನ್ನಡಿತಿ ಕನ್ನಡಿಗರೆಲ್ಲರೂ ಇದಕ್ಕೆ ಹಾರ್ದಿಕ ಸ್ವಾಗತವಿತ್ತು ತಂತಮ್ಮ ದಾಂಪತ್ಯ ಜೀವನದಲ್ಲಿ ಹೆಚ್ಚು ಸುಖಪಡೆವ ಹಾದಿಯನ್ನು ಕಂಡುಕೊಳ್ಳುವರೆಂದು ಆಶಿಸಲಾಗಿದೆ.

ವಾಹಿನಿ

ಸಂಪಾದಕರು ಮತ್ತು ಪ್ರಕಾಶಕರು, ಎಂ. ಎಸ್. ಚಿಂತಾಮಣಿ, ಬಿ. ಎಸ್. ಸಿ. ೧೧ ಅ, ಜಯಚಾಮರಾಜೇಂದ್ರ ರೋಡ ಬೆಂಗಳೂರ ೨ ಪುಟಗಳು ೧೭೫, ಬೆಲೆ ೧ ರೂಪಾಯಿ

ಇದು ಈ ಪತ್ರಿಕೆಯ ದ್ವಿತೀಯ ವಾರ್ಷಿಕ ಸಂಚಿಕೆ. ರಕ್ಷಾಪತ್ರದ ಮೇಲೆ ವರ್ಣರಂಜಿತವಾದ ಲಾಸ್ಯಭಂಗಿಯಲ್ಲಿರುವ ಶಿವಪಾರ್ವತಿಯರ ಚಿತ್ರವಿದೆ. ಹಿನ್ನೆಲೆಗೆಲ್ಲ ರಕ್ತವರ್ಣ ಬಳಿದುದು ಲೀಲಾಲಾಸ್ಯಕ್ಕೆ ಅಷ್ಟೊಂದು ಉಚಿತವಲ್ಲ. ಶಿವನ ಮುಖದಲ್ಲಿ ಸಮಯೋಚಿತ ಭಾವದರ್ಶನವಿಲ್ಲ. ಅಚ್ಚಿನ ಸೊಬಗನ್ನು ನೋಡುವದಿದ್ದರೆ ಈ ಸಂಚಿಕೆಯ ಪುಟಗಳನ್ನು ಮಗುಚಬೇಕು. ಅಗಲಿಕೆ ಎಂಬ ತ್ರಿವರ್ಣ ಚಿತ್ರ ತುಂಬ ಸೊಗಸಾಗಿದೆ. ಶ್ರೀಮತಿ ತಾರಾ ಚೌಧರಿಯವರ ಕುಣಿತದ ಒಂದು ಭಂಗಿಯ ಭಾವಚಿತ್ರವೂ ಮನೋಹರವಾಗಿದೆ. ಕಲಾವಿದೆ ಎಂಬ ಕತೆಗೆ ಹಾಕಿದ ರೇಖಾಚಿತ್ರವೂ ಉತ್ತಮವಾಗಿದೆ. ಸಂಚಿಕೆಯ ಅನೇಕ ಪುಟಗಳು ದ್ವಿವರ್ಣದಲ್ಲಿ ಮುದ್ರಿತವಾಗಿವೆ. ಕನ್ನಡ ಪತ್ರಿಕೆಗಳಲ್ಲಿ ಈ ಬಗೆಯ ವರ್ಣವೈಭವವನ್ನು ಕಾಣುವದು ಅಪರೂಪವೇ.

ಹೊರ ಚೆಲ್ವಿಕೆಯಂತೆ ಪತ್ರಿಕೆಯ ಒಳ ಹೂರಣವೂ ಸ್ವಾದಿಷ್ಟವಾಗಿದೆ. ಹೆಸರುವೆತ್ತ ಲೇಖಕರೇ ಇದಕ್ಕೆ ತಿರುಳೊದವಿಸಿದ್ದಾರೆ. ಕವನಗಳು ಬೇರೆ ಬೇರೆ ವಿಷಯಗಳನ್ನು ಕುರಿತ ಲೇಖನಗಳು ಹಾಸ್ಯ, ರೂಪಕ ಹೀಗೆ ರುಚಿ ರುಚಿ ಪದಾರ್ಥಗಳಿವೆ. ಈ ವರ್ಷದ ಸಾಹಿತ್ಯ ಸೃಷ್ಟಿ ಎಂಬ ವಿಭಾಗದಲ್ಲಿ ಸಮಾಲೋಚಕ ಲೇಖನಗಳು ವೈಶಿಷ್ಟ್ಯಪೂರ್ಣವಾಗಿವೆ. ೧೯೪೭ರ ಸಣ್ಣ ಕತೆ, ಕವನಗಳು, ನಾಟಕಗಳು, ಕಾದಂಬರಿಗಳು ಯಾವು ಯಾವು ಹಾಗೂ ಅವು ಹೇಗೆ ಹೇಗಿವೆ ಎಂಬುದರ ವಿಮರ್ಶೆಯನ್ನು ಓದಲು ಸಾಹಿತ್ಯದಲ್ಲಿ ಅಭಿಲಾಷೆ ಇದ್ದವರಿಗೆ ಬೇಕೆನ್ನಿಸದಿರದು. ...ಕೆ ಅಲ್ಲಲ್ಲಿಯ ಅಚ್ಚಿನ ದೋಷಗಳನ್ನು ಬಿಟ್ಟರೆ ಸಂಚಿಕೆಯು ಸರ್ವಾಂಗ ಸುಂದರವೆನ್ನಬಹುದು. ವಾಹಿನಿಯ ಈ ಸಚಿತ್ರ ವಾರ್ಷಿಕ ಸಂಚಿಕೆಯನ್ನು ನಾವು ಆದರದಿಂದ ಸ್ವಾಗತಿಸುವದಲ್ಲದೆ ಮುಂಬರುವ ಪ್ರಕಟನೆಗಾಗಿ ಈ ಪತ್ರಿಕೆಯ ಸಂಚಾಲಕರನ್ನು ಅಭಿನಂದಿಸುತ್ತೇವೆ.



ಶಂಖವಾದ್ಯ

ಬರೆದವರು ಶ್ರೀ. ನಾ. ಕಸ್ತೂರಿ, ಎಂ. ಎ. ಅವರು ಪ್ರಕಾಶಕರು ಉಷಾಸಾಹಿತ್ಯ ಮಾಲೆ: ಮೈಸೂರು ಪುಟ ೧೪೩, ಬೆಲೆ ರೂ. ೧॥.

'ಶಂಖವಾದ್ಯ'ವೊಂದು ಸಾಮಾಜಿಕ ಕಾದಂಬರಿ. ಕಸ್ತೂರಿಯವರ ಹಾಸ್ಯ ಮಿರಿಮಿಳ ಎಲ್ಲೆಲ್ಲೂ ತುಂಬಿದೆ. ಮಾನವನ ಮನೋದೌರ್ಬಲ್ಯಗಳ ವ್ಯಂಗ್ಯವಾದ ಲೇವಡಿಯ ಸುರಿಮಳೆ ಇದರಲ್ಲಿದೆ. ಕಥಾನಾಯಕನಾದ ಮಹೋಬಲ್ಲವನ್ನು ಬಹಳ ಸೊಗಸಾಗಿ ಚಿತ್ರಿಸಿದ್ದಾರೆ. ಅವನ ನೀಲಿ ಸೂಟಿನ ಮೋಹ, ಆಫೀಸಿನ ವೈಚಿತ್ರ್ಯ, ಅಡಿಗೆ ಮನೆಯ ವೃತ್ತಾಂತ, ಗೋಡೆ ಮಗ್ಗುಲಿಗೆ ಅತುಕೊಂಡು ಮಾಡುವ ವ್ಯಾಯಾಮ ಮುಂತಾದ ಹಲವಾರು ಸಂಗತಿಗಳು ಸರಳವಾದ ಶೈಲಿಯಲ್ಲಿ ವಿನೋದಾತ್ಮಕವಾಗಿ ಚಿತ್ರಿತವಾಗಿವೆ. ಪಾತ್ರಗಳಲ್ಲಿ ಮಾನವ ಸಹಜವಾದ ಮನೋದೌರ್ಬಲ್ಯಗಳು ಹೇಗೆ ಕೆಲಸ ಮಾಡುವುವೆಂಬುದನ್ನು ಸ್ಪಷ್ಟವಾಗಿ ಕಾಣಬಹುದು. ಕುಟುಂಬ ಜೀವನದಲ್ಲಿ ಅಂಕುಡೊಂಕು, ವಕ್ರತೆ ವಿಕೃತತೆಗಳ ನಡುವೆಯೂ ಮಾಧುರ್ಯವಿರುವುದನ್ನೂ ಗ್ರಂಥಕರ್ತರು ಚೆನ್ನಾಗಿ ನಿದರ್ಶಿಸಿದ್ದಾರೆ. ಇಂತಹ ಸರಸ ಪ್ರಬಂಧವನ್ನು ಬರೆದು ಶ್ರೀ. ಕಸ್ತೂರಿಯವರು ಕನ್ನಡಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳು.

ನಮ್ಮ ಉಡುಪಿ

ಲೇಖಕರು, ಕೊರಡ್ಕಲ್ ಶ್ರೀನಿವಾಸರಾವ. ಪ್ರಕಾಶಕರು, ನವಭಾರತ ಪುಸ್ತಕ ಭಾಂಡಾರ ಉಡುಪಿ.

ಪುಟಗಳು ೯೩   ಬೆಲೆ ೧೨ ಆಣೆ.

ಈ ಪುಸ್ತಕವು ಉಡುಪಿ ಕ್ಷೇತ್ರದ ಬಗ್ಗೆ ಎಲ್ಲ ವಿವರಗಳನ್ನೂ ತಿಳಿಸುತ್ತದೆ. ಉಡುಪಿಗೆ ಹೊಸದಾಗಿ ಹೋಗಬೇಕೆನ್ನುವವರು ಅಗತ್ಯ ಈ ಪುಸ್ತಕವನ್ನು ಒಮ್ಮೆ ಓದುವದಲ್ಲದೆ ಇದರ ಒಂದು ಪ್ರತಿಯನ್ನು ಹತ್ತಿರ ಇಟ್ಟುಕೊಂಡು ಯಾತ್ರೆಯನ್ನು ಒಳ್ಳೆ ಸಮಾಧಾನಕರವಾಗಿ ನೆರವೇರಿಸಬಹುದು. ಅಷ್ಟಮಠಗಳು ಹೇಗೆ ಉಂಟಾದವು ಎಂಬ ವಿವರವೂ ದ್ವೈತ ಮತ ಸ್ಥಾಪಕರಾದ ಮಧ್ವಾಚಾರ್ಯ ಮತ್ತು ವಾದಿರಾಜ ಮೊದಲಾದ ವಿಖ್ಯಾತ ಮಹಾತ್ಮರ ಜೀವನ ಚರಿತ್ರಗಳೂ ಅನೇಕ ಚಿತ್ರಗಳೂ ಪುಸ್ತಕಕ್ಕೆ ಒಳ್ಳೆ ರುಚಿ ತಂದಿವೆ. ಭಾಷೆ ಸುಲಭವಾಗಿದ್ದು ಶೈಲಿಯೂ ಚನ್ನಾಗಿದೆ. ಮುದ್ರಣ ಅಂದವಾಗಿದೆ ಕನ್ನಡ ನಾಡಿನ ಈ ನಿಸರ್ಗರಮಣೀಯ ಕ್ಷೇತ್ರವನ್ನು ಒಮ್ಮೆಯಾದರೂ ನೋಡಬೇಕೆಂದು ಈ ಪುಸ್ತಕ ಓದಿದ ನಂತರ ಮನಸ್ಸಿಗೆ ತುಂಬ ಆಶೆಯುಂಟಾಗುತ್ತದೆ.

ಬಾಷ್ಪಾಂಜಲಿ

ಅರ್ಪಿಸಿದವರು, ಟಿ. ಎಸ್. ಮಹಾದೇವಯ್ಯ, ಬಿ. ಎಸ್. ಸಿ. ತಾಲೂಕ ಶಿರಸ್ತೆದಾರ ಮೈಸೂರ ಪುಟಗಳು ೮ ಬೆಲೆ ?

ಮಹಾತ್ಮರ ಮರಣದಿಂದಾದ ಕಷ್ಟ ದುಃಖವನ್ನು ಶ್ರೀ. ಮಹಾದೇವಯ್ಯನವರು ಒಂದು ಸುನೀತದಿಂದಲೂ ಚಿಕ್ಕ ಒಂದು ಲೇಖದಿಂದಲೂ ವ್ಯಕ್ತಪಡಿಸಿದ್ದಾರೆ.

ತೆಕ್ಕಟ್ಟೆ ಬಡವಿದ್ಯಾರ್ಥಿ ಸಂಘದ ವರದಿ (ದ. ಕ.)

ಬಡ ಹುಡುಗರಿಗೆ ಪುಸ್ತಕ ಪಾಟಗಳನ್ನು ಸಹ ಒದಗಿಸಿ ಈ ಸಂಸ್ಥೆ ಬಡವರ ವಿದ್ಯಾಭಿವೃದ್ಧಿಗೆ ಹೆಣಗುತ್ತದೆ. ಬಾಲ್ಯಾವಸ್ಥೆಯಲ್ಲಿರುವ ಈ ಸಂಸ್ಥೆಗೆ ಸ್ಥಳಿಕ ಧನಿಕರು ಉದಾರ ಹಸ್ತದಿಂದ ಸಹಾಯ ಕೊಡುವರಾಗಿ ನಂಬಿದ್ದೇವೆ. ವರದಿಯಲ್ಲಿ ಚಿಕ್ಕ ಸಂಭಾಷಣೆಯ ದೃಶ್ಯವೊಂದಿದ್ದು ಈ ಸಂಸ್ಥೆಗೆ ಸಹಾಯ ಸಲ್ಲಿಸುವದು ಯುಕ್ತವೆಂಬುದನ್ನು ಕಣ್ಣಿಗೆ ಕಟ್ಟುವಂತೆ ಪ್ರತಿಬಿಂಬಿಸುತ್ತದೆ.

ಬಾಪೂ ಗೋಖಲೆ

ಬರೆದವರು ಶ್ರೀ. ಗೋ. ವೆ. ಚುಳಕಿ, ಪ್ರಕಾಶಕರು ಶ್ರೀ. ದಿ. ಜಿ. ಅವಧಾನಿ, ಮಿಂಚಿನಬಳ್ಳಿ ಧಾರವಾಡ. ಪುಟ ೯೦. ಬೆಲೆ ೧೪ ಆಣೆ.

'ಬಾಪೂ ಗೋಖಲೆ' ಎಂಬುದು ಒಂದು ಜೀವನವೃತ್ತಾಂತ ಶ್ರೀ. ಗೋಖಲೆಯವರ ದೇಶಭಕ್ತಿ, ಸ್ವಾರ್ಥ ತ್ಯಾಗ ಇತ್ಯಾದಿಗಳನ್ನೊಳಗೊಂಡ ಉತ್ತಮ ಐತಿಹಾಸಿಕ ಅಂಶಗಳನ್ನು ಇಲ್ಲಿ ಒಡಮೂಡಿಸಲಾಗಿದೆ. ದೇಶಪ್ರೇಮಿಗಳಿಗೆ ಇದು ಅತ್ಯಂತ ಸ್ಫೂರ್ತಿದಾಯಕವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಎಲ್ಲರೂ ಇದನ್ನು ಓದಿ ಲಾಭ ಪಡೆಯುವರೆಂದು ಆಶಿಸಲಾಗಿದೆ.

ಪ್ರತಿ ಸರಕಾರ

ಬರೆದವರು — ಮಿರ್ಜಿ ಅಣ್ಣಾರಾಯರು. ಪ್ರಕಾಶಕರು ಲಲಿತ ಸಾಹಿತ್ಯ ಮಾಲೆ (ವರ್ಷ ೪ ಕುಡಿ ೪) ಬೆಲೆ ರೂ. ೧-೧೨-೦ ಪುಟ ೧೩೬,

ಇದು ಸಾತಾರೆಯ ಆವರಣವನ್ನಿಟ್ಟುಕೊಂಡು ಬರೆದ ಒಂದು ಕ್ರಾಂತಿರಂಗದ ಚರಿತ್ರೆ. ಕಾಲ್ಪನಿಕವಾದ ಈ ಕಾದಂಬರಿಯಲ್ಲಿ ಪ್ರತಿ ಸರಕಾರವನ್ನು ಸ್ಥಾಪಿಸುವ ಪ್ರಯತ್ನವನ್ನು ವಿವರಿಸಲಾಗಿದೆ. ದೇಶಭಕ್ತರಿಗೆ ಆ ಮೂಲಕ ಓದಬೇಕೆನ್ನಿಸಬಹುದು. ಆದರೆ ರಸಿಕರು ಮಾತ್ರ 'ರಸಗಂಧವ್ಯಯಂ' ನಾಸ್ತಿ ಎನ್ನದಿರರು. ಆದರೆ ಇಲ್ಲಿಯ ಒಂದೇ ಒಂದು ಗ್ರಾಹ್ಯ ಸನ್ನಿವೇಶವೆಂದರೆ ತಂದೆಯ ಪುತ್ರವಾತ್ಸಲ್ಯದ ಪ್ರಕಾರಗಳು. ಪುಸ್ತಕ ನೋಡಲು ಮುದ್ದಾಗಿದೆ. ಸಹೃದಯರು ಓದಿ ಪರೀಕ್ಷಿಸಬಹುದು.

ಶ್ರೀ. ಚಿದಂಬರ ಸೇವಾ ಸಮಿತಿಯ ವಾರ್ಷಿಕ ವರದಿ (೧೯೪೭)

ಪ್ರಕಾಶಕರು, ಶ್ರೀ, ಗ. ಚಿ. ಇನಾಮದಾರ. ಶ್ರೀ. ಚಿದಂಬರ ಸೇವಾ ಸಮಿತಿ ಮುದಿಹಾಳ ಧಾರವಾಡ.

ಇದರಲ್ಲಿ ವರದಿಯಾದ ವರ್ಷದ ಕಾರ್ಯ ವಿವರಣೆಯಲ್ಲದೆ ಸಂಸ್ಥೆಗೆ ಸಹಾಯ ಸಲ್ಲಿಸಿದವರ ಹೆಸರಿನ ಪಟ್ಟಿಯೂ ಕೊಟ್ಟ ಹಣದ ವಿವರವೂ ಉಂಟು. ೧೯೪೭ ನೇ ಇಸ್ವಿಯಲ್ಲಿ ಸಂಸ್ಥೆ ೩೦೭೪ ರೂ. ವೆಚ್ಚ ಮಾಡಿದೆ. ಮತ್ತು ೧೦೧೦ ರೂ. ಉಳಿತಾಯದಲ್ಲಿಟ್ಟುಕೊಂಡಿದೆ. ಸಂಸ್ಥೆ ಉಪಯುಕ್ತ ಕಾರ್ಯ ಮಾಡುತ್ತಿದ್ದು ಎಲ್ಲರ ಸಹಾಯಕ್ಕೆ ತಕ್ಕುದಾಗಿದೆ.

ಕನ್ನಡ ನುಡಿ (ವಿಶೇಷಸಂಚಿಕೆ)

ಸಂಪಾದಕರು ಆಸ್ಥಾನ ವಿದ್ವಾನ್ ಮೋ. ಶಂ. ಸುಬ್ರಹ್ಮಣ್ಯ ಶಾಸ್ತ್ರಿಗಳು ಪ್ರಕಾಶಕರು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಪುಟ ೬೪, ಬೆಲೆ ರೂ. ೧.

'ಕನ್ನಡ ನುಡಿ'ಯು ೧೧ನೆಯ ವರ್ಷದಲ್ಲಿ ಕಾಲಿಟ್ಟ ಪ್ರಯುಕ್ತ ಈ ವಿಶೇಷಾಂಕವನ್ನು ಹೊರಡಿಸಲಾಗಿದೆ. ಇದರ ಮುಖಪತ್ರ ವರ್ಣರಂಜಿತವಾಗಿದೆ. ಇದರಲ್ಲಿ ಜೊತೆಗೆ 'ತಿರುನಾಲಿಯ ಮಹಿಮೆ', 'ಕನ್ನಡ ತಾಯ ಕೃಪೆ', ಧ್ವಜಗರ್ಜನೆ 'ಒಂದನೆನೆ', 'ಮಿಂಚುಹುಳು', 'ಕಬ್ಬು', 'ಓ ಸುಂದರ' ಎಂಬ ಉತ್ತಮ ಕವಿತೆಗಳೂ; ಸಾಹಿತ್ಯವನ್ನು ಸಾಹಿತ್ಯವೆಂದೇ ನೋಡತಕ್ಕದ್ದು, 'ಕನ್ನಡ ಸಾಹಿತ್ಯ ಪರಿಷತ್ತು', 'ಕಲಕಾಡಿನ ದೇವಾಲಯಗಳು', 'ಶಿವರಾತ್ರಿಯೋ ? ಜಿನರಾತ್ರಿಯೋ', 'ವಿದ್ಯಾಭ್ಯಾಸ ಕ್ರಮದಲ್ಲಿ ಆಗಬೇಕಾದ ಮಾರ್ಪಾಡುಗಳು', 'ಕನ್ನಡ ಸಾಹಿತ್ಯಕ್ಕೆ ಕ್ರೈಸ್ತರ ನೆರವು', ಸ್ತ್ರೀಯರೂ ಸ್ವಾತಂತ್ರ್ಯವೂ', 'ರೇಡಿಯೋ ರಂಗಭೂಮಿ', 'ಕನ್ನಡಿಗರ ಆತ್ಮಗೌರವ', 'ದಿನಬಳಕೆಯ ವಿಜ್ಞಾನ', 'ಕನ್ನಡ ಮಹಿಳೆಯರ ಪ್ರಗತಿ', 'ಸಾಮಾಜಿಕ ಸಾಹಿತ್ಯ', 'ಕನ್ನಡದ ಗುರಿ ಎತ್ತ ?' 'ಕ್ರಾಂತಿ' 'ಭೀತಿ ಮೀಮಾಂಸೆ',, 'ಸುವರ್ಣ ವೃಷ್ಟಿ' 'ಸ್ತ್ರೀಯರೂ ವಿಶ್ವವಿದ್ಯಾನಿಲಯ ಶಿಕ್ಷಣವೂ', 'ಕಪ್ಪು ಹುಡುಗಿ', 'ಅನುಭವ ಮಂಟಪ' 'ಕನ್ನಡದ ಮುನ್ನಡೆ ಎಂಬ ಉತ್ತಮ ಗದ್ಯ ಲೇಖನಗಳೂ ಇವೆ. ಈ ಸಾರಸ್ವತಸಾರದ ಸ್ವಾರಸ್ಯವನ್ನು ರಸಿಕರು ತಪ್ಪದೆ ಆಸ್ವಾದಿಸದಿರರೆಂದು ಹಾರೈಸುತ್ತೇವೆ.

ನವಯುಗ ಪಂಚಾಂಗ

ಪಂಚಾಂಗಕರ್ತರು, ಜ್ಯೋತಿಷ ಪಂಡಿತ. ಕೆ. ನರಸಿಂಹ ಉಪಾಧ್ಯಾಯರು. ಪ್ರಕಾಶಕರು, ನವಯುಗ ಪ್ರೆಸ್, ಉಡುಪಿ ಬೆಲೆ ೫ ಆಣೆ.

ವೈಜಯಂತೀ ಪಂಚಾಂಗ

ಪಂಚಾಂಗ ಸಂಪಾದಕರು, ವೆ. ಶಾ. ಸ. ನಾರಾಯಣಭಟ್ಟ ರಾಮಭಟ್ಟ ಜೋಶಿ, ಜಮಖಾನಕರ ವಿಜಾಪೂರ ಬೆಲೆ ೭ ಆಣೆ.

ಮೇಲಿನವೆರಡೂ ಸರ್ವಧಾರಿ ನಾಮಸಂವತ್ಸರದ ಪಂಚಾಂಗಗಳೇ. ಇವುಗಳು ಎಲ್ಲ ಉಪಯುಕ್ತ ವಿಷಯಗಳಿಂದ ಕೂಡಿದ ಕನ್ನಡ ನಾಡಿನ ನಾಮಾಂಕಿತ ಪಂಚಾಂಗಗಳೇ. ಇವಕ್ಕೂ ನಾವು ಆದರದ ಸ್ವಾಗತ ಕೋರುತ್ತೇವೆ.

ಸುಭಾಸ್ ಸೇನೆ

ಲೇಖಕರು, ಸಣ್ಣ ವೀರಭದ್ರಪ್ಪ, ಹರಿಹರ ಪ್ರಕಾಶಕರು, ಸಾಹಿತ್ಯ ಮಂದಿರ ಮೈಸೂರು. ಬೆಲೆ ೧೦ ಆಣೆಗಳು ಪುಟ ೫೪.

ಸುಭಾಸರ ಮತ್ತು ಅವರ ಆಜಾದ ಹಿಂದ ಫೌಜದ ಚಟುವಟಿಕೆಗಳ ಬಗ್ಗೆ ಸಾಕಷ್ಟು ವಿವರ ಈ ಪುಸ್ತಕದಲ್ಲಿ ಕೊಡಲಾಗಿದೆ. ಭಾಷೆ ಸಾಹಿತ್ಯ ದೃಷ್ಟಿಯಿಂದ ನಿರ್ದುಷ್ಟವಾಗಿಲ್ಲದಿದ್ದರೂ ಸ್ವಲ್ಪದರಲ್ಲಿ ಎಷ್ಟೋ ವಿಷಯ ತಿಳಿದು ಬರುವಂತಿದೆ.

ಸಾದರ ಸ್ವೀಕಾರ

ಹೀಗಿದೆ ಜಗತ್ತು

ಬರೆದವ, 'ಸಂಚಾರಿ' ಪ್ರಕಾಶಕರು ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ. ಪ್ರತಿ ದೊರೆವ ಸ್ಥಳ, ಶಂ. ಬಾ. ಮನಗೋಳಿ, ದಾಜಿಬಾನಪೇಟೆ ಹುಬ್ಬಳ್ಳಿ. ಪುಟಗಳು ೪೪. ಬೆಲೆ ೧ ರೂ.

ಕನ್ನಡ ಸಾಹಿತ್ಯ ಮತ್ತು ರಾಜಾಶ್ರಯ

ಬರೆದವರು, ಡಿ. ಎಲ್. ರಾಮು, ಪ್ರಕಾಶಕರು: ಎಸ್. ಎಸ್. ಎನ್. ಬುಕ್ ಡಿಪೋ ಬೆಂಗಳೂರು ನಗರ. [illegible] ಬೆಲೆ ೧೦ ಆಣೆ.

ಸಾಕ್ಷಾತ್ಕಾರ


ಲೇಖಕರು:- ಕುಲಕರ್ಣಿ ನಾರಾಯಣರಾಯರು, ಪ್ರಕಾಶಕರು- ರಂ. ರಾ. ದಿವಾಕರ, ಕರ್ನಾಟಕ ಶಿಕ್ಷಣ ಸಮಿತಿ ಹುಬ್ಬಳ್ಳಿ. ಪುಟಗಳು ೧೭೪, ಬೆಲೆ ೨-೪-೦.

ಮರುಭೂಮಿಯ ಅರಬರು

ಲೇಖಕರು- ಶ್ರೀ ಎಂ. ಹರಿದಾಸರಾವ ಪ್ರಕಾಶಕರು ಸಿಟಿ ಬುಕ್ ಸ್ಟಾಲ ಹುಬ್ಬಳ್ಳಿ. ಪುಟಗಳು ೯೫. ಬೆಲೆ ೧-೮-೦.

Gandhi Tagore and Nehru

By K.R. Kipalani Hind Kitabs Ltd. Bombay Pages 104. Price Rs. 1-8-0.



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಮಾರ್ಚ ೮ ರಿಂದ ೧೪ ರ ವರೆಗೆ

ಮೇಷ

ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಮಕ್ಕಳಲ್ಲಿ ಒಬ್ಬರ ವಿಶೇಷ ಉನ್ನತಿ. ದುಷ್ಟ ಆಪ್ತರು ಮತ್ತು ನೆರೆಯವರ ಎಲುಬು ತಾನಾಗಿಯೇ ಮುರಿಯುವ ಯೋಗ. ವಾಹನದಲ್ಲಿ ಅಪಘಾತ. ನೋಕರರಲ್ಲಿ ಒಬ್ಬರ ವಿಯೋಗದ ಸಂಭವ. ಬೆಂಕಿ ಮುಂತಾದ್ದರಿಂದ ಮನೆಮಾರಿನ ಇಲ್ಲವೆ ಕೋಟಿಪಟ್ಟಿಗಳ ಸ್ವಲ್ಪ ಹಾನಿಯು ಸಂಭವ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ತುಂಬ ಲಾಭ. ಆದರೆ ಪ್ರತಿಷ್ಠೆಯಲ್ಲಿ ವಿಘ್ನಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಲಕ್ಷ್ಯಾಲಕ್ಷ್ಯಿಯ ಪ್ರಸಂಗ. ಆದರೆ ಯಶಾಪಯಶಸ್ಸು ಅನಿರ್ಣಿತ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಭರಣಿಗೆ ತೊಂದರೆಯಿಂದಲೆ ಯಶಸ್ಸು. ತಾ. ೯, ೧೦, ೧೪ ಅನುಕೂಲ.

ವೃಷಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಬಹಳ ಕೆಡುವದು ಅಲ್ಲದೆ ಅವಳಿಂದ ಮೇಲಿಂದ ಮೇಲೆ ನಿಮ್ಮ ಉಪಮರ್ದ ನಡೆಯುವದು. ಮಕ್ಕಳಲ್ಲಿ ಒಬ್ಬರ ಉನ್ನತಿ. ಪ್ರಾಪಂಚಿಕ ಸುಖ ಸಾಮಾನ್ಯ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಯ ವಿಷಯದಲ್ಲಿ ಉದ್ಯೋಗಸ್ಥರಿಗೆ ಬಹಳ ಕೆಡಕು, ನೋಕರಿ ಮಾಡುವವರಿಗೆ ಮಾತ್ರ ಅಷ್ಟೇ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಆದರೆ ತೊಂದರೆ ಮತ್ತು ವೆಚ್ಚ ವಿಪರೀತ. ಮಿತ್ರಸುಖ ಅನುಕೂಲ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ರೋಹಿಣಿಗೆ ತೊಂದರೆ ಕಡಮೆ. ತಾ. ೯ [illegible] ಅನುಕೂಲ.

ಮಿಥುನ

ಪ್ರಕೃತಿ ಸಾಧಾರಣವೆ. ಹೆಂಡತಿ ಮತ್ತು ಮಕ್ಕಳ ಸುಖ ಅನುಕೂಲ. ಆದರೆ ಉಳಿದವರ ಗೂಡ ಕಲಹ. ಅಪ್ರಿಯ ಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಆದರೆ ಸಂಗ್ರಹದಲ್ಲಿ ಹಾನಿಯ ಪ್ರಸಂಗ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೂ ಸಮಾನ ಸ್ಥಿತಿ. ಸ್ಥಾವರದಲ್ಲಿ ಸ್ವಲ್ಪ ಅನುಕೂಲ ಘಟನೆಗಳು. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಆರಿದ್ರೆಗೆ ತೊಂದರೆ ಕಡಮೆ. ತಾ. ೧೧, ೧೩, ೧೪ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಮಕ್ಕಳು ಕುಲದ ಲೌಕಿಕವನ್ನು ಬೆಳಸುವಂಥ ದೊಡ್ಡದೊಂದು ಕೃತ್ಯವನ್ನೆಸಗುವರು;ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿಯ ಸೂತ್ರಗಳು ಎರಡನೆಯವರ ಕೈಯಲ್ಲಿ ಹೋಗುವದರಿಂದ ಅಲ್ಪಸ್ವಲ್ಪ ವಿವಂಚನೆ. ಆದರೆ ಪ್ರತಿಷ್ಠೆ ಮತ್ತು ಲಾಭ ಅನುಕೂಲವೆಂದೇ ಹೇಳಬೇಕಾಗುವದು. ಮಿತ್ರತ್ವದಲ್ಲಿ ವಿರೋಧ. ಹೆಂಡತಿಯಿಂದ ಮನಸ್ಸಿನ ವಿರುದ್ಧ ಮಾತುಗಳಲ್ಲಿ ಬಹಳ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷ ವಿಜಯಿಯಾಗುವದು ಇಲ್ಲವೆ ಹೆಚ್ಚು ಜೋರಿನಲ್ಲಿ ಬರುವದು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಪುಷ್ಯಕ್ಕೆ ತೊಂದರೆ ಕಡಮೆ. ತಾ. ೮, ೧೩, ೧೪, ೧೪ ಅನುಕೂಲ.

ಸಿಂಹ

ಹೆಂಡತಿಯ ಪ್ರಕೃತಿ ಕೆಡುವದು ಮತ್ತು ಎಲ್ಲದರಲ್ಲಿಯೂ ಅವಳದು ಓಕರಿಕೆ ಬರುವಂಥ ವರ್ತನೆ. ಮಕ್ಕಳ ಸುಖ ಅನುಕೂಲ ಆದರೆ ಉಳಿದ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಮೈದುನ ಭಾವಂದಿರು ಮತ್ತು ಸೋದರ ಅಳಿಯಂದಿರು ಮೊದಲಾದವರಿಂದ ಬಹಳ ಅಪಮಾನನಾಗುವ ಅಂಜಿಕೆ. ಉದ್ಯೋಗದಲ್ಲಿ ಪ್ರತಿಷ್ಠೆ ಅನುಕೂಲ. ಆದರೆ ಪ್ರಗತಿ ಮತ್ತು ಲಾಭದ ಹಿನ್ನಡೆ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಿಗಳದು ಒಂದು ಪಟ್ಟು, ಆದರೆ ನಿಮ್ಮದು ಇಮ್ಮಡಿ ಹಾನಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಪೂರ್ವಾಕ್ಕೆ ಹೆಚ್ಚು ತೊಂದರೆ. ತಾ. ೮, ೯, ೧೦, ೧೪ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಹೆಂಡತಿ ಗೂಡ ಮೇಲಿಂದ ಮೇಲೆ ವಿರೋಧ. ಮತ್ತು ಮನೆಯಲ್ಲಿ ಕಲಹದ ದುಶ್ಚಿಹ್ನ ನಡೆದೇ ಇದೆ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭವೂ ಅನುಕೂಲ. ಮಿತ್ರರಲ್ಲಿ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಹಸ್ತಾಕ್ಕೆ ತೊಂದರೆ ಕಡಮೆ. ತಾ. ೮, ೧೧, ೧೩, ೧೪ ಅನುಕೂಲ.

ತುಲಾ

ಪ್ರಕೃತಿ ಅನುಕೂಲ. ಆದರೆ ಸ್ತ್ರೀ ಸುಖದಲ್ಲಿ ವಿರಸ. ಮಕ್ಕಳಿಂದ ಮೇಲಿಂದ ಮೇಲೆ ಉಪಮರ್ದ. ಅಲ್ಲದೆ ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ತೊಂದರೆ ಹೆಚ್ಚೇ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆಯೂ ಕಡಮೆ. ಆದರೆ ಲಾಭ ಅನುಕೂಲ. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಹೊರಗಿನವರಿಗಿಂತ ಮನೆಯಲ್ಲಿಯ ಶತ್ರುಗಳ ಅಂಜಿಕೆ [illegible] ಪತ್ರವ್ಯವಹಾರ ಪ್ರವಾಸ ಮತ್ತು [illegible] ಸ್ವಾತಿಗೆ ತೊಂದರೆ ಕಡಮೆ. ತಾ. ೯, ೧೦, ೧೪ ಅನುಕೂಲ.

ವೃಶ್ಚಿಕ

ಪ್ರಕೃತಿ ಸಾಧಾರಣವೆ. ಹೆಂಡತಿ ಗೂಡ ಮೇಲಿಂದ ಮೇಲೆ ವಿರೋಧ. ಮಕ್ಕಳ ಮತ್ತು ಇತರ ಕೌಟುಂಬಿಕ ಸುಖ ಅನುಕೂಲ. ಸ್ಥಾವರದಲ್ಲಿ ಕೆಲ ಪ್ರತಿಕೂಲ ಮಾತುಗಳು ಆದರೆ ಜಂಗಮ ಸಂಗ್ರಹದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಎಲ್ಲ ಉತ್ತಮ. ಅಪಕೃತ್ಯಗಳಲ್ಲಿ ಮತ್ತು ವ್ಯಸನದಲ್ಲಿ ಬಹಳ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರ ಸುಖ ಅನುಕೂಲ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಅನುರಾಧೆಗೆ ತೊಂದರೆ ಕಡಮೆ. ತಾ. ೮, ೧೧, ೧೩ ಅನುಕೂಲ.

ಧನು

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಉಭಯತರಲ್ಲಿ ಮತೈಕ್ಯ ಕಡಮೆ. ಮಕ್ಕಳಲ್ಲಿ ಒಬ್ಬರ ಉತ್ಕರ್ಷ. ಆದರೆ ಮತ್ತೊಬ್ಬರ ಅಪಕರ್ಷ. ಸ್ಥಾವರದಲ್ಲಿ ಹೆಚ್ಚಳ. ಬಂಧುವರ್ಗದವರು ಅತ್ಯಂತ ತೊಂದರೆ ಕೊಡುವರು. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆಯ ಹೆಚ್ಚಳ. ಮತ್ತು ತುಂಬ ಲಾಭ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸಾದಿ ಕೆಲಸ ಹಿತಕರ. ಪೂರ್ವಾಷಾಢಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೮, ೯, ೧೦, ೧೪ ಅನುಕೂಲ.

ಮಕರ

ಪ್ರಕೃತಿ ಅನುಕೂಲ. ಆದರೆ ಹೆಂಡತಿ ಗೂಡ ಮೇಲಿಂದ ಮೇಲೆ ವಿರೋಧ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ತೊಂದರೆಯದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಉತ್ತಮವೆ. ಆದರೆ ಲಾಭದಲ್ಲಿ ಅಯುತ್ತ ಹೊತ್ತಿಗೆ ಗೊಂದಲ. ವೆಚ್ಚ ವಿಪರೀತ. ಆದರೆ ಅದರಲ್ಲಿ ಬಹಳ ವೆಚ್ಚ ಹಣ ಸತ್ಕೃತ್ಯದಲ್ಲಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಮಿತ್ರರಲ್ಲಿ ಕ್ಲೇಶ. ಪ್ರವಾಸಾದಿ ಕೆಲಸ ಸಾಮಾನ್ಯ ಅನುಕೂಲ. ಶ್ರವಣಾಕ್ಕೆ ತೊಂದರೆ ಕಡಮೆ. ತಾ. ೮, ೯, ೧೦ ಅನುಕೂಲ.

ಕುಂಭ

ಪ್ರಕೃತಿಗೆ ಬಹಳ ಕ್ಲೇಶ. ಮಕ್ಕಳಲ್ಲಿ ಕೆಲವರಿಗೆ ಕಾಯಿಲೆ ಆದರೆ ಉಳಿದವರಿಂದ ದುರ್ವರ್ತನವಾಗುವದರಿಂದ ಬಹಳ ವಿಷಾದ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭವೂ ಉತ್ತಮ. ಆದರೆ ಪ್ರತಿಷ್ಠೆ ಕಡಮೆ. ಮಿತ್ರ ಸುಖ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಶತ್ರುಗಳು ಗುಪ್ತ ರೀತಿಯಿಂದ ಅಭದ್ರ ಕೃತ್ಯಗಳಿಂದ ಉಪದ್ರವ ಕೊಡುವದು ಒಂದೇ ಸವನೆ ನಡೆಯುವದು. ಪ್ರವಾಸ ಅನುಕೂಲ. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರವೂ ತೊಂದರೆಯದು. ಶತತಾರಕೆಗೆ ತೊಂದರೆ ಕಡಮೆ, ತಾ. ೯, ೧೦, ೧೧, ೧೩ ಅನುಕೂಲ.

ಮೀನ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಪ್ರಿಯ ಮತ್ತು ಅಪ್ರಿಯರಾದ ಅತಿಥಿಗಳು ಒಂದೇ ಹೊತ್ತಿಗೆ ಬರುವದರಿಂದ ಬಹಳ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ನಿರರ್ಥಕ ವೆಚ್ಚ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆಯವಮಾನದಿಂದ ಸಿಕ್ಕುವ ಯಶಸ್ಸು ಬಹಳ ಪೊಳ್ಳು. ಮಿತ್ರತ್ವದಲ್ಲಿ ವಿರೋಧ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಉತ್ತರಾಭಾದ್ರಪದಕ್ಕೆ ತೊಂದರೆ ಕಡಮೆ. ತಾ. ೧೧, ೧೨, ೧೩, ೧೪ ಅನುಕೂಲ.

ಆಯುರ್ವೇದಕ್ಕಾದ ಹಾನಿ

ಮದ್ರಾಸು ಸರಕಾರವು ವೈದ್ಯರ ಬಗ್ಗೆ ಒಂದು ಕಾನೂನು ಹೊರಡಿಸಿದ್ದರಿಂದ ಬೇಸರಗೊಂಡ ದಕ್ಷಿಣ ಕನ್ನಡದ ಆಯುರ್ವೇದಾಭಿಮಾನಿಗಳೊಬ್ಬರು ಹೀಗೆ ಬರೆಯುತ್ತಾರೆ:—

ವೈದ್ಯಕೀಯ ವೃತ್ತಿಯನ್ನವಲಂಬಿಸಿದವರಲ್ಲಿ ಅಲೋಪೆಥಿಕ್ ಮತ್ತು ಆಯುರ್ವೇದೀಯರೆಂದು ೨ ವಿಧ. ಮೊದಲ ವರ್ಗದವರು ಸರಕಾರದ ಲೈಸೆನ್ಸಿನಿಂದ ಸರಕಾರದ ಮನ್ನಣೆ ಪಡೆದು ಈಗ ಔಷಧಾಲಯಗಳನ್ನು ನಡೆಸುತ್ತಿದ್ದಾರೆ. ಅವರದು ಸಂಪೂರ್ಣ ಪಾಶ್ಚಾತ್ಯ ಪದ್ಧತಿ. ಹಿಂದುಸ್ತಾನಕ್ಕೆ ಸಹಜವಾದ ಆಯುರ್ವೇದ ಪದ್ಧತಿಗೆ ಈ ವರೆಗೆ ಹೆಚ್ಚಿನ ಸರಕಾರೀ ಸಹಾಯ ದೊರೆಯದುದರಿಂದ ಅದು ಬಹಳ ಹಿಂದೆ ಬಿದ್ದಿದೆ. ಹಿಂದೆ ಬಿದ್ದ ಅದನ್ನು ಮುಂದಕ್ಕೆ ತರುವ ಯತ್ನವನ್ನು ಬಿಟ್ಟು ಮದ್ರಾಸು ಸರ್ಕಾರವು ಕೆಲವೊಂದು ಔಷಧ ಪ್ರಯೋಗ ಮತ್ತು ಇಂಜಕ್ಶನ್ ಮುಂತಾದವುಗಳಲ್ಲಿ ಆಯುರ್ವೇದೀಯರಿಗೆ ಜ್ಞಾನವಿರುವುದಿಲ್ಲವಾದುದರಿಂದ ಅವರು ಅವನ್ನು ಪ್ರಯೋಗಿಸಕೂಡದೆಂದು ಆಜ್ಞೆ ಮಾಡಿದ್ದಾರೆ. ಈ ನೊಂದ ಆಯುರ್ವೇದಾಭಿಮಾನಿಗಳ ಪ್ರಕಾರ ಒಂದು ವೇಳೆ ಆ ಸಲ್ಫನಿ ಲೀಮೈಡಿನಂತಹ ವಿಷೌಷಧಗಳನ್ನು ನಿಷೇಧಿಸುವದಕ್ಕಿಂತ ಆಯುರ್ವೇದ ಪದ್ಧತಿಯವರಿಗೆ ಅಂಥವುಗಳ ಪ್ರಯೋಗದ ಅರಿವನ್ನು ಕಲಿಸುವ ಅನುಕೂಲವನ್ನು ಕಲ್ಪಿಸಿಕೊಡುವುದು ಲೇಸಲ್ಲವೇ? ಅಲ್ಲದೆ, ಅಂತಹವೇ ಆದ ಶಂಖಪಾಷಾಣ, ಸರ್ಪವಿಷ, ವತ್ಸನಾಭಿ ಮುಂತಾದವುಗಳನ್ನು ಪ್ರಯೋಗಿಸುವ ಜ್ಞಾನ ಆಯುರ್ವೇದಿಯರಿಗೆ ಅಲೋಪೆಥಿಕ್ ವೈದ್ಯರಿಗಿಂತ ಚೆನ್ನಾಗಿ ತಿಳಿದಿರುವಾಗ ಇಂತಹ ನಿಷೇಧಾಜ್ಞೆಗಳು ಅಯುಕ್ತವಲ್ಲವೇ? — ಎಂದು.

ಅವರು, ಇಂಜಕ್ಷನ್ನಿನ ವ್ಯವಸ್ಥೆ ಕೂಡ ಆಯುರ್ವೇದದಲ್ಲಿ ಹೇಳಿದೆಯೆಂದೂ ಅದನ್ನು ಆಯುರ್ವೇದೀಯರು ಬಳಸಬಾರದೆಂಬುದರಲ್ಲಿ ಯಾವ ನ್ಯಾಯವೂ ಇಲ್ಲವೆಂದೂ ಅಭಿಪ್ರಾಯ ಪಡುತ್ತಾರೆ.

ಆಯುರ್ವೇದದ ಮಹತ್ವಕ್ಕೆ ಪಾಶ್ಚಾತ್ಯರು ಸಹ ಮನ್ನಣೆ ಯಿತ್ತಿದ್ದಾರೆ. ಒಮ್ಮೆ ಹಿಂದೀ ವೈದ್ಯ ಗ್ರಂಥವಾದ 'ಅಷ್ಟಾಂಗ ಹೃದಯ'ವನ್ನು [illegible]ನಿಯಲ್ಲಿ ವೈದ್ಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿಡಲಾಗಿದೆ. ಹೀಗಿರುವಾಗ ಆ ಪದ್ಧತಿಯನ್ನು ಆಧುನಿಕ ವಿಜ್ಞಾನದ ಸಹಾಯದಿಂದ ಸುಧಾರಿಸಲವಕಾಶ ಕಲ್ಪಿಸಿ ಕೊಡುವುದನ್ನು ಬಿಟ್ಟು ಈ ಪ್ರಕಾರ ಆಯುರ್ವೇದ ವೈದ್ಯರ ಮೇಲೆ ನಿರ್ಬಂಧ ಹೇರಿ ನಿರುತ್ಸಾಹಗೊಳಿಸುವುದು ಯುಕ್ತವಲ್ಲ ಎಂದು ಅಭಿಮಾನಿಗಳ ವಾದ.

ಪೂರ್ವ ಕಾಲದಲ್ಲಿ ಸನ್ಯಾಸಿಗೆ ಆಯುರ್ವೇದವನ್ನು ಆಧ್ಯಾತ್ಮ ಗುರುಗಳು ಉಪದೇಶಿಸುತ್ತಿದ್ದರು. ಅದರ ಜ್ಞಾನದಿಂದ ತನಗೊದಗಬಹುದಾದ ರೋಗ ರುಜೆಗಳನ್ನು ಗುಣಪಡಿಸಿಕೊಳ್ಳುವುದಲ್ಲದೆ ಲೌಕಿಕರಿಗೊದಗುವ ಅನೇಕ ತರದ ರೋಗಾದಿ ಆರ್ತತೆಗಳನ್ನು ಗುಣಪಡಿಸಿ ಲೋಕೋಪಕಾರ ಮಾಡಲು ಸನ್ಯಾಸಿಗೆ ಅವಕಾಶವುಂಟಾಗುತ್ತದೆ. ವಿಜ್ಞಾನದ ಪ್ರಕಾರ ಕೂಡ ಆಯಾ ಸ್ಥಳೀಯರಿಗೆ ಆಯಾ ಸ್ಥಳದಲ್ಲಿ ಬೆಳೆದ ಆಹಾರ ಸಾಮಗ್ರಿಗಳೂ ವೈದ್ಯಕೀಯ ಮೂಲಿಕೆಗಳೂ ಹಿತಕರವಲ್ಲದೆ ಅನ್ಯದೇಶ ವಸ್ತುಗಳು ಪಥ್ಯವಲ್ಲವೆಂದು ಹೇಳಲಾಗುತ್ತದೆ. ಹೀಗಿರುವಲ್ಲಿ ಸ್ವತಂತ್ರ ಭಾರತವು ಅಲೋಪೆಥಿಗೆ ಪ್ರೋತ್ಸಾಹಿಸಿದರೆ ನಮ್ಮ ಪ್ರಜೆಗಳ ಆರೋಗ್ಯವನ್ನು ಕಾಪಾಡುವುದರಲ್ಲಿ ಹಿಂದೆ ಬೀಳುವುದಲ್ಲದೆ ವಿದೇಶದ ಔಷಧಗಳಿಗಾಗಿ ಪ್ರತಿವರ್ಷ ಲೆಕ್ಕವಿಲ್ಲದಷ್ಟು ರೊಕ್ಕವನ್ನು ಪರದೇಶಗಳಿಗೆ ಕಳುಹುವ ಆರ್ಥಿಕ ನಷ್ಟಕ್ಕೂ ಗುರಿಯಾಗುವುದು. ಇದನ್ನರಿದು ನಾಡಿಗೆ ನಿಸರ್ಗದತ್ತವಾದ ಆಯುರ್ವೇದಕ್ಕೆ ಹೆಚ್ಚು ವೈಜ್ಞಾನಿಕ ಸಹಕಾರವನ್ನೊದಗಿಸಿಕೊಟ್ಟು ಅದರ ಮುನ್ನಡೆಯನ್ನು ಸಾಧಿಸಿ ತನ್ಮೂಲಕ ಜನಹಿತವನ್ನು ಸಾಧಿಸುವುದು ಭಾರತದ ಸರಕಾರಗಳ ಕರ್ತವ್ಯವೆಂದು ಸಾರಿ ಹೇಳುತ್ತೇವೆ.

ರಾಷ್ಟ್ರಗಳ ಸುರಕ್ಷಿತತೆಯು ಮಾತು ಬರಿಯ ಕಟ್ಟುಕತೆ

[ಮೊದಲನೆಯ ಪುಟದಿಂದ]

ಗುವ ಮಾತಲ್ಲ. ಭೂ ಜಲ ಮತ್ತು ವಾಯು ಪ್ರದೇಶಗಳ ಮೇಲೆ ನಮ್ಮ ಹಿಡಿತವಿರುವ ವರೆಗೆ ಅದು ಖಂಡಿತವಾಗಿಯೂ ಸಾಧ್ಯವಿಲ್ಲ, ಅಥವಾ ಅತೀವ ದುಃಸಾಧ್ಯದ ಕಾರ್ಯ. ಆದುದರಿಂದ ಅಮೇರಿಕಕ್ಕಿಂದಿರುವ ಸಮಸ್ಯೆಯೆಂದರೆ, ಪರಾಕ್ರಮಣದ್ದಲ್ಲ, ಕೇವಲ ದಾಳಿಯಿಂದ ರಕ್ಷಿಸಿಕೊಳ್ಳುವ ಯೋಜನೆಗೆ ಸಂಬಂಧಿಸಿದ್ದು.

ಯುದ್ಧದ ಕ್ರೂರ ಪರಿಣಾಮದಲ್ಲಿ ವ್ಯತ್ಯಾಸವಾಗಿಲ್ಲ

ಈ ರೀತಿ ವಿಚಾರ ಮಾಡಿದರೆ, ಭ್ರಾಂತಿನಿರಾಸವಾದರೆ, ಆಭಾಸದ ತೆರೆಯನ್ನು ತೆರೆದರೆ ಅಮೇರಿಕದ ಸಮಸ್ಯೆಯ ನಿಜವಾದ ಪರಿಚಯ ಉಂಟಾಗುವುದು. ಇದು ಪರಮಾಣು ಯುಗವೆಂಬುದು ನಿಜ. ಅದರ ವಿನಾಶಕತೆಯು ಭೀಕರವಿರುವುದೂ ಸಹಜ. ಆದರೆ ಯುದ್ಧದ ತತ್ವವು ಕೋಟಿ ವರುಷಗಳಿಂದ ಇಂದಿನ ವರೆಗೆ ಹಾಗೇ ಉಳಿದ್ದುಕೊಂಡು ಬಂದಿದೆ. ಅದೆಂದರೆ ನಿರ್ದಯತೆ. ವಿನಾಶದ ಪರಿಮಾಣದಲ್ಲಿ, ಪ್ರಕಾರದಲ್ಲಿ ವ್ಯತ್ಯಾಸವಿದ್ದರೂ ಕ್ರೌರ್ಯದಲ್ಲಿ ವ್ಯತ್ಯಾಸವಿಲ್ಲ. ಹಿಂದೆ ರೋಂ ನಗರವನ್ನು ಹಾಳ್ಗೆಡಹಿದ ಹ್ಯಾನಿಬಾಲ, ಇಂದು ಜರ್ಮನ್ ಸೈನ್ಯವನ್ನು ನಾಶ ಮಾಡಿದ ಐಸೆನ್ ಹಾವರ—ಇವರ ಪ್ರಜೆಗಳ ಮೇಲೂ ಸೈನ್ಯದ ಹಿಂದಿನ ಪ್ರದೇಶದ ಮೇಲೂ ಸೈನ್ಯ ಶಕ್ತಿಯನ್ನು ಪ್ರಯೋಗಿಸುವ ನೀತಿ ಒಂದೇ ಆಗಿದೆಯಲ್ಲವೆ? ಯುದ್ಧ ಸಾಧನಗಳು ಮಾರ್ಪಟ್ಟಿವೆಯಲ್ಲದೆ ಯುದ್ಧ ತತ್ವ ಮಾರ್ಪಟ್ಟಿಲ್ಲವೆಂಬುದಕ್ಕೆ ಬೇರೆ ಸಾಕ್ಷಿ ಬೇಕೆ? ಆದುದರಿಂದ ಮನುಷ್ಯ ಜಾತಿಗೆ ಶಾಂತಿ ಸಂಸ್ಕಾರ ಸಾಧಿಸಿದ ಹೊರತು ಯುದ್ಧ ನಿಲ್ಲದು; ಅಲ್ಲಿಯ ವರೆಗೆ ಸುರಕ್ಷಿತತೆಗಾಗಿ ಮಾಡುವ ಎಲ್ಲ ಸಿದ್ಧತೆಯೂ ನಿರರ್ಥಕವಾದುದು.

ಚಂದಾದಾರರಲ್ಲಿ ವಿನಂತಿ

—●—

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚ ಸಹಿತ (ಚಂದಾಹಣ ಮುಂಗಡ)

೧ ವರ್ಷಕ್ಕೆ	೬-೪-೦
೬ ತಿಂಗಳಿಗೆ	೩-೪-೦
೩ ,, ...	೧-೧೨-೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟದ ಪರವಾಗಿ ಹ. ರಾ. ಪುರೋಹಿತರವರಿಂದ ಮುದ್ರಿತವಾಗಿ ಪ್ರಕಟಿತವಾಯಿತು.